ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 27 ಸೋಮವಾರ 2023

₹4

ಸಂಪುಟ: 43 | ಸಂಚಿಕೆ: 336 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528, FAX: 0821–2496525

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ. ದೇವರಾಜ ಅರಸು ರಸ್ತೆ, Ph: 2428695

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

“ಡಾ. ಮಹದೇವಪ್ಪ ಎಂಬ ಮಾನವೀಯತೆಯ ಹೆಮ್ಮರ”

ಸಾಮಾಜಿಕ ನ್ಯಾಯ, ಸೈದ್ಧಾಂತಿಕ ಬದ್ಧತೆ ಮತ್ತು ಅಭಿವೃದ್ಧಿ ಕೆಲಸಗಳಿಗೆ ರೂಪಕ

ನಮ್ಮ ಡಾ.ಮಹದೇವಪ್ಪ



ಇವರ ಅವಿಶ್ರಮಿತ ಅಭಿವೃದ್ಧಿ ಕಾರ್ಯಗಳ ಪಕ್ಷಿ ನೋಟ ಹೀಗಿದೆ......

ಈಗಿನ ಕರ್ನಾಟಕದ ರಾಜಕಾರಣದಲ್ಲಿ ಜ್ಞಾನ, ಬದ್ಧತೆ, ಜನಪರ ಸಿದ್ಧಾಂತವನ್ನು ಇಟ್ಟುಕೊಂಡು ರಾಜಕಾರಣ ಮಾಡುತ್ತಿರುವ ಕೆಲವೇ ಕೆಲವು ನಾಯಕರುಗಳಲ್ಲಿ ಡಾ ಹೆಚ್ ಸಿ ಮಹದೇವಪ್ಪನವರು ಅತ್ಯಂತ ಪ್ರಮುಖರು. ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರದಲ್ಲಿ ಲೋಕೋಪಯೋಗಿ ಸಚಿವರಾಗಿ ಕರ್ನಾಟಕದ ಸಾರ್ವಜನಿಕ ಬದುಕಿನ ಇತಿಹಾಸದಲ್ಲಿ ದಾಖಲೆ ಪ್ರಮಾಣದ ಮೂಲ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸಿರುವ ಡಾ ಹೆಚ್ ಸಿ ಮಹದೇವಪ್ಪನವರು, 40 ಸಾವಿರ ಕಿಲೋ ಮೀಟರ್ ರಸ್ತೆಗಳನ್ನು ಅಭಿವೃದ್ಧಿ ಪಡಿಸಿದ್ದು ಕರ್ನಾಟಕವು ದೇಶದಲ್ಲೇ ಅತ್ಯುತ್ತಮ ಮೂಲಸೌಕರ್ಯಗಳನ್ನು ಅಭಿವೃದ್ಧಿ ಪಡಿಸಿದೆ ಎಂದು ವಿಶ್ವಬ್ಯಾಂಕ್ ನಿಂದ ಪ್ರಶಂಸೆಯನ್ನು ಪಡೆಯುವಂತೆ ಮಾಡಿದ್ದಾರೆ.

ಬರೀ ಕೋಮುದ್ವೇಷ ಹಾಗೂ ಹುಸಿ ಪ್ರಚಾರದ ಭರಾಟೆಗಳು ಅರ್ಥವಿಲ್ಲದೇ ಆರ್ಭಟಿಸುತ್ತಿರುವ ಹೊತ್ತಿನಲ್ಲಿ ಬುದ್ಧ, ಬಸವ ಹಾಗೂ ಬಾಬಾ ಸಾಹೇಬರ ನೆರಳಲ್ಲಿ ತಣ್ಣಗೇ ರಾಜ್ಯದ ಅಭಿವೃದ್ಧಿ ಕೆಲಸಗಳನ್ನು ಮಾಡಿ ಮುಗಿಸಿದ ಮಹದೇವಪ್ಪನವರು ಅಭಿವೃದ್ಧಿ ಕೆಲಸಗಳ ಮೂಲಕವೇ ರಾಜ್ಯದೊಳಗೆ ಕಾಂಗ್ರೆಸ್ ಪಕ್ಷದ ನೈತಿಕ ದನಿಯು ಬಲಗೊಳ್ಳಲು ಬಹುವಾಗಿ ಶ್ರಮಿಸಿದ್ದು ಈ ಅಭಿವೃದ್ಧಿ ಕೆಲಸಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ಜವಾಬ್ದಾರಿ ಕಾಂಗ್ರೆಸ್ ಮೇಲಿದೆ.

ಇತ್ತೀಚೆಗೆ ತಮ್ಮ ಸಹದ್ಯೋಗಿಗಳಾಗಿದ್ದ ಧೃವನಾರಾಯಣ್ ಅವರ ಅಗಲಿಕೆಯ ಸಂದರ್ಭದಲ್ಲಿ ಕೆಲವು ಕೆಟ್ಟ ಮನಸ್ಸುಗಳು ಸಾವಿನ ಸಮಯವನ್ನು ಬಳಸಿಕೊಂಡು ಅಪಪ್ರಚಾರ ನಡೆಸುವಾಗ ನೊಂದ ಕುಟುಂಬಕ್ಕೆ ಧೈರ್ಯ ತುಂಬಿ ಸಾರ್ವಜನಿಕ ಬದುಕಿಗೇ ಮಾದರಿ ಎನಿಸುವಂತಹ ಒಂದು ನಿರ್ಧಾರವನ್ನು ಕೈಗೊಂಡು ರಾಜಕಾರಣಕ್ಕಿಂತ ಮಾನವೀಯತೆ ಮೊದಲು ಎಂಬ ಸಂದೇಶವನ್ನು ಸಾರಿದ ಕಾಂಗ್ರೆಸ್ ಪಕ್ಷದ ನೈತಿಕತೆಯನ್ನು ರಾಜ್ಯದಲ್ಲೇ ಹೆಚ್ಚುವಂತೆ ಮಾಡಿದ್ದಾರೆ.

ಓರ್ವ ನಿಜವಾದ ಜನ ನಾಯಕರಿಗೆ ಮಾತ್ರವೇ ಇಂತಹ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯ. ಇದರಿಂದ ಕಾಂಗ್ರೆಸ್ ಮೇಲಿನ ನಂಬಿಕೆ ಹೆಚ್ಚಾಗಿದೆ ಎಂದು ಈ ರಾಜ್ಯದ ಬಹುತೇಕ ಪ್ರಜ್ಞಾವಂತ ಮನಸ್ಸುಗಳು ಮಾತನಾಡಿರುವುದು ಬಿ ರಾಚಯ್ಯನವರ ಗರಡಿಯಲ್ಲಿ ಪಳಗಿದ ಮಹದೇವಪ್ಪನವರ ಪ್ರಬುದ್ಧತೆಯನ್ನು ಮತ್ತು ಮಾನವೀಯ ವಿವೇಕವನ್ನು ತೋರಿಸುತ್ತದೆ.

ಡಾ ಹೆಚ್ ಸಿ ಮಹದೇವಪ್ಪನವರು ಕೇವಲ ಮಾನವೀಯ ವ್ಯಕ್ತಿತ್ವಕ್ಕೆ ತಮ್ಮನ್ನು ಸೀಮಿತಗೊಳಿಸಿಕೊಂಡು ರಾಜಕಾರಣ ಮಾಡುವವರಲ್ಲ. ತಮ್ಮ ದಿನ ನಿತ್ಯದ ಅಧ್ಯಯನ ಹಾಗೂ ಶಿಸ್ತಿನ ಬದುಕಿನ ಮೂಲಕ ರಾಜ್ಯದ ಜನರಿಗೆ ಯಾವ ರೀತಿಯಲ್ಲಿ ನೆರವಾಗಬಹುದು, ಏನೆಲ್ಲಾ ಅಭಿವೃದ್ಧಿ ಕೆಲಸಗಳನ್ನು ಮಾಡಿದರೆ ರಾಜ್ಯಕ್ಕೆ ಉಪಯುಕ್ತವಾಗುತ್ತದೆ ಮತ್ತು ಶೋಷಿತ ವರ್ಗಗಳಿಗೆ ಸಾಮಾಜಿಕ ನ್ಯಾಯ ಸಿಗಬೇಕಾದರೆ ಏನು ಮಾಡಬೇಕು ಎಂಬುದರ ಕುರಿತು ಬಹಳಷ್ಟು ವಿಷಯಗಳನ್ನು ತಿಳಿದುಕೊಂಡಿದ್ದಾರೆ. ಸರ್ವರನ್ನೂ ಸಮಾನವಾಗಿ ಒಳಗೊಳ್ಳುವ ಡಾ ಬಿ ಆರ್ ಅಂಬೇಡ್ಕರ್ ಅವರ ಆಶಯದ ದಿಕ್ಕಿನೆಡೆ ಕೆಲಸ ಮಾಡುವ ಮಹದೇವಪ್ಪನವರು ಬಹುತೇಕ ಎಲ್ಲಾ ಸಮುದಾಯಗಳಿಗೂ ಕೂಡಾ ನೆರವಾಗುವಂತೆ ಕೆಲಸವನ್ನು ಮಾಡುತ್ತಾರೆ ಎಂಬುದಕ್ಕೆ ಅವರು ಅಧಿಕಾರದ ಸಂದರ್ಭದಲ್ಲಿ ರೂಪಿಸಿದ ನೀತಿ ನಿಯಮಗಳು ಹಾಗೂ ಮಾಡಿರುವ ಅಭಿವೃದ್ಧಿ ಕೆಲಸಗಳೇ ಸಾಕ್ಷಿ.

ಇದರ ಜೊತೆಗೆ ತಾವು ಹಲವು ಬಾರಿ ಪ್ರತಿನಿಧಿಸಿದ ಟಿ ನರಸೀಪುರ ಕ್ಷೇತ್ರವನ್ನು ಇವರು ಅಭಿವೃದ್ಧಿ ಪಡಿಸಿದ ರೀತಿಯನ್ನು ನೋಡಿದರೆ ಆ ಕ್ಷೇತ್ರದ ಜನರ ಮೇಲೆ ಇವರಿಗೆ ಇರುವ ಕಾಳಜಿ ಎಂತದ್ದು ಎಂಬ ಸಂಗತಿಯು ನಮಗೆ ತಿಳಿಯುತ್ತದೆ. ಶಿಕ್ಷಣ, ಆರೋಗ್ಯ, ಕೃಷಿ, ಆಡಳಿತ, ಪ್ರವಾಸೋದ್ಯಮ ಮತ್ತು ಇನ್ನಿತರೆ ಎಲ್ಲಾ ಕ್ಷೇತ್ರಗಳಲ್ಲೂ ಅಭಿವೃದ್ಧಿಯ ಪರ್ವವನ್ನೇ ಹರಿಸಿರುವ ಮಹದೇವಪ್ಪನವರು ಸರ್ವಾಂಗೀಣ ಅಭಿವೃದ್ಧಿ ಎಂದರೆ ಏನು ಎಂಬ ಮಾತಿಗೆ ಅಕ್ಷರಶಃ ಪುರಾವೆಯನ್ನು ಒದಗಿಸಿದ್ದಾರೆ.


40 ವರ್ಷಗಳ ತಮ್ಮ ಸಾರ್ವಜನಿಕ ಜೀವನದಲ್ಲಿ ಎಂದಿಗೂ ಯಾರ ಬಗ್ಗೆಯೂ ವೈಯಕ್ತಿಯ ಟೀಕೆ ಮಾಡುವುದಾಗಲೀ, ಅಸಂವಿಧಾನಿಕವಾಗಿ ನಡೆದುಕೊಳ್ಳುವುದಾಗಲೀ ಮಾಡದ ಮಹದೇವಪ್ಪನವರು ದಲಿತ ಸಮುದಾಯಗಳು ನಂಬಿಕೊಳ್ಳಬಲ್ಲಂತಹ ಕರ್ನಾಟಕದ ಮೇರು ನಾಯಕರಾಗಿ ರೂಪುಗೊಂಡಿದ್ದಾರೆ.

ಕರ್ನಾಟಕದಲ್ಲಿ ಬಿ ರಾಚಯ್ಯ, ಕೆ ಹೆಚ್ ರಂಗನಾಥ್, ಬಿ ಬಸವಲಿಂಗಪ್ಪ, ಎನ್ ರಾಚಯ್ಯ ಅವರಂತಹ ಪ್ರಭಾವೀ ದಲಿತ ನಾಯಕರ ನಂತರದಲ್ಲಿ ಈ ಆಧುನಿಕ ಕಾಲವು ಕಾಣಬಹುದಾದ ಆ ಮಟ್ಟದ ನಾಯಕರೆಂದರೆ ಡಾ ಹೆಚ್ ಸಿ ಮಹದೇವಪ್ಪನವರು ಒಬ್ಬರೇ.


ಬಿಜೆಪಿಯ ಯಡಿಯೂರಪ್ಪನವರಿಂದ ಹಿಡಿದು, ಜೆಡಿಎಸ್ ನ ಕುಮಾರ ಸ್ವಾಮಿ, ರೇವಣ್ಣ, ಹೆಚ್ ಡಿ ದೇವೇಗೌಡರ ಆದಿಯಾಗಿ ಎಲ್ಲರೂ ಕೂಡಾ ರಾಜ್ಯದ ಅಭಿವೃದ್ಧಿ ವಿಷಯದಲ್ಲಿ ಮಹದೇವಪ್ಪನವರ ಪಕ್ಷಾತೀತವಾದ ನಿಲುವನ್ನು ಮೆಚ್ಚಿಕೊಳ್ಳುತ್ತಾರೆ. ಅಭಿವೃದ್ಧಿಯ ಕಾರಣಕ್ಕಾಗಿಯೇ ಎದುರಾಳಿ ಪಕ್ಷಗಳಿಂದಲೂ ಕೂಡಾ ಸನ್ಮಾನ ಸ್ವೀಕರಿಸಿದ ಏಕೈಕ ವ್ಯಕ್ತಿ ಎಂದರೆ ಅದು ಡಾ ಹೆಚ್ ಸಿ ಮಹದೇವಪ್ಪನವರು ಮಾತ್ರ ಎಂಬುದನ್ನು ಯಾರೂ ಮರೆಯುವಂತಿಲ್ಲ.

ಸಮಾಜದ ಸರ್ವಾಂಗೀಣ ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯದ ಕುರಿತಂತೆ ಯೋಚಿಸಬೇಕಾದ್ದು ಪ್ರತಿಯೊಬ್ಬ ಜನ ಪ್ರತಿನಿಧಿಯ ಕರ್ತವ್ಯ. ಅಂತಹ ಗುಣವಿದ್ದವನು ಮಾತ್ರವೇ ಸಾರ್ವಜನಿಕ ಜೀವನದಲ್ಲಿ ಇರಲು ಯೋಗ್ಯವಾದವನು ಎಂಬ ಬಿ ರಾಚಯ್ಯನವರ ಮಾತಿನ ಅನುಸಾರವಾಗಿ ಸಾಗುತ್ತಿರುವ ಮಹದೇವಪ್ಪನವರು ಎಲ್ಲಿಯೂ ಕೂಡಾ ತಮ್ಮ ವಿಚಾರ ಧಾರೆಗಳಲ್ಲಿ ರಾಜಿ ಆದವರಲ್ಲ. ಐದು ಬಾರಿ ಶಾಸಕರಾಗಿ ಮೂರು ಬಾರಿ ಸಚಿವರಾಗಿ ಕಾರ್ಯ ನಿರ್ವಹಿಸಿರುವ ಇವರು ತಮ್ಮ ರಾಜಕೀಯ ಗುರುಗಳ ಮಾತಿನಂತೆಯೇ ಜನರಿಗೆ ಉಪಯೋಗವಾಗುವ ಕೆಲಸವನ್ನು ಬದುಕಿನ ಉದ್ದಕ್ಕೂ ಮಾಡಿದ್ದಾರೆ, ಈಗಲೂ ಮಾಡುತ್ತಿದ್ದಾರೆ. ಇಂತಹ ಜವಾಬ್ದಾರಿಯುತ ನಾಯಕನ ಕೆಲಸಗಳನ್ನು ನಾವು ಅಷ್ಟೇ ಜವಾಬ್ದಾರಿಯಿಂದ ತಿಳಿದುಕೊಳ್ಳುವುದು ವ್ಯಕ್ತಿಯೊಬ್ಬರ ಬದ್ಧತೆಗೆ ನಾವು ಸಲ್ಲಿಸುವ ಗೌರವವಾಗಿದೆ.

ತ್ರಿವೇಣಿ ಸಂಗಮದ ತಟದಲ್ಲಿ ಇರುವ ಟಿ ನರಸೀಪುರ ಎಂಬ ಐತಿಹಾಸಿಕ ಸ್ಥಳವು ಈ ಹಿಂದಿನ ಪರಿಸ್ಥಿತಿಗಿಂತಲೂ ಬಹಳಷ್ಟು ಸುಧಾರಿಸಿದೆ. ಅದರಲ್ಲೂ ಕಳೆದ ಐದು ವರ್ಷಗಳ ಅವಧಿಯಲ್ಲಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದಲ್ಲಿ ಲೋಕೋಪಯೋಗಿ ಸಚಿವರಾಗಿದ್ದ ಡಾ ಹೆಚ್ ಸಿ ಮಹದೇವಪ್ಪನವರು ಕ್ಷೇತ್ರಕ್ಕೆ ತಂದಿರುವ ಸಾವಿರಾರು ಕೋಟಿ ಅನುದಾನವು ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿ ಆಗಲು ಕಾರಣವಾಗಿದೆ..



ತ್ರಿವೇಣಿ ಸಂಗಮದ ಅಭಿವೃದ್ಧಿ : ಟಿ.ನರಸೀಪುರವು ತ್ರಿವೇಣಿ ಸಂಗಮದ ನಾಡು ಎಂದೇ ಪ್ರಸಿದ್ಧವಾಗಿದ್ದು ಇದು ಸಾವಿರಾರು ಭಕ್ತರ ಬಹುದೊಡ್ಡ ಧಾರ್ಮಿಕ ಶ್ರದ್ಧಾ ಕೇಂದ್ರವೂ ಹೌದು. ಈ ಸ್ಥಳವನ್ನು ಡಾ ಹೆಚ್ ಸಿ ಮಹದೇವಪ್ಪನವರು ಅಭಿವೃದ್ಧಿ ಮಾಡಿರುವ ರೀತಿಯೇ ಅನನ್ಯವಾಗಿರುವಂತದ್ದು. ನದಿಗೆ ಇಳಿಯುವ ಭಕ್ತರಿಗೆ ಅನುಕೂಲವಾಗುವಂತೆ ಸುಸಜ್ಜಿತವಾದ ಮೆಟ್ಟಿಲುಗಳು, ತ್ರಿವೇಣಿ ಸಂಗಮದಲ್ಲಿ ಪ್ರವಾಹ ಪರಿಸ್ಥಿತಿ ಉಂಟಾಗದಂತೆ ನಿರ್ಮಿಸಿರುವ ತಡೆಗೋಡೆಯು ದೂರದೃಷ್ಟಿ ವ್ಯಕ್ತಿಯ ಕೈಯಲ್ಲಿ ಅಧಿಕಾರ ಇದ್ದರೆ ಆತನಿಂದ ಜನರಿಗೆ ಏನೆಲ್ಲಾ ಅನುಕೂಲ ಆಗುತ್ತದೆ ಎಂಬುದಕ್ಕೆ ಸಾಕ್ಷಿಯಾಗಿದೆ. ಈ ದಿನ ತ್ರಿವೇಣಿ ಸಂಗಮವು ಪ್ರವಾಸಿಗರ ಆಕರ್ಷಣೀಯ ಕೇಂದ್ರವೂ ಆಗಿದ್ದು ಈ ಸ್ಥಳದ ಅಭಿವೃದ್ಧಿಯ ಹಿಂದೆ ಡಾ ಮಹದೇವಪ್ಪನವರ ಬಹುದೊಡ್ಡ ಶ್ರಮವಿದೆ.



ತ್ರಿವೇಣಿ ಸಂಗಮದ ಸೇತುವೆ : ನದಿಯು ತುಂಬಿ ಹರಿದಾಗ ಅದಿನ್ಯಾವಾಗ ಬಿದ್ದು ಹೋಗುತ್ತದೋ ಎಂಬಂತೆ ಇದ್ದ ತ್ರಿವೇಣಿ ಸಂಗಮದ ಹಳೇ ಸೇತುವೆಗೆ ಪರ್ಯಾಯವಾಗಿ ಡಾ ಮಹದೇವಪ್ಲನವರು ಲೋಕೋಪಯೋಗಿ ಸಚಿವರಾಗಿದ್ದಾಗ ಹೊಸ ಸೇತುವೆಯನ್ನು ನಿರ್ಮಿಸಿದರು. ಬಹಳ ಅಚ್ಚುಕಟ್ಟಾಗಿ ನಿರ್ಮಾಣವಾಗಿರುವ ಈ ಸೇತುವೆಯ ಹಿಂದೆ ಮಹದೇವಪ್ಪನವರ ದೂರದೃಷ್ಟಿಯ ಫಲವಿದ್ದು ಮೈಸೂರು ಚಾಮರಾಜನಗರ ಜಿಲ್ಲೆಯ ಭಾಗದಲ್ಲಿ ಪ್ರತಿಷ್ಠಿತವಾದ ಸೇತುವೆ ಇದು ಎಂಬ ಖ್ಯಾತಿ ಇದೆ. ತ್ರಿವೇಣಿ ಸಂಗಮಕ್ಕೆ ಅಡ್ಡಲಾಗಿ ಕಟ್ಟಲಾದ ಈ ಸೇತುವೆಗಳು ನಿಜಕ್ಕೂ ಜನರ ಉಪಯೋಗಕ್ಕೆ ಪೂರಕವಾದ ಟಿ ನರಸೀಪುರದ ಅಭಿವೃದ್ಧಿಯನ್ನು ಸಾರಿ ಹೇಳುತ್ತದೆ.



ಭೈರಾಪುರದ ಮಹಿಳಾ ಕಾಲೇಜು : ಮಹಾನಗರದ ಕಾಲೇಜಿನ ಕಟ್ಟಡಗಳೂ ಕೂಡಾ ನಾಚುವಂತೆ ಇರುವ ಭೈರಾಪುರದ ಮಹಿಳಾ ಪದವಿ ಕಾಲೇಜಿನ ಕಟ್ಟಡವು ನಿಜಕ್ಕೂ ಮಹದೇವಪ್ಪನವರ ಕಾಲದ ಅದ್ಭುತ ಸಾಧನೆಗಳಲ್ಲಿ ಒಂದು. ಮಹಿಳಾ ಶಿಕ್ಷಣದ ಕಾಳಜಿಯೇ ಮೈವೆತ್ತಂತೆ ಇರುವ ಈ ಕಟ್ಟಡವು ಮಹಿಳೆಯರ ಶಕ್ತಿ ದೇಶದ ಶಕ್ತಿ ಎಂಬ ಕಾಂಗ್ರೆಸ್ ನ ನಿಲುವುಗಳಿಗೆ ಪೂರಕವಾಗಿ ನಿರ್ಮಾಣಗೊಂಡಿದೆ. ಅಂದಹಾಗೆ ಈ ಕಾಲೇಜನ್ನು ಶಿಕ್ಷಣ ವಲಯದಲ್ಲಿ ಆಸಕ್ತಿ ಇರುವ ಎಲ್ಲರೂ ಒಮ್ಮೆ ನೋಡಿಕೊಂಡು ಬರಬೇಕು.

ಗುಂಜಾ ನರಸಿಂಹಸ್ವಾಮಿ ದೇವಾಲಯದ ಅಭಿವೃದ್ಧಿ ಪಾರಂಪರಿಕ ಧಾರ್ಮಿಕ ಕೇಂದ್ರವಾದ ಗುಂಜಾ ನರಸಿಂಹ ಸ್ವಾಮಿ ದೇವಾಲಯ ಮತ್ತದರ ಆವರಣದ ಅಭಿವೃದ್ಧಿಗೆ ಡಾ ಮಹದೇವಪ್ಪನವರ ಕೊಡುಗೆ ಅಪಾರವಾದದ್ದು. ಸಾವಿರಾರು ಜನ ಭಕ್ತಾದಿಗಳು ಇರುವ ಈ ದೇವಾಲಯವು ಈಗ ಒಂದು ರೀತಿಯ ಪಾರಂಪರಿಕವಾದ ಸ್ವರೂಪವನ್ನು ಪಡೆದಿದೆ. ದೇವಸ್ಥಾನದ ಆವರಣದಲ್ಲಿ ಸರಿಯಾದ ನೆಲಹಾಸು, ಸುಸಜ್ಜಿತವಾದ ಗೇಟ್ ಗಳು ಮತ್ತು ಬೃಹತ್ ಆಚರಣೆಯ ಸಂದರ್ಭದಲ್ಲಿ ಜನರು ಒಂದೆಡೆ ಸೇರಲು ವಿಶಾಲವಾದ ಆವರಣವನ್ನು ನಿರ್ಮಿಸಲಾಗಿದ್ದು ಧಾರ್ಮಿಕ ಹಕ್ಕುಗಳನ್ನು ಗೌರವಿಸುವ ಡಾ ಮಹದೇವಪ್ಪನವರ ಪೂರ್ವಾಗ್ರಹವಿಲ್ಲದ ಸಂವಿಧಾನಾತ್ಮಕ ಮೌಲ್ಯಗಳ ಪ್ರೀತಿ ಇಲ್ಲಿ ವ್ಯಕ್ತವಾಗುತ್ತದೆ. ಗುಂಜಾ ನರಸಿಂಹ ಸ್ವಾಮಿ ದೇವಾಲಯವು ಈ ಭಾಗದ ಹೆಸರಾಂತ ದೇವಾಲಯಗಳಲ್ಲಿ ಒಂದಾಗಿದೆ.



ಸರ್ಕಾರಿ ಬಸ್ ನಿಲ್ದಾಣ : ಟಿ ನರಸೀಪುರ ಪಟ್ಟಣದಲ್ಲಿ ಡಾ ಹೆಚ್ ಸಿ ಮಹದೇವಪ್ಪನವರ ಕಾಲದಲ್ಲಿ ನಿರ್ಮಾಣಗೊಂಡಿರುವ 2 ಕೋಟಿ ವೆಚ್ಚದ ಕೆಎಸ್ ಆರ್ ಟಿಸಿ ಬಸ್ ನಿಲ್ದಾಣವು ಅತ್ಯಂತ ಉಪಯುಕ್ತವಾದ ಅಭಿವೃದ್ಧಿ ಕೆಲಸಗಳಲ್ಲಿ ಒಂದಾಗಿದೆ. ತಾಲ್ಲೂಕು ಕೇಂದ್ರದ ಮೆರುಗನ್ನು ಹೆಚ್ಚಿಸಿರುವ ಈ ಬಸ್ ನಿಲ್ದಾಣವು ವ್ಯವಸ್ಥಿತವಾಗಿ ನಿರ್ಮಾಣಗೊಂಡಿದ್ದು ಇದು ಕಾಂಗ್ರೆಸ್ ಸರ್ಕಾರದ ಅವಧಿಯಲ್ಲೇ ಉದ್ಘಾಟನೆಗೊಂಡಿತು ಎಂಬುದು ವಿಶೇಷ.



ತಾಲ್ಲೂಕು ಕಚೇರಿ ಹಾಗೂ ಪುರಸಭೆ ನೂತನ ಕಟ್ಟಡ ನಿರ್ಮಾಣ : ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಲೋಕೋಪಯೋಗಿ ಸಚಿವರಾಗಿದ್ದ ಡಾ ಮಹದೇವಪ್ಪನವರು ಸ್ಥಳೀಯ ಆಡಳಿತದ ಪ್ರಾಮುಖ್ಯತೆಯನ್ನು ಚೆನ್ನಾಗಿ ಅರಿತವರು. ರಾಜೀವ್ ಗಾಂಧಿಯವರ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ನಂಬಿಕೆ ಇಟ್ಟಿರುವ ಇವರು ಟಿ ನರಸೀಪುರ ಕ್ಷೇತ್ರದ ಸ್ಥಳೀಯ ಆಡಳಿತವು ಉತ್ತಮ ಗುಣಮಟ್ಟದಲ್ಲಿ ಇರಬೇಕು ಎಂಬ ಕಾರಣಕ್ಕೆ ಅತ್ಯುತ್ತಮವಾದ ತಾಲ್ಲೂಕು ಕಚೇರಿ ಮತ್ತು ಪುರಸಭಾ ಕಟ್ಟಡವನ್ನು ನಿರ್ಮಿಸಿದ್ದಾರೆ. ಈ ಪೈಕಿ ತಾಲ್ಲೂಕು ಕಚೇರಿಯ ಮುಂಭಾಗದಲ್ಲಿರುವ ಉದ್ಯಾನದ ಒಳಗಿನ ಬಾಬಾ ಸಾಹೇಬರ ಪ್ರತಿಮೆಯಂತೂ ಬಹಳ ಸೊಗಸಾಗಿದೆ.

24/7 ಕುಡಿಯುವ ನೀರಿನ ಯೋಜನೆ: ಟಿ ನರಸೀಪುರ ಕ್ಷೇತ್ರದ ಬನ್ನೂರು ಹೋಬಳಿಯ ಜನರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಸುಮಾರು 24 ಕೋಟಿ ರೂಪಾಯಿಗಳ ವೆಚ್ಚದಲ್ಲಿ 24 ಗಂಟೆಗಳ ಕಾಲ ಕುಡಿಯುವ ನೀರಿನ ಪೂರೈಕೆ ವ್ಯವಸ್ಥೆಯನ್ನು ಮಾಡಲಾಗಿದೆ. ಈ ಕಾಮಗಾರಿಯು ಇವರ ಜೀಪಪರ ನಿಲುವುಗಳ ಮುಂದುವರಿಕೆಯಾಗಿದೆ.

ಬನ್ನೂರು ಜನತೆಗೆ ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿನ ಬರ ನೀಗಿಸಲು ಕಾವೇರಿ ನದಿಗೆ ಹೊಡ್ಡು ಹಾಕುವ ಸಲುವಾಗಿ 2 ಕೋಟಿ ರೂಪಾಯಿಗಳ ಅನುದಾನವನ್ನು ತಂದಿರುವ ಇವರು ಕುಡಿಯುವ ನೀರಿನ ವಿಷಯಕ್ಕೆ ಸಂಬಂಧಿಸಿದಂತೆ ಅಪಾರವಾದ ಕಾಳಜಿಯನ್ನು ಹೊಂದಿದ್ದಾರೆ.



ಬೆಟ್ಟಹಳ್ಳಿ ಮತ್ತು ಹೊರಳಹಳ್ಳಿಯ ಮೊರಾರ್ಜಿ ಶಾಲೆ : ಬಡತನದ ಪರಿಸ್ಥಿತಿಯಲ್ಲಿ ಬದುಕು ಸಾಗಿಸುವ ಕುಟುಂಬದ ಮಕ್ಕಳಿಗೆ ಉತ್ತಮ ಶಿಕ್ಷಣವು ದೊರಕಬೇಕು ಎಂಬ ಉದ್ದೇಶದಿಂದ ಡಾ ಮಹದೇವಪ್ಪನವರು ತಮ್ಮ ಅಧಿಕಾರವಧಿಯಲ್ಲಿ ಮುಡುಕುತೊರೆ ಬಳಿಯ ಟಿ ಬೆಟ್ಟಹಳ್ಳಿಯಲ್ಲಿ ಸುಮಾರು ಐದು ಕೋಟಿ ರೂಪಾಯಿಗಳ ವೆಚ್ಚದಲ್ಲಿ ಮೊರಾರ್ಜಿ ಶಾಲೆಯನ್ನು ನಿರ್ಮಿಸಿದ್ದಾರೆ. ಬಹಳ ವಿಶಾಲವಾಗಿರುವ ಈ ಶಾಲೆಯು ಬುಡಕಟ್ಟು ವರ್ಗದ ಮಕ್ಕಳಿಗೆ ವರದಾನವಾಗಿದೆ. ಇದೇ ರೀತಿಯಲ್ಲಿ ಹೊರಳಹಳ್ಳಿಯ ಬಳಿಯಲ್ಲೂ ಕೂಡಾ ಮೊರಾರ್ಜಿ ಶಾಲೆಯು ಇದ್ದು ಇಲ್ಲೂ ಕೂಡಾ ನೂರಾರು ಮಕ್ಕಳು ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುತ್ತಿದ್ದಾರೆ.



ತಲಕಾಡಿನ ಬಳಿಯ ಕಾಲೇಜುಗಳು : ಹೋಬಳಿ ಮಟ್ಟದಲ್ಲಿ ಯುವ ಜನರ ಸರ್ವಾಂಗೀಣ ಶೈಕ್ಷಣಿಕ ಅಭಿವೃದ್ಧಿಗಾಗಿ ಡಾ ಮಹದೇವಪ್ಪನವರು ಅಲ್ಲಿ ಡಿಗ್ರಿ ಕಾಲೇಜು ಮತ್ತು ಐಟಿಐ ಕಾಲೇಜನ್ನು ನಿರ್ಮಿಸಿದ್ದಾರೆ. ಮೂಲ ಸೌಕರ್ಯದ ಗುಣ ಮಟ್ಟದ ವಿಚಾರದಲ್ಲಿ ಎಲ್ಲಿಯೂ ರಾಜಿಯಾಗದ ಇವರ ಕಾಲದಲ್ಲಿ ನಿರ್ಮಾಣಗೊಂಡ ಈ ಕಾಲೇಜುಗಳ ನೂರಾರು ವಿದ್ಯಾರ್ಥಿಗಳಿಗೆ ದಾರಿ ದೀಪವಾಗಿವೆ.

ಟಿ ನರಸೀಪುರದ ಡಿಗ್ರಿ ಕಾಲೇಜು : ತಲಕಾಡು ರಸ್ತೆಯ ಆರಂಭದಲ್ಲೇ ನಿರ್ಮಾಣವಾಗಿರುವ ಸುಸಜ್ಜಿತವಾದ ಸರ್ಕಾರಿ ಡಿಗ್ರಿ ಕಾಲೇಜುಗಳು, ಬಾಬಾ ಸಾಹೇಬರ ಅಭಿಮಾನಿಯಾದ ಡಾ ಮಹದೇವಪ್ಪನವರ ಶೈಕ್ಷಣಿಕ ಕಾಳಜಿ ಎಂತದ್ದು ಎಂಬುದನ್ನು ಸಾರಿ ಹೇಳುತ್ತದೆ. 'ಶಿಕ್ಷಣವು ಹುಲಿಯ ಹಾಲಿದ್ದಂತೆ, ಅದನ್ನು ಕುಡಿದವರು ಘರ್ಜಿಸಲೇಬೇಕು' ಎಂಬ ಬಾಬಾ ಸಾಹೇಬರ ಮಾತು ಡಾ ಮಹದೇವಪ್ಪನವರಿಗೆ ಸದಾ ಪ್ರೇರಣೆ ಆಗಿದ್ದು ಇಲ್ಲಿಂದ ದೊಡ್ಡ ವ್ಯಕ್ತಿತ್ವಗಳು ಮೂಡಿಬರಬೇಕೆಂಬುದು ಅವರ ಬಹುದೊಡ್ಡ ಆಶಯವಾಗಿದೆ.



ಸೋಸಲೆ ಹೋಬಳಿಯ ಆದರ್ಶ ಶಾಲೆ : ಶಿಕ್ಷಣದ ಮಹತ್ವವನ್ನು ಚೆನ್ನಾಗಿ ಅರಿತಿರುವ ಮಹದೇವಪ್ಪನವರು ಸೋಸಲೆ ಹೋಬಳಿಯಲ್ಲಿ ಸುಮಾರು 5 ಕೋಟಿ ರೂಪಾಯಿಗಳ ಅನುದಾನ ತಂದು ಆದರ್ಶ ಶಾಲೆಯನ್ನು ನಿರ್ಮಿಸಿದ್ದು ಇದು ಈ ಭಾಗದ ಪ್ರತಿಷ್ಠಿತ ಶಾಲೆಗಳಲ್ಲಿ ಒಂದಾಗಿದೆ.

ಸಾರ್ವಜನಿಕ ಜೀವನಕ್ಕೆ ಕಳಶಪ್ರಾಯ

ಕೇವಲ ಟಿ ನರಸೀಪುರ ಕ್ಷೇತ್ರ ಮಾತ್ರವಲ್ಲದೇ ಇಡೀ ಕರ್ನಾಟಕ ರಾಜ್ಯದಲ್ಲೇ ಅತಿ ದೊಡ್ಡ ಪ್ರಮಾಣದ ಮೂಲ ಸೌಕರ್ಯವನ್ನು ಅಭಿವೃದ್ಧಿಪಡಿಸಿರುವ ಡಾ ಹೆಚ್ ಸಿ ಮಹದೇವಪ್ಪನವರು ಸಾರ್ವಜನಿಕ ಜೀವನಕ್ಕೆ ಕಳಶಪ್ರಾಯವಿದ್ದಂತೆ. ಅವರಿಗೆ ಇರುವಂತಹ ವಿಷಯ ಜ್ಞಾನ, ಸಂವಿಧಾನದ ಕುರಿತಂತೆ ಇರುವ ಅವರ ಸ್ಪಷ್ಟತೆ, ಎಂತಹ ನೋವಿನ ಸಂದರ್ಭದಲ್ಲೂ ಎದೆಗುಂದದೇ ಮುನ್ನಡೆಯುವ ಮುತ್ಸದ್ಧಿತನವು ಡಾ ಮಹದೇವಪ್ಪನವರನ್ನು ರಾಜ್ಯದೊಳಗೆ ವಿಭಿನ್ನವಾದ ವ್ಯಕ್ತಿಯನ್ನಾಗಿ ನಿಲ್ಲಿಸಿದೆ.

ಟಿ ನರಸೀಪುರ ಕ್ಷೇತ್ರದ ಪ್ರತಿ ಗ್ರಾಮಗಳೂ ಕೂಡಾ ಮಹದೇವಪ್ಪನವರ ಅಭಿವೃದ್ಧಿಗೆ ಹತ್ತಾರು ಸಾಕ್ಷಿಯನ್ನು ಒದಗಿಸುತ್ತವೆ. ಇದರ ಜೊತೆಗೆ ಕ್ಷೇತ್ರವೊಂದರಲ್ಲಿ ಎಲ್ಲರನ್ನೂ ವಿಶ್ವಾಸಕ್ಕೆ ಪಡೆದು ಯಾವುದೇ ಕೋಮು ಗಲಭೆಗಳು ಇಲ್ಲದಂತೆ ಸಂವಿಧಾನವು ನಮಗೆ ನೀಡಿರುವ ಶಕ್ತಿಯನ್ನು ಬಳಸಿಕೊಂಡು ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಿದ ಇಂತಹ ನಾಯಕರು ಈ ಕ್ಷಣದ ರಾಜಕೀಯಕ್ಕೆ ಅಗತ್ಯವಾಗಿ ಬೇಕಾದ ಶಕ್ತಿ ಎಂಬುದನ್ನು ಎಲ್ಲರೂ ಅರಿಯೋಣ.

ಅಧಿಕಾರ ಎಂದರೆ ಜನ ಸಾಮಾನ್ಯರಿಗೆ ಒಳಿತು ಮಾಡಲು ದೊರೆತಿರುವ ಅಪೂರ್ವವಾದ ಅವಕಾಶ ಎಂದು ಅರಿತಿರುವ ಮಹದೇವಪ್ಪನವರು ಅಧಿಕಾರ ಎಂಬ ಪದದ ಗೌರವವನ್ನು ಹೆಚ್ಚಳ ಮಾಡಿರುತ್ತಾರೆ. ಚುನಾವಣೆ ಸೋಲಲಿ ಗೆಲ್ಲಲಿ, ಒಂದು ಸಿದ್ಧಾಂತಕ್ಕೆ ಬದ್ಧರಾಗಿರುವ ಮಹದೇವಪ್ಪನವರು ಮಾನವೀಯತೆ ಮೊದಲು ರಾಜಕಾರಣ ನಂತರ ಎಂಬ ಮಾತುಗಳನ್ನು ಆಡಿದ ಮಹದೇವಪ್ಪನವರು ಅಭಿವೃದ್ಧಿ, ಬದ್ಧತೆ ಹಾಗೂ ತಮ್ಮ ಜ್ಞಾನದ ಕಾರಣಕ್ಕೆ ಕರ್ನಾಟಕ ರಾಜಕೀಯ ಇತಿಹಾಸದಲ್ಲಿ ಶಾಶ್ವತವಾಗಿ ಉಳಿಯುತ್ತಾರೆ. ಇಂತಹ ನಾಯಕರನ್ನು ಗೆಲ್ಲಿಸಿಕೊಂಡು ಕ್ಷೇತ್ರದ ಅಭಿವೃದ್ಧಿಗೆ ಕಾರಣವಾಗಬೇಕಾದ್ದು ಜನ ಸಾಮಾನ್ಯರ ಜವಾಬ್ದಾರಿಯೇ ಆಗಿದೆ.

ದ್ವಿಪಥ ರಸ್ತೆ : ರಸ್ತೆ ನಿರ್ಮಾಣಕ್ಕೆ ಹೆಸರಾಗಿರುವ ಇವರ ಅಧಿಕಾರವಧಿಯಲ್ಲಿ ಟಿ ನರಸೀಪುರ ಕ್ಷೇತ್ರದ ಬನ್ನೂರು ಹೋಬಳಿಯಲ್ಲಿ ಬನ್ನೂರು ಚಾಮನಹಳ್ಳಿಯಿಂದ ಇಂದಿರಾ ಚಿತ್ರಮಂದಿರ ವರೆಗೆ ದ್ವಿಪಥ ರಸ್ತೆಯನ್ನು ನಿರ್ಮಾಣ ಮಾಡಲಾಗಿದ್ದು ಇದು ಎಲ್ಲಾ ಸಾರ್ವಜನಿಕರಿಗೆ ಉಪಯುಕ್ತವಾದ ಅಭಿವೃದ್ಧಿಯ ಕೆಲಸಗಳಲ್ಲಿ ಒಂದಾಗಿದೆ.



ರಸ್ತೆಗಳ ನಿರ್ಮಾಣ : ರಸ್ತೆಗಳ ರಾಜ ಎಂದೇ ಹೆಸರು ಪಡೆದಿರುವ ಡಾ ಮಹದೇವಪ್ಪನವರು, ತಮ್ಮ ಅಧಿಕಾರದ ಅವಧಿಯಲ್ಲಿ ಕರ್ನಾಟಕದಲ್ಲಿ ಸುಮಾರು 40 ಸಾವಿರ ಕಿಲೋ ಮೀಟರ್ ರಸ್ತೆಗಳನ್ನು ಅಭಿವೃದ್ಧಿಪಡಿಸಿದ್ದಾರೆ. ಇನ್ನು ಟಿ ನರಸೀಪುರ ಹಾಗೂ ಬನ್ನೂರು ಹೋಬಳಿಯ ಮೂಲೆ ಮೂಲೆಗೂ ಕೂಡಾ ಉತ್ತಮ ರಸ್ತೆಯ ಸಂಪರ್ಕವನ್ನು ಕಲ್ಪಿಸಿರುವ ಇವರು ನರಸೀಪುರ–ನಂಜನಗೂಡು ರಸ್ತೆ, ನರಸೀಪುರ–ವರುಣಾ–ಮೈಸೂರು ರಸ್ತೆ, ಪ್ರತಿ ಊರಿಗೂ ಸಂಪರ್ಕ ರಸ್ತೆಯನ್ನು ನಿರ್ಮಿಸಿದ್ದಾರೆ. ಕರ್ನಾಟಕದ ರಾಜ್ಯದ ಇತಿಹಾಸದಲ್ಲೇ ಮೊಟ್ಟ ಮೊದಲ ಬಾರಿಗೆ ರೈತರ ಹೊಲಗಳಿಗೂ ಕೂಡಾ ರಸ್ತೆ ಸಂಪರ್ಕವನ್ನು ನಿರ್ಮಿಸಿಕೊಟ್ಟ ಹೆಗ್ಗಳಿಕೆ ಇವರದ್ದು.

ಮಲಿಯೂರಿನಲ್ಲಿ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ :

ಉತ್ತಮ ಚಿಕಿತ್ಸೆಯು ದೂರದ ಬೆಟ್ಟದಂತೆ ಆಗಬಾರದು ಎನ್ನುವ ಉದ್ದೇಶಕ್ಕಾಗಿ ಬನ್ನೂರು ಹೋಬಳಿಯ ಮಲಿಯೂರಿನ ಬಳಿ ಸುಮಾರು 8 ಕೋಟಿ ವೆಚ್ಚದಲ್ಲಿ ಡಾ ಮಹದೇವಪ್ಪನವರು ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯನ್ನು ನಿರ್ಮಿಸಿದ್ದು ಇದು ನಿಜಕ್ಕೂ ಕೂಡಾ ಮಾನವೀಯ ನಾಯಕರ ಅಭಿವೃದ್ಧಿಯ ಪರ್ವಕ್ಕೆ ಸಿಕ್ಕ ಬಹುದೊಡ್ಡ ಉದಾಹರಣೆ ಎನ್ನಬಹುದಾಗಿದೆ. ತಾಯಿ ಮಕ್ಕಳ ಆರೋಗ್ಯಕ್ಕಾಗಿ ಚಿಂತಿಸುವ ಇಂತಹ ನಾಯಕನಿಗೆ ತಾಯಂದಿರ ಬಲವೂ ಕೂಡಾ ಶ್ರೀ ರಕ್ಷೆಯಾಗಿದೆ.

ಬಡವರಿಗೆ ಮನೆ ಮತ್ತು ಪೌರ ಕಾರ್ಮಿಕರಿಗೆ ವಸತಿ ಸೌಲಭ್ಯ : ಟಿ ನರಸೀಪುರ ಹಾಗೂ ಬನ್ನೂರು ಹೋಬಳಿಯ ವ್ಯಾಪ್ತಿಯಲ್ಲಿ ಬಡವರಿಗೆ ನೂರಾರು ಮನೆಗಳನ್ನು ನಿರ್ಮಿಸಿಕೊಟ್ಟಿರುವ ಮಹದೇವಪ್ಪನವರು ಬನ್ನೂರು ಬಳಿಯಲ್ಲಿ ಪೌರ ಕಾರ್ಮಿಕರಿಗೆ ಸುಸಜ್ಜಿತವಾದ ವಸತಿ ಗೃಹಗಳನ್ನು ನಿರ್ಮಿಸಿಕೊಟ್ಟಿದ್ದು ಇದು ಶ್ರಮಿಕ ವರ್ಗವನ್ನು ಗೌರವಿಸುವ ಇವರ ಸಾಮಾಜಿಕ ನ್ಯಾಯದ ಬದ್ಧತೆಗೆ ಹಿಡಿದ ಕನ್ನಡಿಯಾಗಿದೆ.

ಸಮುದಾಯ ಭವನಗಳು : ಪಂಚಾಯಿತಿ ಮಟ್ಟದ ಗ್ರಾಮಗಳಲ್ಲಿ ವಾಸವಿರುವ ಎಲ್ಲಾ ಸಮುದಾಯಗಳ ಹಿತದೃಷ್ಟಿಯನ್ನು ಗಮನದಲ್ಲಿ ಇಟ್ಟುಕೊಂಡು ಯಾರಿಗೂ ಬೇಧವೆಣಿಸದೇ ಎಲ್ಲ ಸಮುದಾಯಿಗಳಿಗೂ ಕೂಡಾ ಸಮುದಾಯ ಭವನವನ್ನು ನಿರ್ಮಿಸುವ ಕೆಲಸವನ್ನು ಇವರು ಮಾಡಿದ್ದಾರೆ. ಈ ಪೈಕಿ ಭಗೀರಥ ಭವನ, ಬಸವ ಭವನ, ವಾಲ್ಮೀಕಿ ಭವನ, ಅಂಬೇಡ್ಕರ್ ಭವನ, ಬಾಬು ಜಗಜೀವನ್ ರಾಂ ಭವನದ ಆದಿಯಾಗಿ ಬಹುತೇಕ ಎಲ್ಲಾ ಸಮುದಾಯಗಳ ಹಿತರಕ್ಷಣೆಗಾಗಿ ಸದಾ ಮುಂದಿರುವ ಇವರು ಸಾಮಾಜಿಕ ನ್ಯಾಯವನ್ನು ಸಾಕಾರಗೊಳಿಸಲು ಶ್ರಮಿಸುತ್ತಿದ್ದಾರೆ.

ಬನ್ನೂರಿನ ನದಿ ಸೇತುವೆ : ಬನ್ನೂರು ಪಟ್ಟಣದ ಬಹುದಿನಗಳ ಬೇಡಿಕೆಯಾಗಿದ್ದ ನದಿ ಸೇತುವೆಯು ಡಾ ಮಹದೇವಪ್ಪನವರ ಕಾಲದಲ್ಲಿ ಮಂಜೂರಾಯಿತು. ಸುಮಾರು 33 ಕೋಟಿ ವೆಚ್ಚದ ಈ ಸೇತುವೆಯು ಇನ್ನೂ ನಿರ್ಮಾಣದ ಹಂತದಲ್ಲಿ ಇದ್ದು ಡಾ ಹೆಚ್ ಸಿ ಮಹದೇವಪ್ಪನವರೇ ಬಂದು ಇದನ್ನು ಉದ್ಘಾಟಿಸುತ್ತಾರೆ ಎಂದು ಬನ್ನೂರಿನ ಜನರು ಮಾತನಾಡಿಕೊಳ್ಳುತ್ತಿದ್ದಾರೆ.

ಬನ್ನೂರು ಮುಡುಕುತೊರೆ ಚಾನಲ್ ಅಭಿವೃದ್ಧಿ : ಟಿ ನರಸೀಪುರ ಹಾಗೂ ಬನ್ನೂರು ಹೋಬಳಿಯ ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಮಹದೇವಪ್ಪನವರ ಕಾಲದಲ್ಲಿ ಸುಮಾರು 38 ಕೋಟಿ ರೂಪಾಯಿಗಳ ಅನುದಾನದಲ್ಲಿ ಬನ್ನೂರು–ಮುಡುಕುತೊರೆ ಚಾನಲ್ ಅನ್ನು ಅಭಿವೃದ್ಧಿಪಡಿಸಲಾಗಿದೆ. ಇದು ಈ ಭಾಗದ ಸಾವಿರಾರು ರೈತರ ಬದುಕಿಗೆ ವರದಾನವಾಗಿದ್ದು ಇಂತಹ ರೈತಪರವಾದ ಅಭಿವೃದ್ಧಿ ಕೆಲಸವನ್ನು ಎಲ್ಲರೂ ಕೂಡಾ ಕ್ಷೇತ್ರದಲ್ಲಿ ಸ್ಮರಿಸುತ್ತಾರೆ.

ಬನ್ನೂರು ಕೆರೆ ಅಭಿವೃದ್ಧಿ : ಸುಮಾರು 3 ಕೋಟಿ ರೂಪಾಯಿ ವೆಚ್ಚದಲ್ಲಿ ಬನ್ನೂರಿನ ಅತಿದೊಡ್ಡ ಕೆರೆಗೆ ತಡೆಗೋಡೆಯನ್ನು ನಿರ್ಮಿಸಲಾಗಿದ್ದು, ಇಲ್ಲಿ ಹಿರಿಯರು ಮತ್ತು ಸಾರ್ವಜನಿಕರ ಆರೋಗ್ಯದ ದೃಷ್ಟಿಯನ್ನು ಗಮನದಲ್ಲಿ ಇಟ್ಟುಕೊಂಡು ವಾಕಿಂಗ್ ಮಾರ್ಗವನ್ನೂ ಕೂಡಾ ನಿರ್ಮಿಸಲಾಗಿದೆ. ಬನ್ನೂರು ಕೆರೆ ಅಭಿವೃದ್ಧಿಯು ನಿಜಕ್ಕೂ ಮಳೆ ಸಂದರ್ಭದ ದೊಡ್ಡ ಪ್ರಮಾಣದ ಪ್ರವಾಹ ತೊಂದರೆಯನ್ನು ನಿಯಂತ್ರಿಸಿದೆ.

ಬನ್ನೂರಿನ ಒಳ ಚರಂಡಿ ಯೋಜನೆ : ಉತ್ತಮ ನೈರ್ಮಲ್ಯೀಕರಣಕ್ಕಾಗಿ ಬನ್ನೂರಿನಲ್ಲಿ ಸುಮಾರು 57 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಅತ್ಯುತ್ತಮವಾದ ಒಳಚರಂಡಿ ವ್ಯವಸ್ಥೆಯನ್ನು ಡಾ ಹೆಚ್ ಸಿ ಮಹದೇವಪ್ಪನವರ ಕಾಲದಲ್ಲಿ ಮಾಡಲಾಗಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪೌರಾಡಳಿತ ಖಾತೆಯ ಸಚಿವರಾಗಿ ಕಾರ್ಯ ನಿರ್ವಹಿಸಿ ಅನುಭವ ಹೊಂದಿದ್ದ ಇವರ ಜ್ಞಾನದ ಫಲವಾಗಿ ಈ ಯೋಜನೆಯು ಸಾಕಾರಗೊಂಡಿದೆ.

ಮೈಸೂರಲ್ಲಿ ಅಂತಾರಾಷ್ಟ್ರೀಯ ಮಟ್ಟದ ಟೆನ್ನಿಸ್ ಪಂದ್ಯಾವಳಿಗೆ ಚಾಲನೆ





ಮೈಸೂರು,ಮಾ.26(ಎಂಟಿವೈ)–ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಅಂತರರಾಷ್ಟ್ರೀಯ ಮಟ್ಟದ ಟೆನಿಸ್ ಪಂದ್ಯಾವಳಿ ಆರಂಭವಾಗಿದ್ದು, ಚಾಮರಾಜಪುರಂ ಟೆನ್ನಿಸ್ ಕ್ಲಬ್‌ನಲ್ಲಿ ಇಂದಿನಿಂದ ಏ.2ರವರೆಗೆ ನಡೆಯಲಿರುವ ಪಂದ್ಯಾವಳಿಯಲ್ಲಿ 15 ರಾಷ್ಟ್ರಗಳ ಮುಂಚೂಣಿ ರ್‍ಯಾಂಕಿಂಗ್ ಪಡೆದಿರುವ ಆಟಗಾರರು ಸೆಣೆಸಾಡಲಿದ್ದಾರೆ.

ಮೈಸೂರು ಜಿಲ್ಲಾಡಳಿತ, ಕರ್ನಾಟಕ ಲಾನ್ ಟೆನಿಸ್ ಅಸೋಸಿಯೇಷನ್(ಕೆಎಸ್‌ಎಲ್‌ಟಿಎ) ಹಾಗೂ ಮೈಸೂರು ಟೆನ್ನಿಸ್ ಕ್ಲಬ್ ಆಶ್ರಯದಲ್ಲಿ ಸೈಕಲ್ ಪ್ಯೂರ್ ಅಗರಬತ್ತಿ ಕಂಪನಿ ಪ್ರಾಯೋಜಕತ್ವದಲ್ಲಿ ಮಾ.27ರಿಂದ ಆರಂಭವಾಗಿರುವ 'ಐಟಿಎಫ್ ಮೈಸೂರು ಓಪನ್–2023' ಪಂದ್ಯಾವಳಿಯಲ್ಲಿ ಅರ್ಹತಾ ಪಂದ್ಯ ಆರಂಭವಾಗಿದ್ದು, ಮುಖ್ಯ ಪಂದ್ಯಗಳು ಮಾ.28ರಿಂದ ನಡೆಯಲಿವೆ. ಚಾಮರಾಜಪುರಂನಲ್ಲಿರುವ ಟೆನ್ನಿಸ್ ಕೋರ್ಟ್‌ನಲ್ಲಿ ಇಂದು ಬೆಳಗ್ಗೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಟೆನ್ನಿಸ್ ಪಂದ್ಯಾವಳಿಗೆ ಚಾಲನೆ ನೀಡಿದರು. 8 ವರ್ಷದ ಬಳಿಕ ಮೈಸೂರಲ್ಲಿ 'ಐಟಿಎಫ್' ಪಂದ್ಯಾವಳಿ ನಡೆಯುತ್ತಿದ್ದು, ಮೈಸೂರಿನ ಇಬ್ಬರು ಟೆನ್ನಿಸ್ ಆಟಗಾರರು ಸೇರಿದಂತೆ ವೈಲ್ಡ್‌ಕಾರ್ಡ್ ಎಂಟ್ರಿ ಮೂಲಕ ವಿದೇಶಿ ಆಟಗಾರರೊಂದಿಗೆ ಸೆಣೆಸಾಡಲು ಸಜ್ಜಾಗಿದ್ದಾರೆ.

ಇದೇ ವೇಳೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಮಾತನಾಡಿ, ಪ್ರವಾಸೋದ್ಯಮದ ಆಕರ್ಷಣೆಗಾಗಿ ಕ್ರೀಡಾಕೂಟ ಮಹತ್ವದ ಪಾತ್ರ ವಹಿಸುತ್ತದೆ. ವಿದೇಶಿ ಪ್ರವಾಸಿಗರನ್ನು ಸೆಳೆಯಲು ಕ್ರೀಡಾ ತಾಣ(ಸ್ಪೋರ್ಟ್ಸ್ ಹಬ್) ನಿರ್ಮಿಸಲು ಉದ್ದೇಶಿಸಲಾಗಿದೆ. ಈ ಟೆನ್ನಿಸ್ ಪಂದ್ಯಾವಳಿಯನ್ನು ಮೈಸೂರಲ್ಲಿ ಆಯೋಜಿಸಲು ಸಾಧ್ಯವೇ? ಎಂದು ಕೆಎಸ್‌ಎಲ್‌ಟಿಎ ಕಾರ್ಯದರ್ಶಿ ಮಹೇಶ್ವರ್‌ರಾವ್ ಅವರು ಕೇಳಿದರು. ಇದಕ್ಕೆ ಜಿಲ್ಲಾಡಳಿತ ಸಕ್ರಿಯವಾಗಿ ಸ್ಪಂದಿಸಿ ವಿವಿಧ ಸಂಘ–ಸಂಸ್ಥೆಗಳ ನೆರವು ಪಡೆದು ಪಂದ್ಯಾವಳಿಯನ್ನು ಆಯೋಜಿಸಿದೆ ಎಂದರು.

'ಐಟಿಎಫ್ ಮೈಸೂರು ಓಪನ್–2023' ಪಂದ್ಯಾವಳಿಯ ಯಶಸ್ಸಿಗೆ ಸೈಕಲ್ ಪ್ಯೂರ್ ಅಗರ್‌ಬತ್ತಿ ಸಂಸ್ಥೆ 10 ಲಕ್ಷ ರೂ. ನೀಡಿದೆ. ಅಲ್ಲದೆ, ಕೈಗಾರಿಕೆಗಳು ಸೇರಿದಂತೆ ವಿವಿಧ ಸಂಸ್ಥೆಗಳು ನೆರವು ನೀಡಿದೆ. ಒಟ್ಟಾರೆಯಾಗಿ ಈ ಪಂದ್ಯಾವಳಿಯಲ್ಲಿ ಪಾಲ್ಗೊಳ್ಳುತ್ತಿರುವ ವಿಜೇತ ಆಟಗಾರರಿಗೆ ಪ್ರಶಸ್ತಿ ನೀಡಲು 25 ಲಕ್ಷ ರೂ. ವೆಚ್ಚ ಮಾಡಲಾಗುತ್ತಿದೆ ಎಂದರು.

ಟೂರ್ನಿಯ ನಿರ್ದೇಶಕ ಪೀಟರ್ ವಿಜಯ್‌ಕುಮಾರ್ ಮಾತನಾಡಿ, ಈ ಪಂದ್ಯಾವಳಿಯಲ್ಲಿ ವಿಯೆಟ್ನಾಂ, ರಷ್ಯಾ, ಯುಎಸ್‌ಎ, ಉಕ್ರೇನ್, ಆಸ್ಟ್ರೇಲಿಯಾ, ಬ್ರಿಟನ್, ಫ್ರಾನ್ಸ್, ಕಜಾಕಿಸ್ತಾನ ಸೇರಿದಂತೆ 14 ರಾಷ್ಟ್ರಗಳ ರ್‍ಯಾಂಕಿಂಗ್ ಹೊಂದಿರುವ ಆಟಗಾರರು ಪಾಲ್ಗೊಳ್ಳುತ್ತಿದ್ದಾರೆ. ಮುಖ್ಯ ಸುತ್ತಿನ ಹಣಾಹಣಿ 28ರಿಂದ ಏ.2ರವರೆಗೆ ನಡೆಯಲಿದೆ. 32 ಮಂದಿ ಕಣದಲ್ಲಿದ್ದು, ನಾಲ್ವರು ವೈಲ್ಡ್ ಕಾರ್ಡ್ ಮೂಲಕ ಪ್ರವೇಶ ಪಡೆದಿದ್ದಾರೆ. ಎಂಟು ಮಂದಿ ಅರ್ಹತಾ ಸುತ್ತನ್ನು ಪ್ರವೇಶಿಸಲಿದ್ದಾರೆ. ಡಬಲ್ಸ್‌ನಲ್ಲಿ 16 ತಂಡಗಳು ಸೆಣೆಸಾಡಲಿವೆ. ಮೈಸೂರಿನ ಮನೀಷ್ ಗಣೇಶ್ ಹಾಗೂ ಆರ್.ಸೂರಜ್ ಪ್ರಬೋಧ್, ಬೆಂಗಳೂರಿನ ರಿಷಿ ರೆಡ್ಡಿ, ಗುಜರಾತ್‌ನ ಮಾಧವ್ ಕಾಮತ್ ಅವರಿಗೆ ವೈಲ್ಡ್ ಕಾರ್ಡ್ ಪ್ರವೇಶ ನೀಡಲಾಗಿದೆ. ಭಾರತದ ಪ್ರತಿಭಾವಂತ ಆಟಗಾರರಾದ ಮುಕುಂದ್ ಶಶಿಕುಮಾರ್, ಎಸ್.ಡಿ.ಪ್ರಜ್ವಲ್ ದೇವ್, ರಾಮ್‌ಕುಮಾರ್ ರಾಮನಾಥನ್, ಸಿದ್ಧಾರ್ಥ್ ರಾವತ್, ದಿಗ್ವಿಜಯ್ ಪ್ರತಾಪ್ ಸಿಂಗ್, ಮನೀಷ್ ಸುರೇಶ್ ಕುಮಾರ್, ನಿಕಿ ಪೂಣಚ್ಚ ಮತ್ತು ಕರಣ್ ಸಿಂಗ್ ಕಣದಲ್ಲಿದ್ದಾರೆ' ಎಂದರು.

ಐಟಿಎಫ್ ಮೇಲ್ವಿಚಾರಕ ಶ್ರೀಲಂಕಾದ ಧರಕ ಇಲವಾಲ ಮಾತನಾಡಿ, '2017ರಲ್ಲಿ ರೋಜರ್ ಫೆಡರರ್ ಅವರನ್ನು ಸೋಲಿಸಿದ್ದ ರಷ್ಯಾದ ಡಾನ್ಸ್ಕೊಯ್, 245ನೇ ಶ್ರೇಯಾಂಕಿತ ವಿಯೆಟ್ನಾಂನ ನಾಮ್ ಹೊವಾಂಗ್ ಲೀ, ಅಮೆರಿಕದ ಆಲಿವರ್ ಕ್ರಾಫೋರ್ಡ್ ಸೇರಿದಂತೆ 15 ವಿದೇಶಿ ಆಟಗಾರರು ಕಣದಲ್ಲಿದ್ದಾರೆ. ಸಿಂಗಲ್ಸ್ ವಿಜೇತರಿಗೆ 2.96 ಲಕ್ಷ ರೂ. (3,600 ಡಾಲರ್), ಡಬಲ್ಸ್ ವಿಜೇತ ತಂಡಕ್ಕೆ 1.29 ಲಕ್ಷ ರೂ(1550 ಡಾಲರ್ಸ್) ನಗದು ಬಹುಮಾನ ನೀಡಲಾಗುತ್ತಿದೆ ಎಂದು ವಿವರಿಸಿದರು.

> ಪಂದ್ಯಾವಳಿಯಲ್ಲಿ ಮೈಸೂರಿನ ಆಟಗಾರರಾದ ಮನೀಶ್ ಮತ್ತು ಸೂರಜ್ ವೈಲ್ಡ್ ಕಾರ್ಡ್ ಎಂಟ್ರಿ ಕೊಟ್ಟಿದ್ದಾರೆ. ಟೂರ್ನಮೆಂಟ್‌ನಲ್ಲಿ 14 ರಾಷ್ಟ್ರಗಳ ಆಟಗಾರರು ಭಾಗಿಯಾಗಿದ್ದು, ಅವರೊಂದಿಗೆ ಸ್ಥಳೀಯ ಆಟಗಾರರು ಪಾಲ್ಗೊಳ್ಳುತ್ತಿರುವುದು ಸಂತೋಷವನ್ನುಂಟು ಮಾಡಿದೆ. ಸ್ಥಳೀಯ ಆಟಗಾರರಿಗೆ ಜಾಗತಿಕ ಮಟ್ಟದ ವೇದಿಕೆ ಸಿಗಬೇಕು ಎನ್ನುವುದು ಜಿಲ್ಲಾಡಳಿತದ ಆಶಯವಾಗಿದೆ. ಮೈಸೂರಲ್ಲಿ ವಿಮಾನ ನಿಲ್ದಾಣ, ಹೆಲಿಪ್ಯಾಡ್ ಸೇರಿದಂತೆ ವಿವಿಧ ಸೌಲಭ್ಯಗಳಿವೆ. ಈ ಹಿನ್ನೆಲೆಯಲ್ಲಿ ಅಂತರರಾಷ್ಟ್ರೀಯ ಮಟ್ಟದ ವಿವಿಧ ಕ್ರೀಡಾ ಪಂದ್ಯಾವಳಿ ಆಯೋಜಿಸಲು ಪೂರಕವಾದ ವಾತಾವರಣವಿದೆ. ಈ ಪಂದ್ಯಾವಳಿಯನ್ನು ಮೈಸೂರಿನ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ವೀಕ್ಷಿಸಬೇಕು. ಆ ಮೂಲಕ ಕ್ರೀಡಾ ಚಟುವಟಿಕೆಯಲ್ಲಿ ಆಸಕ್ತಿಯಿರುವ ಮಕ್ಕಳಿಗೆ ನೆರವಾಗುತ್ತದೆ.
>
> **–ಡಾ. ಕೆ.ವಿ. ರಾಜೇಂದ್ರ, ಜಿಲ್ಲಾಧಿಕಾರಿ**



ವರುಣಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿ ಆಯ್ಕೆಯಾದ ಮಾಜಿ ಸಿಎಂ ಸಿದ್ದರಾಮಯ್ಯ ಅವರನ್ನು ಬೆಂಗಳೂರಿನ ಅವರ ನಿವಾಸದಲ್ಲಿ ಕೆಪಿಸಿಸಿ ಕಾರ್ಯದರ್ಶಿ ಗುರುಪಾದ ಸ್ವಾಮಿ ಅಭಿನಂದಿಸಿದರು. ಈ ವೇಳೆ ಮುಖಂಡರಾದ ಬೆಳವಾಡಿ ಪ್ರಭಾಕರ್, ಕೆ.ಆರ್.ನಗರದ ಧರ್ಮ ಮಂಜುನಾಥ್ ಇದ್ದರು.

ಸರ್ಕಾರದ ಮೀಸಲಾತಿ ಹಂಚಿಕೆ ನಿರ್ಧಾರಕ್ಕೆ ಆಕ್ಷೇಪ; ಹೈಕೋರ್ಟ್‌ನಲ್ಲಿ ಶೀಘ್ರವೇ

ಪಿಐಎಲ್ ದಾಖಲಿಸಲು ಕಾಯಕ ಸಮಾಜಗಳ ಒಕ್ಕೂಟ ನಿರ್ಣಯ

ಮೈಸೂರು,ಮಾ.26(ಪಿಎಂ)– ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಕೈಗೊಂಡಿರುವ



ಮೀಸಲಾತಿ ಹಂಚಿಕೆ ನಿರ್ಧಾರದ ವಿರುದ್ಧ ಕರ್ನಾಟಕ ರಾಜ್ಯ ಕಾಯಕ ಸಮಾಜಗಳ ಒಕ್ಕೂಟವು ಹೈಕೋರ್ಟ್‌ನಲ್ಲಿ ಶೀಘ್ರವೇ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ (ಪಿಐಎಲ್) ದಾಖಲಿಸಲಿದೆ ಎಂದು ಒಕ್ಕೂಟದ ರಾಜ್ಯಾಧ್ಯಕ್ಷ ಕೆ.ಸಿ.ಪುಟ್ಟಸಿದ್ದಶೆಟ್ಟಿ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೀಸಲಾತಿ ಹಂಚಿಕೆ ವಿಚಾರದಲ್ಲಿ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಶಿಫಾರಸ್ಸಿನಂತೆ ನಿರ್ಧರಿಸಿರುವುದು ಮೇಲ್ನೋಟಕ್ಕೆ ಕಾಣುತ್ತಿಲ್ಲ. ಅಲ್ಲದೆ, ಅಂಬೇಡ್ಕರ್ ಅವರ ಮೀಸಲಾತಿ ಆಶಯಕ್ಕೆ ರಾಜ್ಯ ಸರ್ಕಾರ ತಿಲಾಂಜಲಿ ಇಟ್ಟಿದೆ. ಆ ಮೂಲಕ ರಾಜ್ಯ ಬಿಜೆಪಿ ಸರ್ಕಾರ ಸಂವಿಧಾನಬಾಹಿರ ತೀರ್ಮಾನ ಕೈಗೊಂಡಿದೆ. ಇದರ ವಿರುದ್ಧ ನಮ್ಮ ಸಂಘಟನೆ ಶೀಘ್ರವೇ ಹೈಕೋರ್ಟ್‌ನಲ್ಲಿ ಪಿಐಎಲ್ ದಾಖಲಿಸಲಿದೆ ಎಂದರು.

ಧಾರ್ಮಿಕ ಅಲ್ಪಸಂಖ್ಯಾತರ ಮೀಸಲಾತಿ ಕಸಿದು ಒಕ್ಕಲಿಗರು, ವೀರಶೈವ ಲಿಂಗಾಯತರಿಗೆ ನೀಡಲಾಗಿದೆ. ಧಾರ್ಮಿಕ ಅಲ್ಪಸಂಖ್ಯಾತರನ್ನು ಇಡಬ್ಲ್ಯೂಎಸ್ ಮೀಸಲಾತಿಗೆ ಸೇರ್ಪಡೆ ಮಾಡಿದ್ದು, ಇದು ಅವೈಜ್ಞಾನಿಕ ಕ್ರಮ. ಕಾಯಕ ಸಮಾಜಗಳಿರುವ '2ಎ' ಪ್ರವರ್ಗದ ಮೀಸಲಾತಿ ಪ್ರಮಾಣವನ್ನು ಶೇ.15ರಿಂದ 27ಕ್ಕೆ ಹೆಚ್ಚಿಸಿ, ಜನಸಂಖ್ಯೆಗೆ ಅನುಗುಣವಾಗಿ ಒಳಮೀಸಲಾತಿ ನೀಡಬೇಕು. ಚುನಾವಣೆ ನೀತಿ ಸಂಹಿತೆ ಜಾರಿಗೊಳ್ಳುವ ಮೊದಲೇ ನಮ್ಮ ಈ ಬೇಡಿಕೆ ಈಡೇರಿಸಬೇಕು. ಇಲ್ಲವಾದರೆ ಈ ಚುನಾವಣೆಯಲ್ಲಿ ಕಾಯಕ ಸಮಾಜಗಳು ನಿರ್ಣಾಯಕ ಎಂದು ತೋರಿಸಲಿದ್ದೇವೆ ಎಂದರು. ಸೋಮವಾರ (ಮಾ.27) ಕೆಆರ್ ನಗರದಿಂದ ನಮ್ಮ ಚಳುವಳಿ ಪ್ರಾರಂಭ ಮಾಡುತ್ತಿದ್ದೇವೆ. ಮನೆ ಮನೆಗೆ ಭೇಟಿ ನೀಡಿ, ನಮ್ಮ ಕಾಯಕ ಸಮಾಜಗಳಿಗೆ ಕರಪತ್ರ ಹಂಚಿ, ನಮಗೆ ಅನ್ಯಾಯ ಮಾಡಿದ ಪಕ್ಷ ಬೆಂಬಲಿಸಬೇಡಿ ಎಂದು ಕೋರಲಿದ್ದೇವೆ ಎಂದರು. ಮುಖಂಡರಾದ ಶಿವರಾಜಪ್ಪ, ಜಯರಾಮ್, ಕೆಂಪಶೆಟ್ಟಿ, ದಾಸಪ್ಪಶೆಟ್ಟಿ ಗೋಷ್ಠಿಯಲ್ಲಿದ್ದರು.

10ರಿಂದ 12 ಕ್ಷೇತ್ರದಲ್ಲಿ ಆರ್‌ಪಿಐ ಸ್ಪರ್ಧೆ

ಪಕ್ಷದ ರಾಜ್ಯ ಉಸ್ತುವಾರಿ ಡಾ.ವೆಂಕಟಸ್ವಾಮಿ ಮಾಹಿತಿ

ಮೈಸೂರು, ಮಾ.26 (ಪಿಎಂ)– ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ (ಆರ್‌ಪಿಐ/ಅಠವಳೆ) ರಾಜ್ಯ ವಿಧಾನ ಸಭಾ ಚುನಾವಣೆಯಲ್ಲಿ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡು 10 ರಿಂದ 12 ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಮಾತುಕತೆ ನಡೆಸಲಾಗುತ್ತಿದೆ ಎಂದು ಆರ್‌ಪಿಐ ರಾಷ್ಟ್ರೀಯ ಕಾರ್ಯಾಧ್ಯಕ್ಷ ಹಾಗೂ ರಾಜ್ಯ ಉಸ್ತುವಾರಿ ಡಾ.ಎಂ.ವೆಂಕಟಸ್ವಾಮಿ ತಿಳಿಸಿದರು.



ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟಕ್ಕೆ ಆರ್‌ಪಿಐ ರಾಷ್ಟ್ರೀಯ ಅಧ್ಯಕ್ಷ ರಾಮದಾಸ್ ಅಠವಳೆ ಬೆಂಬಲ ನೀಡಿ ಸಚಿವರಾಗಿ ಪಕ್ಷ ಸಂಘಟಿಸುತ್ತಿದ್ದಾರೆ. ಕರ್ನಾಟಕದಲ್ಲಿ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡು ಆರ್‌ಪಿಐ ಅಭ್ಯರ್ಥಿಗಳನ್ನು ಕಣಕ್ಕಿಳಿಸುವ ಸಂಬಂಧ ಈಗಾಗಲೇ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರಲ್ಲಿ ರಾಮದಾಸ್ ಅಠವಳೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಶೀಘ್ರದಲ್ಲಿ ಅವರು ಕರ್ನಾಟಕಕ್ಕೂ ಭೇಟಿ ನೀಡಲಿದ್ದಾರೆ ಎಂದರು.

ಚಾಮರಾಜನಗರ ಜಿಲ್ಲೆಯ 3 ಕ್ಷೇತ್ರಗಳಲ್ಲಿ ಪಕ್ಷ ಸ್ಪರ್ಧಿಸಲು ಉದ್ದೇಶಿಸಲಾಗಿದೆ ಅದರಂತೆ ಹನೂರು ಕ್ಷೇತ್ರಕ್ಕೆ ಜಾನ್ ಪೀಟರ್, ಕೊಳ್ಳೇಗಾಲ ಕ್ಷೇತ್ರಕ್ಕೆ ರಾಜೇಶ್, ಗುಂಡ್ಲುಪೇಟೆ ಕ್ಷೇತ್ರಕ್ಕೆ ಅನಿಲ್ ಎಂಬ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆ. ಕಾಂಗ್ರೆಸ್ ಮುಕ್ತ ಕರ್ನಾಟಕ ಆಗಬೇಕೆಂಬುದು ನಮ್ಮ ಪಕ್ಷದ ಮೈತ್ರಿಯ ಉದ್ದೇಶ. ವರುಣಾ ಕ್ಷೇತ್ರದಲ್ಲಿ ಸಿದ್ದರಾಮಯ್ಯನವರು ಸ್ಪರ್ಧಿಸಲು ನಿರ್ಧರಿಸಿದ್ದು, ಇಲ್ಲಿ ಅವರನ್ನು ಸೋಲಿಸಲು ಪಕ್ಷ ಕಾರ್ಯತಂತ್ರ ರೂಪಿಸಲಿದೆ ಎಂದರು. ಆರ್‌ಪಿಐ ಜಿಲ್ಲಾಧ್ಯಕ್ಷ ಶಿವಮಾದು, ಉಪಾಧ್ಯಕ್ಷ ಬಸವರಾಜು, ಚಾ.ನಗರ ಜಿಲ್ಲಾಧ್ಯಕ್ಷ ಸುರೇಶ್, ಜಯಲಕ್ಷ್ಮೀ ಗೋಷ್ಠಿಯಲ್ಲಿದ್ದರು.



ಮೈಸೂರಿನ ವಾರ್ಡ್ ನಂ.44ರ ವ್ಯಾಪ್ತಿಯ ಬೋಗಾದಿ 2ನೇ ಹಂತ ಮತ್ತು ಜನತಾನಗರ ಭಾಗಗಳಲ್ಲಿ 20 ಲಕ್ಷ ರೂ. ವೆಚ್ಚದ ಒಳಚರಂಡಿ ಕಾಮಗಾರಿಗೆ ಪಾಲಿಕೆ ಸದಸ್ಯೆ ಸವಿತಾ ಸುರೇಶ್ ಗುದ್ದಲಿ ಪೂಜೆ ನೆರವೇರಿಸಿದರು. ಈ ವೇಳೆ ನಿವಾಸಿಗಳ ಸಂಘದ ಅಧ್ಯಕ್ಷ ಸುರೇಶ್, ಮುಖಂಡರಾದ ಕುಮಾರ್, ಪ್ರಕಾಶ್, ಮಂಜು, ಪ್ರಸಾದ್, ಇಂಜಿನಿಯರ್ ಶಂಕರ್, ಪುಟ್ಟಾಲಯ್ಯ, ಜಗದೀಶ್, ನಿಂಗಣ್ಣ ಇನ್ನಿತರರು ಉಪಸ್ಥಿತರಿದ್ದರು.

ನಿಧನ



ಎ.ಎಂ.ಸಿ. ದಾಕ್ಷಾಯಿಣಿ

ಮೈಸೂರು,ಮಾ.26–ಮೈಸೂರಿನ ತ್ಯಾಗರಾಜ ರಸ್ತೆ, 6ನೇ ಕ್ರಾಸ್ ನಿವಾಸಿ ಡಾ.ಎ.ಎಂ.ಸಿ.ದಾಕ್ಷಾಯಿಣಿ ಉಮೇಶ್(68) ಶುಕ್ರವಾರ ಹೃದಯಾಘಾತದಿಂದ ನಿಧನರಾಗಿದ್ದಾರೆ. ಮೃತರು ಓರ್ವ ಪುತ್ರಿ, ಅಳಿಯ, ಮೊಮ್ಮಕ್ಕಳು ಮತ್ತು ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಸೋಮವಾರ (ಮಾ.27) ಬೆಳಗ್ಗೆ 9ರಿಂದ ಮಧ್ಯಾಹ್ನ 12 ಗಂಟೆವರೆಗೆ ನಿವಾಸದ ಮುಂದೆ ಮೃತರ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದ್ದು, ನಂತರ ವಿದ್ಯಾರಣ್ಯ ಪುರಂನಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ಮೃತರ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮೆಡಿಕಲ್ ಕಾಲೇಜಲ್ಲಿ ಮಹರ್ಷಿ ಸುಶ್ರುತ ಪ್ರತಿಮೆ ಅನಾವರಣ





ಮೈಸೂರು, ಮಾ. 26(ಆರ್‌ಕೆ)– ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಕೇಂದ್ರ (ಎಂಎಂಸಿಆರ್‌ಐ)ದ ಆವರಣದಲ್ಲಿ ಸ್ಥಾಪಿಸಿರುವ ಮಹರ್ಷಿ ಸುಶ್ರುತ ಅವರ ಪ್ರತಿಮೆಯನ್ನು ಇಂದು ಅನಾವರಣಗೊಳಿಸಲಾಯಿತು.

ಮೈಸೂರು ಮೆಡಿಕಲ್ ಕಾಲೇಜಿನ 1949ರ ತಂಡದ ವಿದ್ಯಾರ್ಥಿ ಹಾಗೂ ನಿಮ್ಹಾನ್ಸ್ ನಿವೃತ್ತ ನಿರ್ದೇಶಕ ಜಿ.ಎನ್. ನಾರಾಯಣ ರೆಡ್ಡಿ ಅವರು ಮಹರ್ಷಿ ಸುಶ್ರುತ ಅವರ ಪ್ರತಿಮೆಯನ್ನು ಅನಾವರಣಗೊಳಿಸಿದರು. ಮೈಸೂರಿನ ಹಿರಿಯ ಸರ್ಜನ್ ಡಾ. ಸಿ.ಜಿ. ನರಸಿಂಹನ್ ಪ್ರತಿಮೆಯನ್ನು ಕೊಡುಗೆಯಾಗಿ ನೀಡಿದ್ದು, ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್ ಮಹರ್ಷಿ ಸುಶ್ರುತ ಅವರ ಪ್ರತಿಮೆಯನ್ನು ರೂಪಿಸಿದ್ದಾರೆ.

ಈ ಸಂದರ್ಭ ಮಾತನಾಡಿದ ಡಾ. ಸಿ.ಜಿ. ನರಸಿಂಹನ್, ಪ್ರಾಚೀನ ಭಾರತದ ಸರ್ಜನ್ ಆಗಿದ್ದ ಸುಶ್ರುತ ಅವರು 'ಫಾದರ್ ಆಫ್ ಸರ್ಜರಿ' ಎಂದೇ ಖ್ಯಾತಿಯಾಗಿದ್ದರು. ಸರ್ಜರಿ, ಪ್ಲಾಸ್ಟಿಕ್ ಸರ್ಜರಿ ವಿಭಾಗದಲ್ಲಿ ಅಂತರರಾಷ್ಟ್ರೀಯ ಖ್ಯಾತಿ ಗಳಿಸಿದ್ದ ಸುಶ್ರುತ ಅವರನ್ನು ಪಾಶ್ಚಿಮಾತ್ಯ ರಾಷ್ಟ್ರಗಳು ಕೊಂಡಾಡಿದ್ದರೂ ನಮ್ಮ ದೇಶ ಅವರ ಸೇವೆ, ಸಾಧನೆಯನ್ನು ಗುರ್ತಿಸದಿರುವುದು ವಿಷಾದನೀಯ ಎಂದು ಬೇಸರ ವ್ಯಕ್ತಪಡಿಸಿದರು.

ವಿಶ್ವ ಖ್ಯಾತಿಯ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಸುಶ್ರುತ ಅವರ ಪ್ರತಿಮೆ ಸ್ಥಾಪಿಸಬೇಕೆಂದು ನಾನು ಸಂಸ್ಥೆಯ ಹಿಂದಿನ ನಿರ್ದೇಶಕ ಡಾ. ಸಿ.ಪಿ. ನಂಜರಾಜ್ ಅವರಲ್ಲಿ ಪ್ರಸ್ತಾಪಿಸಿದಾಗ ಅವರು ಬೆಂಬಲ ನೀಡಿದರಲ್ಲದೇ, ನಾವು ನಿರ್ಮಿಸುತ್ತಿರುವ ಹೊಸ ಉಪನ್ಯಾಸ ಸಭಾಂಗಣ ಮತ್ತು ಗ್ರಂಥಾಲಯ ಕಟ್ಟಡದ ಪ್ರವೇಶ ದ್ವಾರದಲ್ಲೇ ಸ್ಥಾಪಿಸೋಣ ಎಂದು ಸಲಹೆ ನೀಡಿದರು. ನಂತರ ಆದಿಚುಂಚನಗಿರಿ ವಿಶ್ವವಿದ್ಯಾಲಯದ ಕುಲಪತಿ ಎಂಎಂಸಿ ಅಂಡ್ ಆರ್‌ಐ ಅಲ್ಯೂಮ್ನಿ ಡಾ. ಎಂ.ಎ. ಶೇಖರ್ ಸಂಸ್ಥೆಯಿಂದ ಅನುಮತಿ ಪತ್ರ ಕೊಡಿಸಿಕೊಡುವಲ್ಲಿ ನೆರವಾದರು. ಅದಕ್ಕಾಗಿ ಅವರಿಬ್ಬರಿಗೂ ನಾನು ಕೃತಜ್ಞತೆ ಸಲ್ಲಿಸುತ್ತೇನೆ ಎಂದು ಡಾ.ಸಿ.ಜಿ.ನರಸಿಂಹನ್ ತಿಳಿಸಿದರು.

6 ಅಡಿ ಎತ್ತರದ ಕಪ್ಪು ಶಿಲೆಯ ಪ್ರತಿಮೆಯನ್ನು ಸುಂದರವಾಗಿ ರೂಪಿಸಿ ಕೊಟ್ಟಿರುವ ಶಿಲ್ಪಿ ಅರುಣ್ ಯೋಗಿರಾಜ್ ಅವರಿಗೂ ಧನ್ಯವಾದ ಹೇಳಿದ ಅವರು, ನನ್ನ ಹಲವು ವರ್ಷಗಳ ಕನಸು ನನಸಾಗಿರುವುದು ಅತ್ಯಂತ ಸಂತೋಷ ತಂದಿದೆ. ಮಹರ್ಷಿ ಅವರು ಮೆಡಿಸಿನ್ ಮತ್ತು ಸರ್ಜರಿ ಕುರಿತ ಪ್ರಾಚೀನ ಸಂಸ್ಕೃತದ 'ಸುಶ್ರುತ ಸಂಹಿತೆ' ಒಂದು ಉತ್ತಮ ವೈದ್ಯಕೀಯ ಗ್ರಂಥ. ಗಾಯ ವಾಸಿ ಮಾಡುವುದು ಸೇರಿ 60 ಬಗೆಯ ಉಪಕರ್ಮಗಳನ್ನು ನೀಡಿದೆ. 120 ಸರ್ಜಿಕಲ್ ಉಪಕರಣಗಳು, 300 ಸರ್ಜಿಕಲ್ ಪ್ರಾಕಾರಗಳು ಹಾಗೂ 8 ವರ್ಗದ ಮಾನವ ಸರ್ಜರಿಗಳ ಬಗ್ಗೆ ಅದರಲ್ಲಿ ಸಂಪೂರ್ಣ ಮಾಹಿತಿ ಇದೆ ಎಂದು ಡಾ.ಸಿ.ಜಿ.ನರಸಿಂಹನ್ ತಿಳಿಸಿದರು.

ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಡೀನ್ ಮತ್ತು ಡೆರೆಕ್ಟರ್ ಡಾ.ಕೆ.ಆರ್.ದಾಕ್ಷಾಯಿಣಿ, ಮಾ ಅಸೋಸಿಯೇಷನ್ ಅಧ್ಯಕ್ಷ ಡಾ.ಎಸ್. ಚಂದ್ರಶೇಖರ್, ಡಾ.ಎಂ.ಎ.ಶೇಖರ್, ಕಾಲೇಜು ಆಡಳಿತ ಮಂಡಳಿ ಸದಸ್ಯೆ ಹೇಮಾ ನಂದೀಶ್ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಮೈಸೂರು ಮೆಡಿಕಲ್ ಕಾಲೇಜು ಹಳೇ ವಿದ್ಯಾರ್ಥಿಗಳಾದ ಡಾ. ಶ್ರೀನಿವಾಸ, ಡಾ.ರಮೇಶ, ಡಾ.ಉತ್ತಪ್ಪ, ಡಾ.ವಿಶ್ವೇಶ್ವರ, ಡಾ.ಜಯಚಂದ್ರಗುಪ್ತ, ಡಾ.ನಂಜಪ್ಪ, ಡಾ. ಕೆ.ಆರ್.ಕಾಮತ್, ಡಾ.ಎಸ್.ಪಿ. ಯೋಗಣ್ಣ, ಡಾ.ವೀಣಾ, ಡಾ.ಜಯರಾಜ್, ಡಾ.ರಾಜಶ್ರೀ, ಡಾ.ಗಣಪತಿ, ಡಾ.ದೇವೇಗೌಡ, ಡಾ.ಚಂದ್ರಮತಿ, ಡಾ.ದಮಯಂತಿ, ಡಾ.ಪಾರ್ಶ್ವನಾಥ, ಡಾ. ಶಶಿಧರ, ಡಾ.ಬಿ.ಎನ್.ನಂಜುಂಡಸ್ವಾಮಿ, ಡಾ.ರಾಜೇಶ್, ಡಾ.ಮರುಳಸಿದ್ದಪ್ಪ, ಡಾ.ದಿನೇಶ್ ಸೇರಿದಂತೆ ಹಲವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಫಲಾನುಭವಿಗಳಿಗೆ ಉಚಿತ ಕುರಿ ಮರಿ ವಿತರಣೆ



ಮೈಸೂರು, ಮಾ. 26– ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಆರಾಧ್ಯ ಮಹಾಸಭಾದಲ್ಲಿ ಎಸ್ ಪ್ರಕಾಶ್ ಪ್ರಿಯಾದರ್ಶನ ಸ್ನೇಹ ಬಳಗದ ವತಿಯಿಂದ 'ಕುರುಬರಿಂದ ಕುರುಬರಿಗಾಗಿ' ಉಚಿತ ಕುರಿ ನೀಡುವ ಯೋಜನೆಯ 6ನೇ ಕಾರ್ಯಕ್ರಮದಲ್ಲಿ 8 ಜನ ಫಲಾನುಭವಿಗಳಿಗೆ ಉಚಿತ ಕುರಿ ಮರಿಗಳು, ಹಣ್ಣಿನ ಗಿಡ, ವಾಟರ್ ಕ್ಯಾನ್‌ಗಳನ್ನು ವಿತರಿಸಲಾಯಿತು. ಒಬ್ಬರಿಗೆ ಒಂದು ಹೆಣ್ಣು ಕರುವನ್ನು ನೀಡಲಾಯಿತು. ಇದೇ ವೇಳೆ 50 ವರ್ಷ ಮೇಲ್ಪಟ್ಟ ಮಹಿಳೆಯರಿಗೆ ಸೀರೆಗಳನ್ನು ವಿತರಿಸಲಾಯಿತು.

ವರುಣಾ ಕ್ಷೇತ್ರದ ಕೆ.ಮಂಜುನಾಥ್, ಕಾವ್ಯಶ್ರೀ, ಸಿದ್ದರಾಮನಹುಂಡಿಯ ರಾಮಯ್ಯ, ಕೆ.ಆರ್.ನಗರದ ಕೆ.ಕೆ. ಮಹೇಂದ್ರ, ಕೆ.ಆರ್.ಕ್ಷೇತ್ರದ ರವಿ, ಚಾಮುಂಡೇಶ್ವರಿ ಕ್ಷೇತ್ರದ ಚಿಕ್ಕಸ್ವಾಮಿ, ಹುಣಸೂರು ಕ್ಷೇತ್ರದ ಶಿವರಾಜ ಫಲಾನುಭವಿಗಳು.

ಕಾರ್ಯಕ್ರಮದಲ್ಲಿ ತಿಸ್ಸಾ ಭಂತೇಜಿ, ಕರ್ನಾಟಕ ಕಾವಲು ಪಡೆಯ ರಾಜ್ಯಾಧ್ಯಕ್ಷ ಮೋಹನ್‌ಕುಮಾರ್‌ಗೌಡ, ಮೈಸೂರು ನಗರ ಜೆಡಿಎಸ್ ಕಾರ್ಯಾಧ್ಯಕ್ಷ ಎಸ್.ಪ್ರಕಾಶ್ ಪ್ರಿಯಾದರ್ಶನ್, ನಗರ ಬಿಜೆಪಿ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ನಾಗೇಶ್ ರಘುರಾಂ, ಗೋಲ್ಡ್ ಸುರೇಶ್, ಬಿಜೆಪಿ ಮುಖಂಡರಾದ ಲಿಂಗರಾಜು, ಪ್ರೊ.ಬಿ.ಎಸ್.ಪ್ರೇಮಕುಮಾರಿ, ಪ್ರೊ. ಮಹೇಶ್, ಕಾಂಗ್ರೆಸ್ ಮುಖಂಡರಾದ ಪವನ್ ಸಿದ್ದರಾಮ, ಉಷಾರಮೇಶ್, ಎಂ.ಮಾಧವಿ, ಕೆ.ಆರ್.ನಗರದ ಎಲ್.ಆರ್. ಪ್ರಮೋದ್ ಇನ್ನಿತರರು ಇದ್ದರು.



ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಹೂಟಗಳ್ಳಿ ಮಹಾಶಕ್ತಿ ಕೇಂದ್ರದ ಬೂತ್ ನಂ.21ರ ಮೇಗಳಾಪುರದಲ್ಲಿ ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೇಮಂತ್‌ಕುಮಾರ್‌ಗೌಡ ಕಾರ್ಯಕರ್ತರನ್ನು ಭೇಟಿ ಮಾಡಿ, ಚುನಾವಣೆ ಸಂಬಂಧ ಚರ್ಚಿಸಿದರು. ಈ ವೇಳೆ ಮಾಜಿ ಜಿಲ್ಲಾಧ್ಯಕ್ಷ ಮಹೇಂದ್ರ, ಹಿರಿಯರಾದ ಗೋಪಾಲರಾವ್, ಜಗದೀಶ್‌ಗೌಡ, ರಾಜಕುಮಾರ್, ಚೇತನ್, ನಾಗರಾಜ್, ಚೇತು, ಅನುರಾಜ್, ವೀರಭದ್ರಸ್ವಾಮಿ ಅನೇಕ ಮುಖಂಡರು ಉಪಸ್ಥಿತರಿದ್ದರು.



ಮೈಸೂರಿನ ವಾರ್ಡ್ ನಂ.4ರಲ್ಲಿ ನೂತನವಾಗಿ ನಿರ್ಮಿಸಿರುವ ಡಾ.ಪುನೀತ್ ರಾಜ್‌ಕುಮಾರ್ ಯೋಗ ಮಂಟಪವನ್ನು ನಟ, ನಿರ್ಮಾಪಕ ರಾಘವೇಂದ್ರ ರಾಜ್‌ಕುಮಾರ್ ಉದ್ಘಾಟಿಸಿದರು. ಸ್ಥಳೀಯ ಕಾರ್ಪೋರೇಟರ್ ಪೈಲ್ವಾನ್ ಶ್ರೀನಿವಾಸ್, ಕಾಂಗ್ರೆಸ್ ಮುಖಂಡ ಕೆ.ಹರೀಶ್‌ಗೌಡ ಮತ್ತಿತರರು ಉಪಸ್ಥಿತರಿದ್ದರು.

ಹಳೇ ಮೈಸೂರು ಪ್ರಾಂತ್ಯದ ಎಲ್ಲಾ ಕ್ಷೇತ್ರಗಳಲ್ಲಿ ಪ್ರಜಾ ಪಾರ್ಟಿ ಸ್ಪರ್ಧೆ

ಮೈಸೂರು,ಮಾ.26(ಪಿಎಂ)– ಹಳೇ ಮೈಸೂರು ಪ್ರಾಂತ್ಯದ ಎಲ್ಲಾ ವಿಧಾನಸಭಾ



ಕ್ಷೇತ್ರಗಳಲ್ಲಿ ಕರ್ನಾಟಕ ಪ್ರಜಾ ಪಾರ್ಟಿ ಸ್ಪರ್ಧಿಸಲಿದ್ದು, ಮಾ.28ರಂದು ಈ ಎಲ್ಲಾ ಕ್ಷೇತ್ರಗಳ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಲಾಗುವುದು ಎಂದು ಪಕ್ಷದ ಸಂಸ್ಥಾಪಕ ರಾಜ್ಯಾಧ್ಯಕ್ಷ ಡಾ.ಬಿ.ಶಿವಣ್ಣ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 2023ರ ರಾಜ್ಯ ಚುನಾವಣೆಯಲ್ಲಿ ನಮ್ಮ ಪಕ್ಷ ಬಹುತೇಕ ಎಲ್ಲಾ ಕ್ಷೇತ್ರಗಳಲ್ಲಿ ಸ್ಪರ್ಧಿಸಲಿದೆ. ಅದರಲ್ಲೂ ಹಳೇ ಮೈಸೂರು ಪ್ರಾಂತ್ಯದಲ್ಲಿ ಎಲ್ಲಾ ಕ್ಷೇತ್ರಗಳಲ್ಲಿಯೂ ಅಭ್ಯರ್ಥಿಗಳನ್ನು ಕಣಕ್ಕಿಳಿಸಲು ನಿರ್ಧರಿಸಲಾಗಿದೆ ಎಂದರು.

ನಮ್ಮ ಪಕ್ಷಕ್ಕೆ ಮತದಾರರು ಅವಕಾಶ ನೀಡಿದ್ದಲ್ಲಿ ಮುಂದಿನ ದಿನಗಳಲ್ಲಿ ಶಿಕ್ಷಣ ಮತ್ತು ಆರೋಗ್ಯ ಸೇವೆಗಳನ್ನು ಉಚಿತವಾಗಿ ದೊರೆಯುವಂತೆ ಮಾಡಲಿದ್ದೇವೆ. ಈ ಎರಡು ಯೋಜನೆಗಳನ್ನು ಜಾರಿಗೆ ತರಲು ಪಕ್ಷ ಬದ್ಧವಾಗಿದೆ. ಇದೇ ವೇಳೆ ಹುಬ್ಬಳ್ಳಿ ನಿವಾಸಿ ಮಂಜುನಾಥ್ ಯಶವಂತ್ ರಾಯ್ಕರ್ ಅವರನ್ನು ಪಕ್ಷದ ಯುವ ಘಟಕದ ರಾಜ್ಯಾಧ್ಯಕ್ಷರಾಗಿ ನೇಮಿಸಿ ನೇಮಕಾತಿ ಪತ್ರ ನೀಡಲಾಯಿತು. ಪಕ್ಷದ ಮುಖಂಡರಾದ ಶಿವು, ಜಿ.ಮುರುಗೇಶ್, ಆರ್.ಮಂಜುನಾಥ್, ತಾರಾ ಗೋಷ್ಠಿಯಲ್ಲಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ: ಚಿದಂಬರ ಬೈಕಂಪಾಡಿ, 6.15 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ: "ಮಹಾ ಮೋಜಣಿ" ಭರತ ಭೂಮಿಯನ್ನು ಅಳೆದ ಸಾಹಸಗಾಥೆ, ಪ್ರಸ್ತುತಿ– ಡಾ. ಗಜಾನನ ಶರ್ಮ, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ– ಅಂಬಯ್ಯನುಲಿ, ನಿತಿನ್ ರಾಜಾರಾಂ ಶಾಸ್ತ್ರಿ, ವ್ಯಾಖ್ಯಾನ– ಡಾ. ಲತಾ ಮೈಸೂರು, 7.25 ಭಾವಗೀತೆ: ಕೆ.ಎಸ್. ಸುರೇಖ, 9,00 ನೆನಪಿನಂಗಳ (ಧ್ವನಿ ಭಂಡಾರದಿಂದ), 10.00 ಲಯ ಸಂಭ್ರಮ: ಪ್ರಸ್ತುತಿ– ಹೆಚ್.ಎಲ್.ಶಿವಶಂಕರಸ್ವಾಮಿ. **ಮಧ್ಯಾಹ್ನ:** 12.30 ದೇವರನಾಮ: ವೃಂದಗಾನ, ಆರ್. ವೇದವಲ್ಲೀ, 12.45, ನಮ್ಮ ಆರೋಗ್ಯ: ಪೋಷಣ್ ಅಭಿಯಾನ್ ಸಂಬಂಧವಾಗಿ ಹಿರಿಯ ನಾಗರಿಕರ ಆಹಾರ ಕ್ರಮ ಕುರಿತು ಡಾ. ಸುಧಾ ಸಾಯಿರಾಂ ಅವರೊಂದಿಗೆ ಮಾತುಕತೆ, 1.20 ಭಾವಗೀತೆ– ಸಮನ್ವಿತಾ ಶರ್ಮ, 3.00 ಡಾ. ಬಾಲಮುರಳೀಕೃಷ್ಣ– ಹಾಡುಗಾರಿಕೆ, 4.00 ಮಹಿಳಾರಂಗ: 'ಚರ್ಚೆ' ವಿಷಯ– ಗಂಡಸರಿಗೆ ಮನೆಗೆಲಸದಲ್ಲಿ ಪಾಲು ಬೇಡವೇ? ಭಾಗವಹಿಸುವವರು ರುಕ್ಮಿಣಿ ಚಂದ್ರನ್, ಉಗ್ರ ನರಸಿಂಹೇಗೌಡ, ಸುಜಾತ ಹಾಗೂ ಡಾ. ಕಲಾಶ್ರೀ.

ಸಂಜೆ: 6.50 ಕೃಷಿರಂಗ: ಕಿಸಾನ್ ವಾಣಿ, 9.30 ಹಳ್ಳಿ ಹಾಡು: ಭಾಗವಹಿಸುವವರು– ಲಕ್ಷ್ಮೀ ಸಾಗರದ ಕೆಂಚಮ್ಮ, ಪ್ರಸ್ತುತಿ– ಅಬ್ದುಲ್ ರಶೀದ್, **ರಾತ್ರಿ:** 10.30 ಸವಿನೆನಪು.

ಇಂದಿನ ಪಂಚಾಂಗ

27.3.2023 ಸೋಮವಾರ, ಮಳೆ ನಕ್ಷತ್ರ: ಉತ್ತರಭಾದ್ರ, 18.03.2023ರಿಂದ 30.03.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ರೋಹಿಣಿ, ರಾಹುಕಾಲ: ಬೆಳಗ್ಗೆ 7.30 ರಿಂದ 9ರವರೆಗೆ

■ **ಗಣಪತಿ ಸೇವಾ ಮಂಡಳಿ ಟ್ರಸ್ಟ್ :** ನಾಲ್ಕನೇ ರಾಮೋತ್ಸವ, ಬೆಳಗ್ಗೆ 7.30ರಿಂದ ಸೀತಾ ಲಕ್ಷ್ಮಣ, ಹನುಮದ್ ಸಮೇತ ಶ್ರೀ ರಾಮಚಂದ್ರ ಸ್ವಾಮಿಗೆ ಪಂಚಾಮೃತ ಅಭಿಷೇಕ, ಸಹಸ್ರನಾಮಾರ್ಚನೆ, ಮಹಾಮಂಗಳಾರತಿ, ಸಂಜೆ 6ರಿಂದ ಸ್ವರಾಂಜಲಿ ಸಂಗೀತ ಕೇಂದ್ರ ತಂಡದವರಿಂದ ಭಜನೆ, ಸಂಜೆ 6.30ರಿಂದ ಹುಸೇನ್ ಸಾಬ್ ಅವರಿಂದ ದಾಸವಾಣಿ, ಸ್ಥಳ: ರಜತ್ ಸಭಾ ಮಂಟಪ, ಗಣಪತಿ ದೇವಸ್ಥಾನ, 'ಐ' ಬ್ಲಾಕ್, ರಾಮಕೃಷ್ಣನಗರ.

■ **ಆದರ್ಶ ಸೇವಾ ಸಂಘ :** ಆಚಾರ್ಯತ್ರಯರ ಜಯಂತಿ ಹಾಗೂ ಸಾಮೂಹಿಕ ಧರ್ಮೋಪನಯನ, ತ್ರಿಮತಸ್ಥ ಬ್ರಾಹ್ಮಣ ವಟುಗಳಿಗೆ ಋಗ್ವೇದ ಪುರಸ್ಸರವಾಗಿ ಸಾಮೂಹಿಕ ಧರ್ಮೋಪನಯನ, ಸ್ಥಳ: ಶ್ರೀ ಮಹಾಜನ ಸಭಾ, ಶ್ರೀ ಸೀತಾ ರಾಘವ ಪ್ರಾರ್ಥನಾ ಮಂದಿರ, ಕೃಷ್ಣಮೂರ್ತಿಪುರಂ, ಬೆಳಗ್ಗೆ 9.30ರಿಂದ.

■ **ತಯೀನ್ಯಾಸ್ ಶ್ರೀ ವಿದ್ಯಾ ಫೌಂಡೇಷನ್ :** 14ನೇ ವರ್ಷದ ವಸಂತ ನವರಾತ್ರಿ ಮಹೋತ್ಸವ, ಬೆಳಗ್ಗೆ 8.30ರಿಂದ ಮಹಾಭಿಷೇಕ, ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಶ್ರೀ ಚಕ್ರಾರ್ಚನೆ, ಸಂಜೆ 5.30ರಿಂದ ಶ್ರೀ ದಶವಾರಾಹಿ ಹೋಮ, ಶ್ರೀ ಲಘು ವಾರಾಹಿ, ಶ್ರೀ ಸ್ವಪ್ನ ವಾರಾಹಿ, ಶ್ರೀ ತಿರಸ್ಕರಣೀ ವಾರಾಹಿ, ಶ್ರೀ ಅಶ್ವಾರೂಢ ವಾರಾಹಿ, ಶ್ರೀ ಧೂಮ್ರ ವಾರಾಹಿ, ಶ್ರೀ ಕಿರಾತ ವಾರಾಹಿ, ಶ್ರೀ ವಾರಾಹಿ ಪರಮೇಶ್ವರಿ ಶ್ರೀ ಶತ್ರು ಸಂಹಾರ ವಾರಾಹಿ, ಶ್ರೀ ವಾರ್ತಾಳಿ, ಶ್ರೀ ಮಹಾ ವಾರಾಹಿ, ಆವರಣಾಂಗ ಹೋಮ, ಪೂರ್ಣಾಹುತಿ, ಬಲಿ ಹರಣ, ಕುಂಕುಮಾರ್ಚನೆ, ಮಹಾ ಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ತಯೀನ್ಯಾಸ್, ಜಯಲಕ್ಷ್ಮೀಪುರಂ.

■ **ಭಾರತೀ ಸ್ತ್ರೀ ಸಮಾಜ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಚಾರಿಟಬಲ್ ವಿಶ್ವಸ್ಥ ಮಂಡಳಿ :** ಶ್ರೀ ರಾಮೋತ್ಸವದ ಅಂಗವಾಗಿ ಸಂಗೀತ ಕಛೇರಿ, ಸಾಂಸ್ಕೃತಿಕ ಕಾರ್ಯಕ್ರಮಗಳು, ಪ್ರೊ. ಶೀಲಾ ಶ್ರೀಧರ್‌ರವರಿಂದ 'ಭರತಾಂಜಲಿ ನೃತ್ಯ ಶಾಲೆ' ನಾಟ್ಯ ಪ್ರದರ್ಶನ, ಸ್ಥಳ: ಭಾರತೀ ಸ್ತ್ರೀ ಸಮಾಜ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಚಾರಿಟಬಲ್ ವಿಶ್ವಸ್ಥ ಮಂಡಳಿ ಆವರಣ, ಯಾದವಗಿರಿ, ಸಂಜೆ 6 ಗಂಟೆಗೆ.

■ **ಶ್ರೀರಾಮ ಸೇನಾ ಮಂಡಳಿ ಚಾರಿಟಬಲ್ ಟ್ರಸ್ಟ್, ಮೈಸೂರು ಉತ್ತರ :** 29ನೇ ಶ್ರೀ ರಾಮನವಮಿ ಸಂಗೀತೋತ್ಸವ–2023, ಕೊಳಲು ವಾದನ–ವಿದ್ವಾನ್ ವಿ॥ ವಂಶೀಧರ್, ಪಿಟೀಲು– ವಿ॥ ಚಾರುಲತ ರಾಮಾನುಜನ್, ಮೃದಂಗ– ವಿ॥ ಅನಿರುಧ್ ಭಟ್, ಘಟ– ವಿ॥ ಮಂಜುನಾಥ್, ಸ್ಥಳ: ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ವಿ.ವಿ. ಮೊಹಲ್ಲಾ, ಸಂಜೆ 6.15ರಿಂದ.

■ **ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ :** ಮೈಸೂರು ರಂಗಹಬ್ಬ ಸಮಾರೋಪ ಸಮಾರಂಭ, ಸಮಾರೋಪ ನುಡಿ: ಹಿರಿಯ ರಂಗ ನಿರ್ದೇಶಕ ಸಿ. ಬಸವಲಿಂಗಯ್ಯ, ಮುಖ್ಯ ಅತಿಥಿಗಳು: ಹಿರಿಯ ರಂಗಕರ್ಮಿಗಳಾದ ಶ್ರೀಮತಿ ರಾಮೇಶ್ವರಿ ವರ್ಮ, ಶ್ರೀಮತಿ ಇಂದಿರಾ ನಾಯರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ರಾಜೇಶ್ ರಂಗವಲ್ಲಿ, ನಾಟಕ ಪ್ರದರ್ಶನ: ಬೇಕಾಗಿದ್ದಾರೆ, ಸ್ಥಳ: ಕಿರುರಂಗ ಮಂದಿರ, ಸಂಜೆ 6.30ಕ್ಕೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 27 ಸೋಮವಾರ 2023

ಸಂಪುಟ: 43 | ಸಂಚಿಕೆ: 336 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಸಮ್ಮುಖದಲ್ಲಿ ಪಂಚರತ್ನ ಯಾತ್ರೆಗೆ ಅದ್ಧೂರಿ ತೆರೆ

ಮೈಸೂರಲ್ಲಿ ಜೆಡಿಎಸ್ ಮಹಾಶಕ್ತಿ ಪ್ರದರ್ಶನ



ಮೈಸೂರಿನ ಉತ್ತನಹಳ್ಳಿ ಸಮೀಪದ ಮೈದಾನದಲ್ಲಿ ನಿರ್ಮಿಸಿದ್ದ ಭವ್ಯ ವೇದಿಕೆಯಲ್ಲಿ ಭಾನುವಾರ ಸಂಜೆ 'ಪಂಚರತ್ನ' ರಥಯಾತ್ರೆ ಸಮಾರೋಪ ಸಮಾವೇಶವನ್ನು ಜೆಡಿಎಸ್ ವರಿಷ್ಠ ಹೆಚ್.ಡಿ.ದೇವೇಗೌಡರು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು.



ಮೈಸೂರು,ಮಾ.26(ಎಸ್‌ಬಿಡಿ)–ವಿಧಾನಸಭಾ ಸಾರ್ವತ್ರಿಕ ಚುನಾವಣೆ ಹಿನ್ನೆಲೆಯಲ್ಲಿ ಜೆಡಿಎಸ್ ಹಮ್ಮಿಕೊಂಡಿದ್ದ 'ಪಂಚರತ್ನ' ರಥಯಾತ್ರೆ ಮೈಸೂರಿನಲ್ಲಿ ಭಾನುವಾರ ಯಶಸ್ವಿಯಾಗಿ ಸಮಾರೋಪಗೊಂಡಿತು.

ಮೈಸೂರಿನ ಉತ್ತನಹಳ್ಳಿ ಸಮೀಪದ ನೂರಾರು ಎಕರೆ ವಿಶಾಲ ಮೈದಾನದಲ್ಲಿ ನಿರ್ಮಿಸಿದ್ದ ಭವ್ಯ ವೇದಿಕೆಯಲ್ಲಿ ಭಾನುವಾರ ಸಂಜೆ 'ಪಂಚರತ್ನ' ರಥಯಾತ್ರೆ ಸಮಾರೋಪ ಸಮಾವೇಶವನ್ನು ಮಾಜಿ ಪ್ರಧಾನಿ, ಜೆಡಿಎಸ್ ವರಿಷ್ಠ ಹೆಚ್.ಡಿ.ದೇವೇಗೌಡರು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು. ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ, ಶಾಸಕರಾದ ಹೆಚ್.ಡಿ.ರೇವಣ್ಣ, ಜಿ.ಟಿ.ದೇವೇಗೌಡ, ▶ 6ನೇ ಪುಟಕ್ಕೆ

ಮತ್ತಷ್ಟು ಸಚಿತ್ರ ವರದಿ [ಪುಟ–5]

'ಪಂಚರತ್ನ ರಥಯಾತ್ರೆ'ಯಲ್ಲಿ 5,500ಕ್ಕೂ ಹೆಚ್ಚು ಗ್ರಾಮಗಳಿಗೆ ಭೇಟಿ ನೀಡಿದ ಮಾಜಿ ಸಿಎಂ ಕುಮಾರಸ್ವಾಮಿ, ಅಲ್ಲಿನ ಸಾರ್ವಜನಿಕ ಸಮಸ್ಯೆಗಳ ಬಗ್ಗೆ ಮಾಹಿತಿ ಸಂಗ್ರಹಿಸಿರುವುದು ವಿಶೇಷ. ಕೃಷಿ ಉತ್ಪನ್ನಗಳಿಂದಲೇ ವಿವಿಧ ಬಗೆಯ ಬೃಹತ್ ಹಾರಗಳನ್ನು ತಯಾರಿಸಿ ಕುಮಾರಸ್ವಾಮಿ ಅವರನ್ನು ಗೌರವಿಸಿದ್ದು 'ಏಷ್ಯಾ ಬುಕ್ ಆಫ್ ರೆಕಾರ್ಡ್ಸ್', 'ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್' ದಾಖಲೆಗೆ ಪಾತ್ರವಾಗಿರುವುದು ಗಮನಾರ್ಹ.

ಚುನಾವಣೆಯಲ್ಲಿ ಜೆಡಿಎಸ್ ದೊಡ್ಡ ಸಾಧನೆ ಮಾಡಲಿದೆ

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ವಿಶ್ವಾಸ

ಮೈಸೂರು, ಮಾ.26(ಎಸ್‌ಬಿಡಿ)– ನಾನು ಭಗವದ್ಗೀತೆಯಲ್ಲಿ ಹೇಳಿದಂತೆ ಫಲಾಪೇಕ್ಷೆಯಿಲ್ಲದೆ ದುಡಿಯುತ್ತಾ ಬಂದಿದ್ದೇನೆ. ಇದನ್ನು ಗಮನಿಸಿ ಜನ ನಮ್ಮ ಪಕ್ಷಕ್ಕೆ ಮತ್ತೆ ಆಶೀರ್ವಾದ ಮಾಡುತ್ತಾರೆ. ಈ ಚುನಾವಣೆಯಲ್ಲಿ ಜೆಡಿಎಸ್ ದೊಡ್ಡ ಸಾಧನೆ ಮಾಡಲಿದೆ ಎಂಬ ನಂಬಿಕೆ ನನಗಿದೆ ಎಂದು ಮಾಜಿ ಪ್ರಧಾನಿ, ಜೆಡಿಎಸ್ ವರಿಷ್ಠ ಹೆಚ್.ಡಿ.ದೇವೇಗೌಡರು ವಿಶ್ವಾಸ ವ್ಯಕ್ತಪಡಿಸಿದರು.

ಮೈಸೂರಿನಲ್ಲಿ ಭಾನುವಾರ ನಡೆದ 'ಪಂಚರತ್ನ' ರಥಯಾತ್ರೆ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ನಾನೊಬ್ಬ ಕನ್ನಡಿಗ, ಈ ದೇಶಕ್ಕಾಗಿ ಮಾಡಿದ ಕೆಲಸದ ಬಗ್ಗೆ ನನಗೆ ಹೆಮ್ಮೆ ಇದೆ. ನಮ್ಮ ನೆರೆ ರಾಷ್ಟ್ರಗಳೊಂದಿಗೆ ಸೌಹಾರ್ದಕ್ಕಾಗಿ ಮಾಡಿದ ಕೆಲಸ ನೆಮ್ಮದಿ ತಂದುಕೊಟ್ಟಿದೆ. ನಾನು ಮಾಡಿದ ಕೆಲಸಗಳನ್ನು ವಿದೇಶಗಳಲ್ಲೂ ಇಷ್ಟು ವರ್ಷಗಳ ನಂತರವೂ ಸ್ಮರಿಸುತ್ತಿದ್ದಾರೆ ಎಂಬುದನ್ನು ಈಚೆಗೆ ಬಂದ ಗ್ರಂಥದಿಂದ ತಿಳಿದಿದ್ದೇನೆ. ನಾನು ಬಸವಣ್ಣ, ಕೆಂಪೇಗೌಡ, ನಾಲ್ವಡಿ ಕೃಷ್ಣರಾಜ ಒಡೆಯರ್, ಸರ್.ಎಂ.ವಿಶ್ವೇಶ್ವರಯ್ಯ, ಟಿಪ್ಪು ಸುಲ್ತಾನ್, ಕನಕದಾಸ, ಪುರಂದರದಾಸ, ಕುವೆಂಪು ಮತ್ತು ಹಲವು ಮಹನೀಯರು ಹುಟ್ಟಿದ ನಾಡಿನಲ್ಲಿ ಹುಟ್ಟಿ, ಜಗತ್ತಿನ ಏಳಿಗೆಗಾಗಿ ▶ 6ನೇ ಪುಟಕ್ಕೆ

ಟ್ರ್ಯಾಲಿಯಲ್ಲಿ ತೆರಳಿ ಜನಸಮೂಹಕ್ಕೆ ಕೈಮುಗಿದ ಗೌಡರು



'ಪಂಚರತ್ನ' ರಥಯಾತ್ರೆ ಸಮಾರೋಪ ಸಮಾವೇಶದಲ್ಲಿ ಭಾವುಕ ಸನ್ನಿವೇಶವೊಂದು ನಡೆಯಿತು. ಅನಾರೋಗ್ಯದ ನಡುವೆಯೂ ವೈದ್ಯರ ಅನುಮತಿ ಮೇರೆಗೆ ಸಮಾವೇಶಕ್ಕೆ ಆಗಮಿಸಿದ್ದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಟ್ರ್ಯಾಲಿ ಮೂಲಕ ಜನ ಸಮೂಹದ ನಡುವೆ ತೆರಳಿ ಕೈಮುಗಿದು ಧನ್ಯವಾದ ತಿಳಿಸಿದರು. ಇದಕ್ಕಾಗಿ ವೇದಿಕೆಯಿಂದ ಟ್ರ್ಯಾಲಿ ಹಾಗೂ ಆಸನ ವ್ಯವಸ್ಥೆ ಮಾಡಲಾಗಿತ್ತು. ದೇವೇಗೌಡರನ್ನು ಕುರ್ಚಿಯಲ್ಲಿ ಕೂರಿಸಿ, ಟ್ರ್ಯಾಲಿಯಲ್ಲಿ ಕರೆದೊಯ್ಯಲಾಯಿತು. ಪುತ್ರರಾದ ಹೆಚ್.ಡಿ.ಕುಮಾರಸ್ವಾಮಿ, ಹೆಚ್.ಡಿ.ರೇವಣ್ಣ, ಮೊಮ್ಮಕ್ಕಳಾದ ನಿಖಿಲ್ ಕುಮಾರಸ್ವಾಮಿ, ಪ್ರಜ್ವಲ್ ಹಾಗೂ ಸೂರಜ್ ರೇವಣ್ಣ ಜೊತೆಯಲ್ಲಿದ್ದರು. ಈ ವೇಳೆ ಹೆಚ್.ಡಿ.ದೇವೇಗೌಡರು ಜನರತ್ತ ಕೈಮುಗಿದು ಧನ್ಯವಾದ ತಿಳಿಸುವಾಗ ಎಲ್ಲರೂ ಭಾವುಕರಾದರು. ದೇವೇಗೌಡರಾದಿಯಾಗಿ ಎಲ್ಲರ ಕಣ್ಣಾಲಿಗಳಲ್ಲಿ ನೀರು ತುಂಬಿತ್ತು. ಆರಂಭದಲ್ಲಿ ಟ್ರ್ಯಾಲಿಯಲ್ಲಿ ತೆರಳಿ ನಿಮ್ಮನ್ನು ಬೆಳೆಸಿರುವ ಜನರಿಗೆ ಕೈಮುಗಿಯಬೇಕೆಂದು ಹೆಚ್.ಡಿ.ಕುಮಾರಸ್ವಾಮಿ ತಂದೆಯವರನ್ನು ಒಪ್ಪಿಸಿದರು.

123 ಸ್ಥಾನದ ಗುರಿ ಸಾಕಾರಗೊಳಿಸಿ

ನಾಡಿನ ಜನರಿಗೆ ನೆಮ್ಮದಿ ಬದುಕು ನೀಡಲು ಮಾಜಿ ಸಿಎಂ ಕುಮಾರಸ್ವಾಮಿ ಮನವಿ



ಮೈಸೂರು,ಮಾ.26(ಎಸ್‌ಬಿಡಿ)–ನಾಡಿನ ಜನರ ನೆಮ್ಮದಿ ಬದುಕಿಗಾಗಿ ಶಪಥ ಮಾಡಿ ಹೋರಾಟ ನಡೆಸುತ್ತಿದ್ದೇನೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಹೇಳಿದರು.

ಮೈಸೂರಿನಲ್ಲಿ ನಡೆದ 'ಪಂಚರತ್ನ' ರಥಯಾತ್ರೆ ಸಮಾರೋಪ ಸಮಾವೇಶದಲ್ಲಿ ಮಾತನಾಡಿದ ಅವರು, ಎರಡು ಬಾರಿ ಹೃದಯ ಶಸ್ತ್ರಚಿಕಿತ್ಸೆಯಾದರೂ ನಾನು ದಿನದ 18 ಗಂಟೆ ಪ್ರವಾಸ ಮಾಡುತ್ತಿರುವುದು ಮುಖ್ಯಮಂತ್ರಿಯಾಗಬೇಕೆಂಬ ಆಸೆಯಿಂದಲ್ಲ. ಹೆಚ್.ಡಿ.ದೇವೇಗೌಡರ ಆಶಯದಂತೆ ನಾಡಿನ ಜನರ ನೆಮ್ಮದಿ ಬದುಕಿಗೆ ಶಪಥ ಮಾಡಿ, ಈ ಹೋರಾಟ ನಡೆಸಿದ್ದೇನೆ. ದೇವೇಗೌಡರು ಕಟ್ಟಿ ಬೆಳೆಸಿದ ಕನ್ನಡಿಗರ ಪಕ್ಷವಾದ ಜೆಡಿಎಸ್‌ಗೆ ಆಶೀರ್ವದಿಸಿ. ಪಂಚರತ್ನ ಯೋಜನೆ ಅನುಷ್ಠಾನವಾದರೆ ರಾಜ್ಯದಲ್ಲಿ ಸುವರ್ಣಯುಗ ನಿರ್ಮಾಣಗುತ್ತದೆ. ಇದಕ್ಕಾಗಿ 123 ಸ್ಥಾನ ಗೆಲ್ಲುವ ಗುರಿಯನ್ನು ಸಾಕಾರಗೊಳಿಸಿ ಎಂದು ಬೇಡಿಕೊಂಡರು.

ಹಾಸನಾಂಬೆಯ ಪುಣ್ಯಕ್ಷೇತ್ರ ನನ್ನ ಜನ್ಮಭೂಮಿ. ರಾಮನಗರ ನನ್ನ ರಾಜಕೀಯ ಕರ್ಮಭೂಮಿ. ಹಳೇ ಮೈಸೂರು ಭಾಗದ ಜನ ನನಗೆ ಶಕ್ತಿ ತುಂಬಿದ್ದಾರೆ. ನಾವು ಮಾಜಿ ಪ್ರಧಾನಿ, ಮಾಜಿ ಮುಖ್ಯಮಂತ್ರಿಯ ಮಕ್ಕಳೇ ಇರಬಹುದು. ಆದರೆ ನಾವು ಎಂದೂ ರೈತರ ಮಕ್ಕಳಾಗಿರಬೇಕು ಎಂಬುದು ತಂದೆಯ ಆದೇಶ. ಹಾಗಾಗಿ ಜನ ಹಾಗೂ ದೇವರ ಆಶೀರ್ವಾದದೊಂದಿಗೆ 123 ಸ್ಥಾನಗಳಲ್ಲಿ ಗೆಲ್ಲುವ ವಿಶ್ವಾಸದೊಂದಿಗೆ ಕೈಗೊಂಡಿದ್ದ ಪಂಚರತ್ನ ಯಾತ್ರೆ ಯಶಸ್ವಿಯಾದ ಹಿನ್ನೆಲೆಯಲ್ಲಿ ಸಮಾರೋಪ ಸಮಾವೇಶ ನಡೆಸಲಾಗುತ್ತಿದೆ. ಪ್ರಧಾನಿ ಮೋದಿ ಅವರು 10 ಬಾರಿ ಬಂದರೂ ಈ ರೀತಿಯ ಕಾರ್ಯಕ್ರಮ ಮಾಡಲು ಸಾಧ್ಯವಿಲ್ಲ. ನಮ್ಮ ಬಳಿ ಹಣ ಇಲ್ಲ, ಕುಕ್ಕರ್ ಕೊಡಲು ಸಾಧ್ಯವಿಲ್ಲ. ದಯವಿಟ್ಟು ಕುಕ್ಕರ್‌ಗೆ ಆಸೆ ಪಡಬೇಡಿ. ಅದನ್ನು ಕೊಳ್ಳುವ ಶಕ್ತಿ ನೀಡುವುದೇ ನಮ್ಮ ಆಶಯ. ಬಿಜೆಪಿ ನಾಯಕರ ದಂಡು ಕಂಡು ಮರುಳಾಗಬೇಡಿ. ಯಾವುದೇ ಆಮಿಷ ಹಾಗೂ ಜಾತಿ ವ್ಯಾಮೋಹಕ್ಕೆ ಒಳಗಾಗದೆ ರಾಜ್ಯದ ಹಿತಕ್ಕಾಗಿ ಒಮ್ಮೆ ಜೆಡಿಎಸ್‌ಗೆ ಸಂಪೂರ್ಣ ಬಹುಮತ ನೀಡಿ ಎಂದು ಮನವಿ ಮಾಡಿದರು. ಕೋಲಾರದಲ್ಲಿ ರೈತರು, ರೈತರ ಮಕ್ಕಳು ನಮ್ಮ ಪಕ್ಷಕ್ಕೆ ದೇಣಿಗೆ ನೀಡಿ ಹರಸಿದ್ದಾರೆ. ಚಿಕ್ಕನಾಯಕನಹಳ್ಳಿ, ಕೆ.ಆರ್.ಪೇಟೆ, ಚಾಮರಾಜನಗರ, ತಿಪಟೂರು, ಉತ್ತರ ಕರ್ನಾಟಕ ಹೀಗೆ ಒಂದೊಂದು ▶ 6ನೇ ಪುಟಕ್ಕೆ

> “ ಪಂಜಾಬ್‌ನ ರೈತರು ಬತ್ತದ ತಳಿಗೆ ಹೆಚ್.ಡಿ.ದೇವೇಗೌಡರ ಹೆಸರಿಟ್ಟಿದ್ದಾರೆ. ಆದರೆ ರಾಷ್ಟ್ರೀಯ ಪಕ್ಷಗಳಿಗೆ ಆ ದೊಡ್ಡತನವಿಲ್ಲ. ದೇವೇಗೌಡರು ನಾಡಿನ ರೈತರ ಕಷ್ಟ ಪರಿಹರಿಸಲು ಹೋರಾಟ ಮಾಡಿದ್ದಾರೆ. ನಿಮ್ಮ ಮಕ್ಕಳಾದ ನಾವೂ ಜನರ ತೆರಿಗೆ ಹಣ ಲೂಟಿ ಮಾಡಿಲ್ಲ, ಜನರೇ ನಮ್ಮ ಆಸ್ತಿ ಎಂದು ಹೇಳಿದ್ದೇನೆ. ಕನ್ನಡಿಗ ದೇವೇಗೌಡರ ಸಾಧನೆ ದೆಹಲಿಯ ಕಡತದಲ್ಲಿದೆ. ನಾನು 2 ಬಾರಿ ಸಿಎಂ ಆಗಿ ಉತ್ತಮ ಕೆಲಸ ಮಾಡಿದ್ದೇನೆ. ಆದರೆ ಪ್ರಚಾರವಾಗಲಿಲ್ಲ. 1994ರ ವಿಧಾನಸಭಾ ಚುನಾವಣೆಯಲ್ಲಿ ಘಟಾನುಘಟಿಗಳಿದ್ದರು. ಆಗ ಹಳೇ ಕರ್ನಾಟಕ ಭಾಗದಲ್ಲಿ 74 ಸ್ಥಾನದಲ್ಲಿ ಗೆಲ್ಲಿಸಿ, ದೇವೇಗೌಡರನ್ನು ಸಿಎಂ ಮಾಡಿದ್ದಿರಿ. ಅಂದು ದೇವೇಗೌಡರಿಗೆ ನೀಡಿದಂತೆ ನಿಮ್ಮ ಮನೆ ಮಗನಾದ ನನಗೂ ಆಶೀರ್ವದಿಸಿ. ಜಾತಿ ವ್ಯಾಮೋಹ, ಆಮಿಷಗಳಿಗೆ ಒಳಗಾಗದೆ ಒಮ್ಮೆ ಜೆಡಿಎಸ್ ಪಕ್ಷಕ್ಕೆ ಸ್ಪಷ್ಟ ಬಹುಮತದ ಅಧಿಕಾರ ನೀಡಿ, ಪರೀಕ್ಷಿಸಿ. ಏಳೂವರೆ ದಶಕದಲ್ಲಿ ಯಾವ ರಾಜಕೀಯ ಪಕ್ಷಗಳಿಂದಲೂ ಸಾಧ್ಯವಾಗದಿರುವುದನ್ನು ನಾನು ಸಾಧಿಸಿ ತೋರಿಸುತ್ತೇನೆ. ಕಳೆದ ಬಾರಿ ಮಂಡ್ಯದಲ್ಲಿ 7ಕ್ಕೆ 7, ಹಾಸನದಲ್ಲಿ 6, ಮೈಸೂರಿನಲ್ಲಿ 5 ಕ್ಷೇತ್ರಗಳಲ್ಲಿ ಗೆಲ್ಲಿಸಿದ್ದೀರಿ. ಮುಂದಿನ ಚುನಾವಣೆಯಲ್ಲೂ ಈ ಎಲ್ಲಾ ಕ್ಷೇತ್ರಗಳಲ್ಲಿ ಗೆಲ್ಲಿಸಿಕೊಡಿ. ಅಲ್ಲದೆ ಕೋಲಾರ ಮತ್ತು ಚಿಕ್ಕಬಳ್ಳಾಪುರದಲ್ಲಿ ತಲಾ 10, ತುಮಕೂರಿನಲ್ಲಿ ಎಲ್ಲಾ 11 ಕ್ಷೇತ್ರದಲ್ಲೂ ಗೆಲ್ಲುವ ವಿಶ್ವಾಸವಿದೆ. **–ಕುಮಾರಸ್ವಾಮಿ**

ನಕ್ಕರೆ ಅದೇ ಸ್ವರ್ಗ

ಟೀಚರ್ : ಮಕ್ಕಳೇ ನಿಮ್ಮ ಕ್ಯಾರೆಕ್ಟರ್ ಚೆನ್ನಾಗಿ ಇರಬೇಕು ಅಂದ್ರೆ, ಎಲ್ಲಾ ಹೆಂಗಸರನ್ನೂ ನಿಮ್ಮ ತಾಯಿ ಅಂತ ತಿಳ್ಕೊಬೇಕು...

ಗುಂಡ : ಎಲ್ಲರನ್ನು ನಮ್ಮ ತಾಯಿ ಅಂತ ತಿಳ್ಕೊಂಡ್ರೆ ನಮ್ಮ ಅಪ್ಪನ ಕ್ಯಾರೆಕ್ಟರ್ ಹಾಳಾಗುತ್ತೆ ಮಿಸ್...

ಮೈಸೂರು ಮಿತ್ರ

ಸೋಮವಾರ, 27 ಮಾರ್ಚ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಮಹಾತ್ಮರು ದೇಹರೂಪದಲ್ಲಿರುವಾಗ ಒಂದೆಡೆ ಮಾತ್ರ ಸಿಗುತ್ತಾರೆ. ದೇಹ ಬಿಟ್ಟ ಮೇಲೆ ಎಲ್ಲೆಲ್ಲೂ ದೊರಕುತ್ತಾರೆ. – ಸಿದ್ದೇಶ್ವರ ಸ್ವಾಮೀಜಿ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ತಾಳಕ್ಕೆ ತಕ್ಕಂತೆ ಕುಣಿಯಬೇಕು, ಕಾಲಕ್ಕೆ ತಕ್ಕಂತೆ ನಡೆಯಬೇಕು...

ನಿಮ್ಮ ಪತ್ರಗಳು

ಆಧಾರ್ ಪ್ಯಾನ್ ಜೋಡಣೆಯ ಯಡವಟ್ಟು



ಮಾನ್ಯರೆ,

ಇತ್ತೀಚೆಗೆ ಎಲ್ಲಾ ಸಾಮಾಜಿಕ ಜಾಲತಾಣಗಳಲ್ಲಿ ಆಧಾರ್, ಪ್ಯಾನ್ ಜೋಡಣೆಯದೇ ಸುದ್ದಿ. ಮಾ.31 ರೊಳಗೆ ನಿಮ್ಮ ಆಧಾರ್, ಪ್ಯಾನ್ ಜೋಡಣೆ ಮಾಡಿಸಿಕೊಳ್ಳದಿದ್ದರೆ ನಿಮ್ಮ ಪ್ಯಾನ್ ಕಾರ್ಡ್ ನಿಷ್ಕ್ರಿಯಗೊಳ್ಳುವುದು ಎಂಬ ಭಯದಿಂದ ಎಲ್ಲರೂ ಅದನ್ನು ಮಾಡಿಸುವಲ್ಲಿ ಮುಗಿಬಿದ್ದಿದ್ದಾರೆ. ಸರಿ, ಆದಾಯ ತೆರಿಗೆ ವಿಭಾಗದ ಸೂಚನೆಯಾದ್ದರಿಂದ ಪಾಲಿಸೋಣವೆಂದು ನನ್ನ ಪತ್ನಿಯ(ಗೃಹಿಣಿ) ದಾಖಲೆಗಳನ್ನು ಆಧಾರ್ ತೆರಿಗೆಯ ಅಂತರ್ಜಾಲ ತಾಣದಲ್ಲಿ ಅಪ್‌ಲೋಡ್ ಮಾಡತೊಡಗಿದೆ. ಆಧಾರ್ ಮತ್ತು ಪ್ಯಾನ್ ಜೋಡಣೆ ಮಾಡಲು 1000/- ರೂ. ಪಾವತಿಸುವಂತೆ ತಾಣ ಸೂಚಿಸಿತು. ಕಾರಣ ತಿಳಿದುಕೊಳ್ಳಲು ಮುಂದಾದಾಗ, ಆಧಾರ ತೆರಿಗೆಯ ಪ್ರಕಾರ, ಹಲವಾರು ನಕಲಿ ಪ್ಯಾನ್ ಕಾರ್ಡ್‌ಗಳನ್ನು ಅನರ್ಹಗೊಳಿಸಲು ಈ ಹೆಜ್ಜೆ ಎಂದು ತಿಳಿದುಬಂತು. ಒಂದು ವೇಳೆ ಈ 1000/- ರೂ. ಪಾವತಿಸದಲ್ಲಿ ಮುಂದೆ ತಾವುಗಳು ಮಾಡುವ ವ್ಯವಹಾರಗಳಿಗೆ ತೊಂದರೆ ಅನುಭವಿಸಬೇಕಾಗಬಹುದು. ಇತರೆ ಖಾಸಗಿ ಕೇಂದ್ರಗಳು ಈ ಜೋಡಣೆಗೆ 1200/- ರಿಂದ 1500/- ರೂ. ಈಗಾಗಲೇ ಪಡೆಯುತ್ತಿವೆ.

ಮಾನ್ಯರೆ, ಮಧ್ಯಮ ವರ್ಗದವರಿಗೆ ಈ ದುಬಾರಿ ಶುಲ್ಕವೇಕೆ? ತಮಾಷೆಯ ವಿಚಾರವೆಂದರೆ, ನಾನು ನನ್ನ ಪತ್ನಿಯ ಎಲ್ಲಾ ವಿವರ ಕೊಟ್ಟನಂತರ 1000/- ರೂ. ಪಾವತಿಸಿದೆ. ಅದಕ್ಕೆ ರಶೀದಿಯೂ ಸಹ ಬಂತು, ಸದ್ಯ ಜೋಡಣೆಯಾಯಿತಲ್ಲ ಎಂದು ನಿಟ್ಟುಸಿರುಬಿಟ್ಟೆ, ಆದರೆ ಸ್ವಲ್ಪ ಸಮಯದ ನಂತರ ನೀವು ಕೊಟ್ಟಿರುವ ಆಧಾರ್ ಹಾಗೂ ಪ್ಯಾನ್ ನಡುವೆ ವ್ಯತ್ಯಾಸವಿರುವ ಕಾರಣದಿಂದ ಜೋಡಣೆ ಮಾಡಲಾಗದು ಹಾಗೂ ಇದನ್ನು ಪ್ಯಾನ್ ಹಾಗೂ ಆಧಾರ್ ಕೇಂದ್ರದಲ್ಲಿ ಸರಿಪಡಿಸಿ ಎಂಬ ಸಂದೇಶ ಬಂದಿದೆ.

ಸಾರ್ವಜನಿಕ ಹಿತಾಸಕ್ತಿಯಿಂದ ನನ್ನ ಕೆಲವು ಪ್ರಶ್ನೆಯಿದೆ.

1. ಎಲ್ಲ ವಿವರ ಪಡೆದ ಮೇಲೂ ಪ್ಯಾನ್ ಹಾಗೂ ಆಧಾರ್ ನಡುವೆ ವ್ಯತ್ಯಾಸವಿದ್ದಾಗ ಹಣವೇಕೆ ಪಾವತಿ ಮಾಡಿಸಿಕೊಳ್ಳುತ್ತೀರಿ.
2. ಬ್ಯಾಂಕ್‌ನಲ್ಲಿ ಈ ಸಣ್ಣ ಅಪ್‌ಲೋಡ್ ಕೆಲಸವನ್ನು ಖಡ್ಡಾಯವಾಗಿ ಮಾಡಿದ್ದರೆ, ಇಂದು ಸಾರ್ವಜನಿಕರೇಕೆ ಈ ದುಬಾರಿ ಹಣ ಪಾವತಿಸಬೇಕಿತ್ತು.
3. ಪ್ಯಾನ್ ಹಾಗೂ ಆಧಾರ್ ಮಾಡಿಸಿಕೊಂಡು ಹಲವಾರು ವರ್ಷ ವ್ಯವಹರಿಸಿದ ನಂತರ, ಆದಾಯ ತೆರಿಗೆ ವಿಭಾಗವು ನಕಲಿ ಕಾರ್ಡ್‌ಗಳನ್ನು ಕಂಡುಹಿಡಿಯಲು ಸರಿಯಾದ ದಾಖಲೆಯಿರುವ ನಾವೇಕೆ ಈ ದುಬಾರಿ ಶುಲ್ಕ ಪಾವತಿಸಬೇಕು.
4. 80 ವರ್ಷ ಮೇಲ್ಪಟ್ಟವರಿಗೆ ರಿಯಾಯ್ತಿ ಇದೆಯೆಂದು ತಮ್ಮ ತಾಣದಲ್ಲಿ ತಿಳಿಸಿದೆ. ಇದು ನಿಜಕ್ಕೂ ಹಾಸ್ಯಾಸ್ಪದ.

ಈ ಪ್ರಶ್ನೆಗಳಿಗೆ ಸಂಬಂಧಪಟ್ಟವರು ಉತ್ತರಿಸುವರೇ ದಯವಿಟ್ಟು ಇದನ್ನು ಸರಿಪಡಿಸಿ ಸಾರ್ವಜನಿಕರಿಗೆ ಆಗುತ್ತಿರುವ ಅನ್ಯಾಯ ತಪ್ಪಿಸಿ.

– ರಾಘವೇಂದ್ರ ಎಂ.ಎಸ್, ಮೈಸೂರು.

ಕನ್ನಂಬಾಡಿ ಕಟ್ಟೆ ಕಟ್ಟಿದ ಜನತೆಗೆ ಸಿಕ್ಕಿದ ಹಕ್ಕುಪತ್ರ

ಮಾನ್ಯರೆ,



ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಕಟ್ಟಿಸಿದ ಕನ್ನಂಬಾಡಿ ಕಟ್ಟೆ ಕಟ್ಟಲು ಬಂದ ಶ್ರೀರಂಗಪಟ್ಟಣ ತಾಲೂಕಿನ, ಮೊಗರಹಳ್ಳಿ ಮಂಟಿ ಗ್ರಾಮದ ಜನತೆಗೆ ಸುಮಾರು 50 ವರ್ಷಗಳಿಂದಲೂ ಸಿಗದ ಮನೆಗಳ ಹಕ್ಕುಪತ್ರವನ್ನು ಶಾಸಕ ರವೀಂದ್ರ ಶ್ರೀಕಂಠಯ್ಯ ಅವರು ತಮ್ಮ ಸತತ ಪ್ರಯತ್ನದಿಂದ ಕೊಡಿಸಿರುವುದು ಶ್ಲಾಘನೀಯ ಕಾರ್ಯ. ದಕ್ಷ ಅಧಿಕಾರಿಗಳ ಬೆಂಬಲ ಪಡೆದು ಇಲ್ಲಿನ ನಿವಾಸಿಗಳಿಗೆ ಹಕ್ಕುಪತ್ರ ವಿತರಿಸಿರುವುದು ತುಂಬಾ ಸಂತೋಷದ ವಿಷಯ ಎಂದು ಶಾಸಕರು ಹೇಳಿದ್ದಾರೆ. ಹಕ್ಕುಪತ್ರವನ್ನು ಜೋಪಾನವಾಗಿ ಕಾಪಾಡಿಕೊಳ್ಳಬೇಕು ಹಾಗೂ ಪಂಚಾಯತಿಯಲ್ಲಿ ನಾನೇ ಖಾತೆ ಮಾಡಿಸಿಕೊಡುತ್ತೇನೆ ಎಂದು ಭರವಸೆ ನೀಡಿದ್ದಾರೆ. ಯಾರಾದರೂ ದಲ್ಲಾಳಿಗಳು ಬಂದರೂ ಯಾರಿಗೂ 1 ರೂಪಾಯಿಯನ್ನು ನೀಡಬಾರದು ಎಂದು ಹೇಳಿರುವ ಮಾತುಗಳು ಸಹ ಮೆಚ್ಚುವಂತದ್ದು. ಹಕ್ಕುಪತ್ರ ಪಡೆದು ನಮ್ಮ ಭಯ ನಿವಾರಣೆ ಆಗಿದೆ. ನೆಮ್ಮದಿಯಿಂದ ಬದುಕುತ್ತೇವೆ ಎಂದಿದ್ದಾರೆ ಹಕ್ಕುಪತ್ರ ಪಡೆದವರು. ಅವರ ಮಾತುಗಳು ಪ್ರತಿಯೊಬ್ಬರ ಮನವನ್ನು ಮುಟ್ಟುವಂತಿದೆ.

– ಬೆಸಗರಹಳ್ಳಿ ರವಿ ಪ್ರಸಾದ್, ಕೆ.ಸಿ. ನಗರ, ಮೈಸೂರು.

ಧ್ರುವನಾರಾಯಣರ ನೆನಪು ಚಿರವಾಗಿ ಉಳಿಯಲಿ

ಮಾನ್ಯರೆ,

ಸಹೃದಯಿ ಧ್ರುವನಾರಾಯಣ ಅವರು ಸಂಪಾದಿಸಿದ್ದ ಆಸ್ತಿ ಎಂದರೆ ಜನ.



ರಾಜ್ಯಾದ್ಯಂತ ವಿಶೇಷವಾಗಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳು, ಅದರಲ್ಲೂ ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಗಳಲ್ಲಿ ನಡೆಯುತ್ತಿರುವ ಕಾರ್ಯಕ್ರಮಗಳಿಂದ ಇದು ಸಾಬೀತಾಗಿದೆ.

ಮುಂದಿನ ಕೆಲವು ದಿನಗಳವರೆಗೆ ಈ ಕಾರ್ಯಕ್ರಮ ಮುಂದುವರೆಯಬಹುದು. ಒಂದು ದಿನ ಕಾಲಗರ್ಭದಲ್ಲಿ ನೆನಪುಗಳೆಲ್ಲವೂ ಮರೆತು ಹೋಗುತ್ತವೆ. ಹಿಂದೆ ನಿಧನರಾದ ಸಾಧಕರನ್ನು ಮರೆತ ಉದಾಹರಣೆಗಳಿವೆ. ಹಾಗೇ ಆಗದಿರಲು ಇವರು ಒಡನಾಟ ಇಟ್ಟುಕೊಂಡಿದ್ದ ಚಾಮರಾಜನಗರ ಜಿಲ್ಲೆಯ ಸಂತೇಮರಹಳ್ಳಿಯಲ್ಲಿ ತಿ.ನರಸೀಪುರ-ಚಾಮರಾಜನಗರ ಹಾಗೂ ಯಳಂದೂರು-ನಂಜನಗೂಡು ರಸ್ತೆಗಳು ಸೇರುವ ವೃತ್ತವನ್ನು ಅಭಿವೃದ್ಧಿಪಡಿಸಿ ಧ್ರುವನಾರಾಯಣ ಅವರ ಪ್ರತಿಮೆಯನ್ನು ನಿರ್ಮಿಸಿ ಅವರ ನೆನಪು ಚಿರಕಾಲ ಉಳಿಯುವಂತೆ ಮಾಡಿದರೆ ಅವರಿಗೆ ಮರಣೋತ್ತರ ಗೌರವ ನೀಡಿದಂತಾಗುವುದು. ಇದರಿಂದ ಆ ಭಾಗದ ಜನರಿಗೆ ಆಗಿರುವ ದುಃಖವನ್ನು ಪೂರ್ಣವಲ್ಲದಿದ್ದರೂ ಸ್ವಲ್ಪ ಮಟ್ಟಿಗೆ ಕಡಿಮೆಗೊಳಿಸಿದಂತಾಗುವುದು.

–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು.



ಜಿ.ಎಲ್. ತ್ರಿಪುರಾಂತಕ
ಮೊಬೈಲ್ ನಂ.: 96866-77284

ಬೆರಗು

ಕೆರಕ್ಕೆ ಸಾವಿರ ಕೊಟ್ಟರೂ ಶಿರಕ್ಕೆ ಸಲ್ಲದು

> ‘ಯಾರನ್ನು ಎಲ್ಲಿ ಇರಿಸಬೇಕೋ ಅಲ್ಲಿ ಇರಿಸಬೇಕು, ಯಾವುದನ್ನು ಎಲ್ಲಿ ಇಡಬೇಕೋ ಅಲ್ಲಿಯೇ ಇಡಬೇಕು’ ಎಂದು ಮನೆಯ ಹಿರಿಯರು ಆಗಾಗ್ಗೆ ಹೇಳುತ್ತಿದ್ದರು. ಈ ಮಾತು ಅಕ್ಷರಶಃ ಸತ್ಯ. ವ್ಯಕ್ತಿಯಾಗಲಿ, ವಸ್ತುವಾಗಲಿ ಅವರ/ಅವುಗಳ ಸ್ಥಾನವನ್ನು ಪಲ್ಲಟ ಮಾಡಬಾರದು. ಅನೇಕ ವಸ್ತುಗಳಿಗೆ ಮೌಲ್ಯ ಜಾಸ್ತಿ ಇರುತ್ತದೆ, ಆದರೆ ಅವುಗಳ ಬೆಲೆ ಕಡಿಮೆ ಇರುತ್ತದೆ. ಅದೇ ರೀತಿ ಕೆಲವು ವಸ್ತುಗಳಿಗೆ ಬೆಲೆ ಜಾಸ್ತಿ ಇದ್ದರೂ ಅವುಗಳಿಗೆ ಮೌಲ್ಯವಿರುವುದಿಲ್ಲ. ಮೌಲ್ಯ ಹಾಗೂ ಬೆಲೆಯನ್ನು ಒಂದೇ ದೃಷ್ಟಿಕೋನದಲ್ಲಿ ನೋಡಲು ಸಾಧ್ಯವಿಲ್ಲ. ಉದಾಹರಣೆಗೆ ತಲೆಗೆ ಸುತ್ತುವ ರುಮಾಲು ಕಡಿಮೆ ಬೆಲೆಯದ್ದೇ ಆದರೂ ಅದಕ್ಕೆ ಶಿರವೇರುವ ಭಾಗ್ಯವಿದೆ. ಆದರೆ ಹತ್ತು ಸಾವಿರ ರೂಪಾಯಿ ಕೊಟ್ಟು ಕಾಲಿಗೆ ಮೆಟ್ಟುವ ಪಾದರಕ್ಷೆ ಕೊಂಡರೂ ಸಹ ಅದನ್ನು ತಲೆ ಮೇಲೆ ಇರಿಸಿಕೊಳ್ಳಲು ಸಾಧ್ಯವಿಲ್ಲ, ಅದರ ಸ್ಥಾನ ಕಾಲಡಿಯಲ್ಲಿಯೇ ಅಲ್ಲವೇ? ದುಬಾರಿ ವಸ್ತು ಅಂದ ಮಾತ್ರಕ್ಕೆ ಅದರ ಸ್ಥಾನವೇನು



ಇದರ ಬೆಲೆ ಎಷ್ಟಿರಬಹುದು? ಜನರು ತಾವು ಪ್ರತಿದಿನ ನೋಡುವ ಅನೇಕ ವಸ್ತುಗಳ ವಿಚಾರವಾಗಿ ಆಲೋಚಿಸುವ ಪರಿ ಇದು. ಇದು ಹೇಳಿಕೇಳಿ ವೈಶ್ಯ ಯುಗ. ಎಲ್ಲವನ್ನೂ ಲಾಭ ನಷ್ಟಗಳ ತಕ್ಕಡಿಯಲ್ಲೇ ಅಳೆದು ತೂಗುವ ಕಲಿಗಾಲ. ಹಾಗಾಗಿ ಈ ದಿನಮಾನದಲ್ಲಿ ಎಲ್ಲದಕ್ಕೂ ಬೆಲೆ ಕಟ್ಟುವ ವ್ಯವಹಾರಿಕ ಮನೋಭಾವ ಬಹುಪಾಲು ಎಲ್ಲರಲ್ಲೂ ಇದೆ. ದೊಡ್ಡವರ ಈ ಮನೋಭಾವದಿಂದ ಮುಂದಿನ ಪೀಳಿಗೆಯ ಮಕ್ಕಳು ಸಹ ಬೆಲೆ ಕಟ್ಟುವ ಗೀಳಿಗೆ ಬಲಿಯಾಗುತ್ತಿದ್ದಾರೆ. ವಸ್ತುಗಳಿಗೆ ಬೆಲೆ ಕಟ್ಟುವುದು ಸಹಜ, ಪ್ರಾಣಿಪಕ್ಷಿಗಳಿಗೂ ಸಹ ಅವುಗಳ ಉಪಯೋಗದ ಮೇಲೆ ಬೆಲೆ ಕಟ್ಟುವುದು ಸಹ ವ್ಯಾಪಾರಿ ಮನೋಭಾವ ಎನ್ನಬಹುದು, ಆದರೆ ವ್ಯಕ್ತಿಗಳಿಗೂ ಸಹ ಬೆಲೆ ಕಟ್ಟುವುದು ಮಾತ್ರ ಅಸಹಜ ಹಾಗೂ ಅನಾಗರಿಕ ನಡೆ. ಅನೇಕ ವಸ್ತುಗಳಿಗೆ ಮೌಲ್ಯ ಜಾಸ್ತಿ ಇರುತ್ತದೆ, ಆದರೆ ಅವುಗಳ ಬೆಲೆ ಕಡಿಮೆ ಇರುತ್ತದೆ. ಅದೇ ರೀತಿ ಕೆಲವು ವಸ್ತುಗಳಿಗೆ ಬೆಲೆ ಜಾಸ್ತಿ ಇದ್ದರೂ ಅವುಗಳಿಗೆ ಅಷ್ಟಾಗಿ ಮೌಲ್ಯವಿರುವುದಿಲ್ಲ. ಮೌಲ್ಯ ಹಾಗೂ ಬೆಲೆಯನ್ನು ಒಂದೇ ದೃಷ್ಟಿಕೋನದಲ್ಲಿ ನೋಡಲು ಸಾಧ್ಯವಿಲ್ಲ. ಉದಾಹರಣೆಗೆ ತಲೆಗೆ ಸುತ್ತುವ ರುಮಾಲು ಕಡಿಮೆ ಬೆಲೆಯದ್ದೇ ಆದರೂ ಅದಕ್ಕೆ ಶಿರವೇರುವ ಭಾಗ್ಯವಿದೆ. ಆದರೆ ಹತ್ತು ಸಾವಿರ ರೂಪಾಯಿ ಕೊಟ್ಟು ಪಾದರಕ್ಷೆ ಕೊಂಡೂ ಸಹ ಅದನ್ನು ತಲೆ ಮೇಲೆ ಇರಿಸಿಕೊಳ್ಳಲು ಸಾಧ್ಯವಿಲ್ಲ, ಅದರ ಸ್ಥಾನ ಕಾಲಡಿಯಲ್ಲಿಯೇ ಅಲ್ಲವೇ? ದುಬಾರಿ ವಸ್ತು ಅಂದ ಮಾತ್ರಕ್ಕೆ ಅದರ ಸ್ಥಾನವೇನು ಬದಲಾಗಿಬಿಡುವುದಿಲ್ಲ.

ಇಂದಿನ ಜಮಾನದಲ್ಲಿ ಅನೇಕರು ಮನುಷ್ಯನ ಶುದ್ಧಿಬುದ್ಧಿಯನ್ನು ನೋಡಿ ಗೌರವಿಸುವ ಬದಲು ಕಾಲಡಿಯಲ್ಲಿರುವ ಮೆಟ್ಟಿನ ಕಿಮ್ಮತ್ತು ನೋಡಿ ಬೆಲೆ ಕೊಡುವುದು ಮಾತ್ರ ದುರದೃಷ್ಟಕರ! ಸಜೀವ ಮನುಷ್ಯರಿಗಿಂತ ನಿರ್ಜೀವ ವಸ್ತುಗಳಿಗೆ ಹೆಚ್ಚಿನ ಆದ್ಯತೆ ಹಾಗೂ ಮಾನ್ಯತೆ ದೊರಕುತ್ತಿರುವುದು ಬೇಸರದ ಸಂಗತಿ. ಇಂದು ಮನುಷ್ಯನಲ್ಲಿನ ಶಿಕ್ಷಣ, ಜ್ಞಾನ, ಸಂಸ್ಕಾರ ಇವುಗಳು ಪ್ರೆಸ್ಟೀಜ್ ಹೆಚ್ಚಿಸುವ ಬದಲು ಅವನಲ್ಲಿನ ಕಾರು, ಫೋನು ಇವುಗಳಿಗೆ ಹೆಚ್ಚು ಮರ್ಯಾದೆ ಸಿಗುತ್ತಿರುವುದು ನಾಗರಿಕ ಸಮಾಜದ ವಿಡಂಬನೆಯಾಗಿದೆ. ಒಬ್ಬ ವ್ಯಕ್ತಿಯ ಬಳಿ ಇರುವ ಮೊಬೈಲ್ ಫೋನ್ ಆತನ ಸ್ಥಿತಿಗತಿಯನ್ನು ಅಳೆದು ಬಿಡುವ ಮಾನದಂಡವಾಗಿಬಿಡುತ್ತದೆ. ಅದರಿಂದ ಅನೇಕರು ತಮ್ಮ ಮನೆ, ಕಾರು, ಫೋನು, ಒಡವೆ, ವಸ್ತ್ರಗಳನ್ನು ಜನರಿಗೆ ತೋರಿಸಿ ಮೆಚ್ಚಿಸುವ ಬದಲು ಬೆಚ್ಚುವಂತೆ ಮಾಡಲು ಅನೇಕರು ತುದಿಗಾಲಲ್ಲಿ ನಿಂತಿದ್ದಾರೆ. ಸಂಪರ್ಕ ಸಾಧನವಾದ ಮೊಬೈಲ್ ಫೋನ್ ಜೀವಭಾವಕ್ಕಿಂತ, ಬೇರೆಲ್ಲವುಗಳಿಗಿಂತ ಹೆಚ್ಚಿನ ಮಾನ್ಯತೆ ಪಡೆದುಕೊಂಡಿರುವುದು ಹಾಗೂ ತನ್ನ ಗುಲಾಮನಂತಿರಬೇಕಾದ ಈ ಸಾಧನಕ್ಕೆ ಮನುಷ್ಯನೇ ಗುಲಾಮನಾಗಿರುವುದು ಮಾತ್ರ ಈ ಶತಮಾನದ ಅಚ್ಚರಿಯೇ ಸರಿ!

‘ಯಾರನ್ನು ಎಲ್ಲಿ ಇರಿಸಬೇಕು ಅಲ್ಲಿ ಇರಿಸಬೇಕು, ಯಾವುದನ್ನು ಎಲ್ಲಿ ಇಡಬೇಕು ಅಲ್ಲಿಯೇ ಇಡಬೇಕು’ ಎಂದು ಮನೆಯ ಹಿರಿಯರು ಆಗಾಗ್ಗೆ ಹೇಳುತ್ತಿದ್ದರು. ಈ ಮಾತು ಅಕ್ಷರಶಃ ಸತ್ಯ. ವ್ಯಕ್ತಿಯಾಗಲಿ, ವಸ್ತುವಾಗಲಿ ಅವರ/ಅವುಗಳ ಸ್ಥಾನವನ್ನು ಪಲ್ಲಟ ಮಾಡಬಾರದು. ಆದರೆ ಇದರ ಅರಿವಿಲ್ಲದೆ ಅನೇಕರ ಮನೆಯಲ್ಲಿ ತಾವು ಸಾಕಿದ ಪ್ರಾಣಿಪಕ್ಷಿಗಳಿಗೆ ನೀಡಿರುವ ಸ್ಥಾನವನ್ನು ತಮ್ಮನ್ನು ಸಾಕಿದ ತಾಯಿತಂದೆಯರಿಗೆ ನೀಡದೆ ಇರುವುದನ್ನು ಕಾಣಬಹುದು. ಪ್ರಾಣಿಗಳಿಗೆ ನೀಡುವ ಪ್ರಾಶಸ್ತ್ಯ ಹಾಗೂ ಸಮಯವನ್ನು ತಮ್ಮ ಹೆತ್ತವರಿಗೆ ನೀಡದೇ ಇರುವುದು ದುರದೃಷ್ಟಕರ.

ಹೆತ್ತ ತಾಯಿತಂದೆಗಿಂತ ಪಕ್ಕದ ಮನೆಯವರು ಸಿರಿವಂತರು ಎಂದಾಕ್ಷಣ ಅವರಿಗೆ ತಾಯಿತಂದೆ ಸ್ಥಾನ ನೀಡಲಾಗದು. ಎದುರು ಮನೆಯ ಮಕ್ಕಳು ತಮ್ಮ ಮಕ್ಕಳಿಗಿಂತ ಬುದ್ಧಿವಂತರು ಎಂದಾಕ್ಷಣ ಅವರನ್ನು ನಮ್ಮ ಮಕ್ಕಳು ಎನ್ನಲಾಗದು. ಅದೇ ರೀತಿ ಸುಂದರವಾಗಿದೆ, ಬೆಲೆಬಾಳುವಂತದ್ದು ಎಂದಾಕ್ಷಣ ಅದರ ಸ್ಥಾನ ಮೇಲೇರಿಬಿಡುವುದಿಲ್ಲ. ಹಣೆಗೆ ಹಚ್ಚುವ ಕುಂಕುಮದ ಬೆಲೆ ಕಡಿಮೆಯಾದರೂ ಅದರ ಮೌಲ್ಯ ಅಪಾರವಾದುದು, ಅದಕ್ಕೆ ಕೊಡುವ ಗೌರವವೇ ಬೇರೆ. ಹಾಗೆಯೆ ಕಾಲಿಗೆ ಹಾಕುವ ಗೆಜ್ಜೆಯು ಚಿನ್ನ-ಬೆಳ್ಳಿಯದ್ದೇ ಅದರೂ ಅದನ್ನು ದೇವರ ಕೋಣೆಯಲ್ಲಿ ಇರಿಸಲು ಬರದು. ಇಂದಿನ ದಿನಮಾನದಲ್ಲಿ ಇವುಗಳ ವ್ಯತ್ಯಾಸ ತಿಳಿಯದೇ ಬೆಲೆ ಬಾಳುವುದಕ್ಕೆ ವಿಶೇಷ ಸ್ಥಾನ ಕೊಟ್ಟ ಕಾರಣಕ್ಕೆ ಮನುಷ್ಯನ ವ್ಯಕ್ತಿತ್ವಕ್ಕೆ ಧಕ್ಕೆ ಬರುತ್ತಿದೆ. ಇಂದು ಸ್ನೇಹ ಸಂಬಂಧಗಳಿಗೂ ಬೆಲೆಕಟ್ಟಿ ಬಿಸಾಕುವ ಪರಿಪಾಠ ಶುರುವಾಗಿದೆ. ಯಾರಿಂದ ಹೆಚ್ಚು ಉಪಯೋಗವಾಗುತ್ತದೆಯೋ ಅವರು ಆಪ್ತರಾಗುತ್ತಾರೆ, ಅವರಿಗೆ ಮನೆಮನಗಳಲ್ಲಿ ಕೊಡುವ ಸ್ಥಾನವೇ ಬೇರೆ. ಹಾಗೆಯೇ ಯಾರಿಂದ ಏನೂ ಪ್ರಯೋಜನವಾಗುವುದಿಲ್ಲವೋ ಅವರು ಎಷ್ಟೇ ಹತ್ತಿರದವರಾಗಿದ್ದರೂ ಅಪರಿಚಿತರಂತೆ ಅವರನ್ನು ಕಡೆಗಣಿಸಲಾಗುತ್ತದೆ.

ಇಂದಿನ ಜಮಾನದಲ್ಲಿ ಅನೇಕರು ಮನುಷ್ಯನ ತಲೆಯೊಳಗಿನ ಬುದ್ಧಿ ನೋಡಿ ಗೌರವಿಸುವ ಬದಲು ಕಾಲಡಿಯಲ್ಲಿರುವ ಮೆಟ್ಟಿನ ಕಿಮ್ಮತ್ತು ನೋಡಿ ಬೆಲೆ ಕೊಡುವುದು ಮಾತ್ರ ದುರದೃಷ್ಟಕರ! ಸಿರಿವಂತರಿಗೆ ಕೃತಕ ಪ್ರೀತಿ ತೋರಿಸಿ, ಅವರನ್ನು ಸಂಪ್ರೀತಿಗೊಳಿಸುವ ಅನೇಕರನ್ನು ಕಾಣಬಹುದು. ‘ಇವರು ನಮ್ಮ ಸಂಬಂಧಿಕರು’ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ ಎಂದರೆ ಅವರು ಸಿರಿವಂತರಾಗಿರಬೇಕು ಅಥವಾ ಸಾಧಕರಾಗಿರಬೇಕು. ಸಾಮಾನ್ಯನೊಬ್ಬನನ್ನು ನನ್ನ ಪರಿಚಯಸ್ಥರು, ಸಂಬಂಧಿಕರು, ಸ್ನೇಹಿತರು ಎಂದು ಸಮಾಜದ ಮುಂದೆ ತೋರಿಸಿಕೊಳ್ಳಲು ಮುಜುಗರ ಪಟ್ಟಿಕೊಳ್ಳುವ ಅನೇಕರಿದ್ದಾರೆ. ಮುಖ ನೋಡಿ ಮಣೆ ಹಾಕುವುದು ಮೊದಲಿಂದಲೂ ಇದ್ದರೂ ಸಹ, ನೈಜ ಪ್ರೀತಿವಿಶ್ವಾಸಕ್ಕೆ ಬೆಲೆ ಕೊಡುವ ಜನರಿದ್ದರು. ಪರಸ್ಪರ ಗೌರವದಿಂದ ನಡೆಸಿಕೊಳ್ಳುತ್ತಿದ್ದರು. ಇಂದು ಗೌರವ ಎನ್ನುವುದು ಸಹ ಉಳ್ಳವರ ಪಾಲಾಗುತ್ತಿರುವುದು ವಿಷಾದಕರ. ಸಮಾಜದಲ್ಲಿ ಹಣವಂತರಿಗೆ ಸಿಗುವ ಕ್ಷಣಿಕ ಮರ್ಯಾದೆಯನ್ನು ಕಂಡು ಏನಾದರೂ ಸರಿ ತಾವು ದಿಢೀರ್ ಶ್ರೀಮಂತರಾಗಬೇಕು ಎಂದು ಹಪಹಪಿಸುವ ಅನೇಕ ಯುವಕ-ಯುವತಿಯರಿದ್ದಾರೆ. ತಮ್ಮ ಮನೆ, ಕಾರು, ಒಡವೆ, ವಸ್ತ್ರಗಳನ್ನು ಜನರಿಗೆ ತೋರಿಸಿ ಮೆಚ್ಚಿಸುವ ಬದಲು ಬೆಚ್ಚುವಂತೆ ಮಾಡಲು ಅನೇಕರು ತುದಿಗಾಲಲ್ಲಿ ನಿಂತಿದ್ದಾರೆ. ‘ಸಾಲ ಮಾಡಿಯಾದರೂ ತುಪ್ಪ ತಿನ್ನು’ ಎನ್ನುವ ಮಾತಿನಂತೆ ಸಮಾಜದಲ್ಲಿ ಗೌರವ ಪಡೆಯಲು ತಮ್ಮದಲ್ಲದ ಜೀವನ ನಡೆಸಲು ಪ್ರಯತ್ನಿಸುತ್ತಾರೆ.

ಬಾಲ್ಯದಲ್ಲಿ ಹೆತ್ತವರೇ ಜೀವಂತ ದೇವರು ಎಂದು ಬೆಲೆ ಕೊಡುತ್ತಿದ್ದ ಮಕ್ಕಳು, ಅವರಿಗೆ ವಯಸ್ಸಾದಾಗ, ಅಸಹಾಯಕರಾದಾಗ ಅವರಿಗೆ ಕನಿಷ್ಠ ಗೌರವವನ್ನು ಕೊಡದೆ ನಿಕೃಷ್ಟವಾಗಿ ಕಾಣುವುದು ಇಂದು ಸಹಜವಾಗಿದೆ. ಯಾವುದೇ ವ್ಯಕ್ತಿ / ವಸ್ತುವನ್ನು ಗೌರವಿಸುವುದು ಅವರಿಂದ/ಅದರಿಂದ ಆಗುವ ಪ್ರಯೋಜನದಿಂದ ಮಾತ್ರ ಎನ್ನುವಂತಾಗಿದೆ. ಉಪಯೋಗ ಇದ್ದಾಗ ಹಗುರ ಎನಿಸಿದ್ದೆಲ್ಲವೂ ಉಪಯೋಗ ಮುಗಿದ ಮೇಲೆ ಭಾರ ಎನಿಸಲು ಪ್ರಾರಂಭವಾಗುವುದು ಸಹಜ. ಮಳೆನಿಂತ ಮೇಲೆ ಕೊಡೆಯೇ ಭಾರ ಎನಿಸುತ್ತದೆ, ಬಿಸಿಲು ಹೋದ ಮೇಲೆ ತಲೆ ಮೇಲಿನ ಟೋಪಿಯೇ ಭಾರ ಎನಿಸುತ್ತದೆ, ನೀರು ಖಾಲಿಯಾದ ಮೇಲೆ ಬಾಟಲಿಯೇ ಭಾರ ಎನಿಸುತ್ತದೆ ಅಂದಮೇಲೆ ಸಾಕಿಬೆಳೆಸಿದ ನಂತರ ಹೆತ್ತವರೇ ಭಾರ ಅನಿಸುವುದರಲ್ಲಿ ಆಶ್ಚರ್ಯವಿಲ್ಲ. ಹೆತ್ತವರ ಸ್ಥಾನ ಅವರ ಪ್ರಯೋಜನದ ಮೇಲೆ ಪಲ್ಲಟವಾಗುತ್ತಲೇ ಇರುತ್ತದೆ. ಫಲ ನಿಲ್ಲಿಸಿದ ಗಿಡಮರಗಳನ್ನು ಕಿತ್ತಿ ಎಸೆಯುವಂತೆ ಫಲವಿಲ್ಲದ ಸ್ನೇಹ ಸಂಬಂಧಗಳನ್ನು ದೂರ ಮಾಡುವುದು ಸ್ವಾಭಾವಿಕ ಎನಿಸುವ ಮಟ್ಟಿಗೆ ಆಗಿಬಿಟ್ಟಿದೆ.

ನೈಜ ಘಟನೆಯೊಂದನ್ನು ಇಲ್ಲಿ ಉಲ್ಲೇಖಿಸಲು ಇಚ್ಛಿಸುತ್ತೇನೆ. ಮದುವೆಯಾದಾಕ್ಷಣ ತಮ್ಮ ಖಾಸಗಿ ಬದುಕಿಗೆ ಧಕ್ಕೆಯಾಗುತ್ತದೆ ಎಂದು ಭಾವಿಸಿ ಮಗ ತಾಯಿಯನ್ನು ವೃದ್ಧಾಶ್ರಮಕ್ಕೆ ತಂದು ಸೇರಿಸುತ್ತಾನೆ. ತನ್ನ ಗಂಡ ಕಟ್ಟಿದ ಮನೆಯಲ್ಲಿ ಸಾಯುವವರೆಗೆ ಇರಲಾಗಲಿಲ್ಲವಲ್ಲ ಎಂದು ಕೊರಗುತ್ತಾ ತಾಯಿ ಒಲ್ಲದ ಮನಸ್ಸಿನಲ್ಲಿ ವೃದ್ಧಾಶ್ರಮದಲ್ಲಿ ದಿನದೂಡುತ್ತಿರುತ್ತಾಳೆ. ವರ್ಷಕ್ಕೆ ಒಂದೆರಡು ಬಾರಿ ಬಂದು ನೋಡಿಕೊಂಡು ಹೋಗುತ್ತಿದ್ದ ಮಗರಾಯ ನಾಲ್ಕು ವರ್ಷಗಳ ನಂತರ ತನ್ನ ತಾಯಿಯನ್ನು ಮತ್ತೆ ಮನೆಗೆ ಬರುವಂತೆ ಆಹ್ವಾನಿಸುತ್ತಾನೆ. ತಾಯಿ ಮಗನಿಗೆ ಮನಪರಿವರ್ತನೆಯಾಗಿದೆ ಎಂದು ಖುಷಿ ಯಿಂದ ತನ್ನ ಸ್ವಂತ ಮನೆಗೆ ಹೊರಡುತ್ತಾಳೆ. ಅಲ್ಲಿಗೆ ಹೋದಾಗಲೆ ತಿಳಿದಿದ್ದು, ಸೊಸೆ ತುಂಬು ಗರ್ಭಿಣಿ ಎಂದು. ಹೆಂಡತಿಯ ಆರೈಕೆಗೆ, ಅವಳ ಬಾಣಂತನ ಮಾಡಲು ಒಂದು ಆಳು ಅವನಿಗೆ ಬೇಕಾಗಿತ್ತು. ಮನೆಯವರೇ ಆದರೆ ತುಂಬಾ ಪ್ರೀತಿಯಿಂದ ನೋಡಿಕೊಳ್ಳುತ್ತಾರೆ ಎಂದು ತಿಳಿದು ತಾಯಿಯನ್ನು ಕರೆತಂದಿರುತ್ತಾನೆ. ಮಗುವಾಗಿ ಒಂದು ವರ್ಷ ತುಂಬುವವರೆಗೂ ಎಲ್ಲರ ಸೇವೆ ಮಾಡುತ್ತಾ ಮೊಮ್ಮಗುವಿನ ಲಾಲನೆ ಪಾಲನೆಯಲ್ಲೇ ಮನೆಗೆಲಸದ ನೋವನ್ನು ಮರೆಯುತ್ತಾ ಹಿರಿಯಜೀವ ಖುಷಿಯಾಗಿರುತ್ತದೆ. ಕೆಲವು ದಿನಗಳ ನಂತರ ನನಗೆ ವಿದೇಶದಲ್ಲಿ ಕೆಲಸವಾಗಿದೆ, ಹೆಂಡತಿ ಮಗುವಿನೊಂದಿಗೆ ಹೋಗುವುದಾಗಿ ಹೇಳಿ ಮತ್ತೆ ಆ ತಾಯಿಯನ್ನು ವೃದ್ಧಾಶ್ರಮಕ್ಕೆ ಸೇರಿಸುತ್ತಾನೆ. ಇದರಿಂದ ಸ್ಪಷ್ಟವಾಗಿದ್ದು ಇದು ಪಕ್ಕಾ ವ್ಯವಹಾರಿಕ ಪ್ರಪಂಚ ಎಂದು.

ಮನುಷ್ಯನ ಬಳಿ ಬೆಲೆ ಕಟ್ಟಲಾಗದ ಅನೇಕ ಸಂಗತಿಗಳಿರುತ್ತವೆ. ಆದರೆ ವ್ಯಾಪಾರಿ ಮನೋಭಾವದಿಂದ ಅಂತಹ ಅಮೂಲ್ಯ ಸಂಗತಿಗಳು ಕಡಿಮೆ ಬೆಲೆಯ ಲೌಕಿಕ ವಸ್ತುಗಳ ಮುಂದೆ ನಗಣ್ಯವಾಗಿಬಿಡುತ್ತದೆ. ಮನುಷ್ಯನ ಗುಣಕ್ಕಿಂತ ಅವನ ಒಣ ಜಂಭಕ್ಕೆ ಒಮ್ಮೊಮ್ಮೆ ಬೆಲೆ ಸಿಕ್ಕಿಬಿಡುತ್ತದೆ. ಮಾಲುಗಳನ್ನು ಹೆಚ್ಚಾಗಿ ಪ್ರೀತಿಸುವ ಈ ಜಗತ್ತಿನಲ್ಲಿ ಮೌಲ್ಯಗಳನ್ನು ಗುರುತಿಸುವ ಜನರೇ ಕಮ್ಮಿಯಾಗಿದ್ದಾರೆ. ಈ ಮಾಯಾಬಜಾರಿನಲ್ಲಿ ಅಮೂಲ್ಯ ರತ್ನಗಳಿಗಿಂತ ಅಗ್ಗವಾಗಿ ಸಿಗುವ ಹೊಳೆಯುವ ಕೃತಕ ವಸ್ತುಗಳಿಗೆ ಹೆಚ್ಚಿನ ಬೆಲೆ ಲಭಿಸುತ್ತದೆ. ಪ್ರಪಂಚಕ್ಕೆ ತನ್ನನ್ನು ಭಿನ್ನ ರೀತಿಯಲ್ಲಿ ಬಿಂಬಿಸಿಕೊಳ್ಳುವ ಉದ್ದೇಶದಿಂದ ಬಹುವಿಧವಾದ ವೇಷಗಳನ್ನು ಧರಿಸುವುದನ್ನು ಕಾಣುತ್ತೇವೆ. ದೇವಾಲಯದಲ್ಲಿನ ಪೂಜಾರಿಗಳು ಹಣವಂತರನ್ನು, ದುಬಾರಿ ಬೆಲೆಯ ಒಡವೆ ವಸ್ತ್ರ ಧರಿಸಿರುವವರನ್ನು ಗರ್ಭಗುಡಿ ಹತ್ತಿರಕ್ಕೆ ಕರೆದು ಮಂಗಳಾರತಿ ನೀಡಿ ಪುನೀತ ರಾಗುತ್ತಾರೆ. ಆರತಿ ತಟ್ಟೆಗೆ ಬೀಳುವ ಕಾಸಿನ ಆಸೆ ಮೇಲೆ ಅವರಿಗೆ ಆ ಜಾಗದಲ್ಲಿ ವಿಶೇಷ ಮರ್ಯಾದೆ ಲಭಿಸುತ್ತದೆ. ಸಿರಿವಂತರು ಪೂಜಾರಿಯನ್ನು ಮೆಚ್ಚಿಸಿ ದೇವರನ್ನೇ ಮೆಚ್ಚಿಸಿದವರ ರೀತಿಯಲ್ಲಿ ಗರ್ವದಿಂದ ವರ್ತಿಸುವುದನ್ನು ಕಾಣಬಹುದು. ದೇವರಿಗೆ ಬೇಕಿರುವುದು ತೋರಿಕೆಯ ಭಕ್ತಿಯಲ್ಲ, ನಿಜಭಕ್ತಿ. ಆಡಂಬರದಿಂದ ತೋರಿದ ಭಕ್ತಿ ಯಾರಿಗೆ ಮೆಚ್ಚಿಗೆಯಾಗುತ್ತೋ ಗೊತ್ತಿಲ್ಲ, ಭಗವಂತನಿಗಂತೂ ಮೆಚ್ಚಿಗೆ ಆಗಲು ಸಾಧ್ಯವಿಲ್ಲ.

ನಾನು ರಚಿಸಿರುವ ಚೌಪದಿಯೊಂದು ಹೀಗಿದೆ,

ಹಾಲು ಕೊಡುವವರೆಗೆ ಮಾತ್ರ
ಆಕಳಿಗೆ ಆರಾಧನ
ದುಡಿದು ತರುವವರೆಗೆ ಮಾತ್ರ
ಅಪ್ಪ ಮನೆ ಯಜಮಾನ
ಪ್ರಯೋಜನ ಇದ್ದರೆ ಮಾತ್ರ
ಸಮಾಜದಲ್ಲಿ ಸ್ಥಾನಮಾನ
ಎಂದ ನಮ್ಮ ಅರಿವಿನ ಅಪ್ರಮೇಯ !

ಪ್ರಯೋಜನಕ್ಕೆ ಅನುಸಾರವಾಗಿ ಸ್ಥಾನಮಾನ ಲಭಿಸುವುದು ಸಹಜವಾಗಿದೆ. ಸಚಿವನಾಗಿದ್ದಾಗ ತನ್ನ ಸುತ್ತ ಇದ್ದ ವಂದಿಮಾಗಧರು ಅಧಿಕಾರ ಹೋದಾಕ್ಷಣ ಕಣ್ಮರೆಯಾಗಿಬಿಡುವುದನ್ನು ಕಾಣಬಹುದು. ಯಾವುದು ಶಾಶ್ವತವಲ್ಲ. ಇಂದು ಗಣ್ಯನಾಗಿದ್ದವನು ನಾಳೆ ನಗಣ್ಯನಾಗಬಹುದು, ನಗಣ್ಯನಾದವನು ಗಣ್ಯನಾಗಿಬಿಡಬಹುದು. ಪ್ರಯೋಜನ ಆಧರಿಸಿ ವ್ಯಕ್ತಿ ಅಥವಾ ವಸ್ತುಗಳನ್ನು ಗೌರವಿಸುವುದು, ಪ್ರೀತಿಸುವುದು ತರವಲ್ಲ. ಎಲ್ಲವನ್ನೂ/ ಎಲ್ಲರನ್ನೂ ವ್ಯವಹಾರಿಕವಾಗಿ ನೋಡದೆ, ಮೌಲ್ಯವನ್ನು ಅರಿತು, ಬೆಲೆಕಟ್ಟದೆ, ಬೆಲೆಕಟ್ಟಲಾಗದ ಪ್ರೀತಿವಿಶ್ವಾಸಗಳನ್ನು ಸಹಜ ರೀತಿಯಲ್ಲಿ ಪರಿಗಣಿಸಿ ಗೌರವಿಸಬೇಕು. ಆಗ ಸಮಾಧಾನ ಮನೆಮಾಡುತ್ತದೆ. ಏನಂತೀರಿ?

ಪದ ತಾಂಬೂಲ : ಜನರನ್ನು ಬಳಸಿ ವಸ್ತುಗಳನ್ನು ಪ್ರೀತಿಸುವುದು ವಿಕೃತಿ, ವಸ್ತುಗಳನ್ನು ಬಳಸಿ ಜನರನ್ನು ಪ್ರೀತಿಸುವುದು ಸಂಸ್ಕೃತಿ

ಬ್ಯಾಲೆಟ್ ಪೇಪರ್ ವ್ಯವಸ್ಥೆ ಮರು ಜಾರಿಗೊಳಿಸಿದರೆ ಬಿಜೆಪಿ ಬಣ್ಣ ಬಯಲು

ಮಾಜಿ ಸಚಿವ ರಾಮಲಿಂಗಾ ರೆಡ್ಡಿ



ಮೈಸೂರು, ಮಾ.26(ಎಂಟಿವೈ)- ಇಸ್ರೆಲ್‌ನ ಪೆಗಾಸಿಸ್ ಸಂಸ್ಥೆ ಚುನಾವಣೆ ಮೇಲೆ ಪ್ರಭಾವ ಬೀರುವ ವಿಚಾರ ಅಂಕಣ ವೊಂದರಲ್ಲಿ ಓದಿದ ಬಳಿಕ ದೇಶದಲ್ಲಿ ನಡೆಯುವ ಚುನಾವಣಾ ಪ್ರಕ್ರಿಯೆ ಮೇಲೆ ಅನುಮಾನ ಮೂಡಿದ್ದು, ಬ್ಯಾಲೆಟ್ ಪೇಪರ್ ವ್ಯವಸ್ಥೆ ಮರು ಜಾರಿಗೊಳಿಸಿದರೆ ಬಿಜೆಪಿ ನಿಜ ಬಣ್ಣ ಬಯಲಾಗುತ್ತದೆ ಎಂದು ಮಾಜಿ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ.

ಮೈಸೂರಿನ ಚಾಮುಂಡಿಬೆಟ್ಟ ತಪ್ಪಲಿನ ಖಾಸಗಿ ರೆಸಾರ್ಟ್‌ನಲ್ಲಿ ಶನಿವಾರ ಆರಂಭವಾದ ಮಹಿಳಾ ಕಾಂಗ್ರೆಸ್ ಕಾರ್ಯಕಾರಿಣಿ ಸಭೆ ವೇಳೆ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ದೇಶದಲ್ಲಿ ದ್ವೇಷದ ರಾಜಕಾರಣ ಆರಂಭವಾಗಿದೆ. ಮೋದಿ ನೇತೃತ್ವದ ಕೇಂದ್ರ ಸರ್ಕಾರ ಪ್ರಜಾಸತ್ತೆಗೆ ವಿರೋಧವಾಗಿ ನಡೆದುಕೊಳ್ಳುತ್ತಿದೆ. ಸೇಡಿನ ರಾಜಕಾರಣ ನಡೆಸಿ, ವಿರೋಧ ಪಕ್ಷಗಳ ನಾಯಕರ ಬಾಯಿ ಕಟ್ಟಿ ಹಾಕಲು ಮುಂದಾಗಿದೆ. ಇದಕ್ಕೆ ರಾಹುಲ್ ಗಾಂಧಿ ಅವರ ಲೋಕಸಭಾ ಸದಸ್ಯತ್ವ ಅನರ್ಹಗೊಳಿಸಿರುವುದು ಪ್ರಮುಖ ಉದಾಹರಣೆಯಾಗಿದೆ ಎಂದು ಕಿಡಿಕಾರಿದರು.

ರಾಜ್ಯದಲ್ಲಿ ನಡೆಯುವ ವಿಧಾನಸಭೆ ಚುನಾವಣೆ ನಿಷ್ಪಕ್ಷಪಾತವಾಗಿ ನಡೆಯುವುದು ಅನುಮಾನವಿದೆ. ಚುನಾವಣಾ ಆಯೋಗ ಕೇಂದ್ರ ಸರ್ಕಾರದ ಕೈಗೊಂಬೆಯಾಗಿದೆ. ಚುನಾವಣಾ ಪ್ರಕ್ರಿಯೆ ಪಾರದರ್ಶಕವಾಗಿರುತ್ತದೆ ಎಂಬ ಅನುಮಾನ ಆರಂಭವಾಗಿದೆ. ಇತ್ತೀಚೆಗೆ ಪ್ರಕಟವಾದ ಅಂಕಣವೊಂದರಲ್ಲಿ ಇಸ್ರೇಲ್‌ನ ಪೆಗಾಸಸ್ ಸಂಸ್ಥೆ ಭಾರತದಲ್ಲಿ ನಡೆಯುವ ಚುನಾವಣೆ ಮೇಲೆ ಪರಿಣಾಮ ಬೀರುತ್ತದೆ ಎಂಬ ಮಾಹಿತಿ ತಿಳಿದು ಆತಂಕವಾಗಿದೆ. ಇದರಿಂದ ಚುನಾವಣಾ ಪ್ರಕ್ರಿಯೆ ಮೇಲೆ ಶಂಕೆ ವ್ಯಕ್ತವಾಗುತ್ತಿದೆ. ಚುನಾವಣಾ ಅಕ್ರಮದ ಹಿಂದೆ ಬಿಜೆಪಿ ಸರ್ಕಾರವೇ ಇದೆ. ಈ ಎಲ್ಲಾ ಅನುಮಾನ ಹೋಗಲಾಡಿಸಲು ಬ್ಯಾಲೆಟ್ ಪೇಪರ್ ವ್ಯವಸ್ಥೆ ಜಾರಿಗೆ ತರ ಬೇಕು. ಆಗ ಯಾವುದೇ ಅನುಮಾನವಿರು ವುದಿಲ್ಲ ಎಂದರು.

ಹತ್ತಿಕ್ಕುವ ಹುನ್ನಾರ: ರಾಹುಲ್ ಗಾಂಧಿಯವರು ಮೋದಿ ಅನ್ನೋ ಹೆಸರಿನ ಬಗ್ಗೆ ಮಾತಾಡಿದ್ದಾರೆ. ದೇಶದಲ್ಲಿ ಲಕ್ಷಾಂತರ ಮಂದಿ ಮೋದಿ ಎಂದು ಹೆಸರಿಟ್ಟುಕೊಂಡಿರುವವರಿದ್ದಾರೆ. ರೆಡ್ಡಿ, ರಾವ್, ನಾಯಕ್ ಎಂದು ಹೆಸರಿಟ್ಟುಕೊಂಡಿರುವ ಲಕ್ಷಾಂತರ ಜನ ಇದ್ದಾರೆ. ಮೋದಿ ಹೆಸರೇಳಿದ ಮಾತ್ರಕ್ಕೆ ನಿರ್ದಿಷ್ಟ ವ್ಯಕ್ತಿಗೆ ಹೇಳಿದ್ದಾರೆ ಎನ್ನುವುದು ಸುಳ್ಳು. ನ್ಯಾಯಾಲಯದ ತೀರ್ಪು ಗೌರವಿಸುತ್ತೇವೆ. ಆದರೆ, ಅಪೀಲು ಹೋಗುತ್ತೇವೆ. ನಮ್ಮ ರಾಜ್ಯದಲ್ಲಿ ಬಿಜೆಪಿಯ ಇಬ್ಬರು ಶಾಸಕರು ಜೈಲು ಶಿಕ್ಷೆ ಅನುಭವಿಸಿದ್ದಾರೆ. ಒಬ್ಬರಿಗೆ ಎರಡು ವರ್ಷ, ಇನ್ನೊಬ್ಬರಿಗೆ ನಾಲ್ಕು ವರ್ಷ ಜೈಲು ಶಿಕ್ಷೆಯಾಗಿತ್ತು. ಅದು ಚುನಾವಣಾ ಆಯೋಗದ ಗಮನಕ್ಕೆ ಬಂದಿರಲಿಲ್ಲವೇ. ಬಿಜೆಪಿಗೆ ಸೇರಿದವರಾಗಿದ್ದಾರೆ ಎಂಬ ಕಾರಣಕ್ಕೆ ಅವರ ಸದಸ್ಯತ್ವ ಅನರ್ಹ ಗೊಳಿಸಲಿಲ್ಲ. ಈಗ ಮಾತ್ರ ಚುನಾವಣಾ ಆಯೋಗಕ್ಕೆ ಜ್ಞಾನೋದಯವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಕೇಂದ್ರ ಸರ್ಕಾರ ಸ್ವಾಯತ್ತ ಸಂಸ್ಥೆಗಳಾದ ಇಡಿ, ಐಟಿ, ಚುನಾವಣಾ ಆಯೋಗ, ರಿಸರ್ವ್ ಬ್ಯಾಂಕ್ ಸೇರಿದಂತೆ ಇನ್ನಿತರ ಸಂಸ್ಥೆಗಳನ್ನು ಕೈಗೊಂಬೆಯಾಗಿಸಿಕೊಂಡಿದೆ. ರಾಹುಲ್ ಗಾಂಧಿಯವರನ್ನು ಸಂಸತ್ ಸದಸ್ಯತ್ವ ಸ್ಥಾನದಿಂದ ಅನರ್ಹಗೊಳಿಸಿದ್ದರಿಂದ ಅವರಿಗೇನು ನಷ್ಟ ಆಗುವುದಿಲ್ಲ. ರಾಹುಲ್ ಗಾಂಧಿ ಜೊತೆ ಕಾಂಗ್ರೆಸ್ ನಾಯಕರು, ಲಕ್ಷಾಂತರ ಕಾರ್ಯ ಕರ್ತರು ಇದ್ದೇವೆ. ಸದಸ್ಯತ್ವ ಅನರ್ಹ ಸಂಬಂಧ ಹೋರಾಟ ನಡೆಸಲು ಕೇಂದ್ರ ಹಾಗೂ ರಾಜ್ಯದಲ್ಲಿ ಪಕ್ಷ ಹೋರಾಟದ ರೂಪುರೇಷೆ ತಯಾರಿಸಲಿದೆ. ಕಾಂಗ್ರೆಸ್‌ಗೆ ಹೋರಾಟ ಮಾಡುವುದು ಹೊಸದೇನಲ್ಲ. ದೇಶಕ್ಕೆ ಸ್ವಾತಂತ್ರ್ಯ ದೊರಕಿಸಿಕೊಟ್ಟಿದ್ದೆ ಕಾಂಗ್ರೆಸ್. ಹೋರಾಟ ಹಿನ್ನೆಲೆಯುಳ್ಳ ಪಕ್ಷ ನಮ್ಮದು. ನಮಗೆ ಹೋರಾಟ ಹೇಗೆ, ಯಾವ ರೀತಿ ಮಾಡಬೇಕೆಂದು ತಿಳಿದಿದೆ ಎಂದರು.

ಕಾರ್ಯಕಾರಿ ಸಭೆಗೆ ಚಾಲನೆ: ಖಾಸಗಿ ರೆಸಾರ್ಟ್‌ನಲ್ಲಿ ಕೆಪಿಸಿಸಿ ಮಹಿಳಾ ಘಟಕದ ವತಿಯಿಂದ ಆಯೋಜಿಸಿರುವ ಮಹಿಳಾ ಕಾಂಗ್ರೆಸ್ ಕಾರ್ಯಕಾರಿಣಿ ಸಭೆಯನ್ನು ಮಾಜಿ ಸಚಿವ ರಾಮಲಿಂಗಾರೆಡ್ಡಿ ಹಾಗೂ ಎಐಸಿಸಿ ಮಹಿಳಾ ಘಟಕದ ಅಧ್ಯಕ್ಷೆ ನೆಟ್ಟಾ ಡಿಸೋಜಾ ನಗಾರಿ ಬಾರಿಸುವ ಮೂಲಕ ಚಾಲನೆ ನೀಡಿದರು.


ಸಭೆಯಲ್ಲಿ ಮಾತನಾಡಿದ ರಾಮಲಿಂಗಾರೆಡ್ಡಿ, ರಾಜ್ಯದಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಗೆ ಮಹಿಳಾ ಕಾಂಗ್ರೆಸ್ ಸಜ್ಜಾಗಬೇಕು. ಬಿಜೆಪಿ ಸರ್ಕಾರದ ಭ್ರಷ್ಟಾಚಾರವನ್ನು ಜನರಿಗೆ ತಿಳಿಸಬೇಕು. ಕಮಿಷನ್ ದಂಧೆ, ವರ್ಗಾವಣೆ, ನೇಮಕಾತಿಗಳಲ್ಲಿ ನಡೆದಿರುವ ಹಗರಣ ಸೇರಿದಂತೆ ದುರಾಡಳಿವನ್ನು ಜನರಿಗೆ ತಿಳಿಸಿ ಬೆಂಬಲ ಯಾಚಿಸಬೇಕು ಎಂದು ಸಲಹೆ ನೀಡಿದರು.

ಸಭೆಯಲ್ಲಿ ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಡಾ.ಪುಷ್ಪ ಅಮರನಾಥ್ ಸೇರಿದಂತೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ರಾಜ್ಯದ ಜನ ಉಳಿಯಬೇಕಾದರೆ ಜೆಡಿಎಸ್ ಅಧಿಕಾರಕ್ಕೆ ಬರಬೇಕು

ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ



ಮೈಸೂರು, ಮಾ.26(ಎಂಕೆ)– ಕಾಂಗ್ರೆಸ್ ಸರ್ವನಾಶವಾಗಿದೆ. ಬಿಜೆಪಿ ಭ್ರಷ್ಟಾಚಾರದಲ್ಲಿ ಮುಳುಗಿಹೋಗಿದೆ. ರಾಜ್ಯದ ಆರೂವರೆ ಕೋಟಿ ಜನರನ್ನು ಉಳಿಸಬೇಕಾದರೆ ಕನ್ನಡಿಗರ, ಬಡವರ, ರೈತರ, ದೀನ–ದಲಿತರ ಪ್ರಾದೇಶಿಕ ಪಕ್ಷವಾದ ಜೆಡಿಎಸ್ ಅಧಿಕಾರಕ್ಕೆ ಬರಬೇಕು. ಕುಮಾರಣ್ಣ ಮತ್ತೆ ಮುಖ್ಯಮಂತ್ರಿಯಾಗಬೇಕು ಎಂದು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಹೇಳಿದರು.

ಪಂಚರತ್ನ ರಥಯಾತ್ರೆ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಕುಮಾರಣ್ಣ ರಾಜ್ಯದ 99 ವಿಧಾನಸಭಾ ಕ್ಷೇತ್ರಗಳಲ್ಲಿ ಐತಿಹಾಸಿಕ ಪಂಚರತ್ನ ರಥಯಾತ್ರೆ ಮಾಡಿ, ಬಿಸಿಲಿನಲ್ಲಿ ಬೆಂದಿರುವುದು ರಾಜ್ಯದ ಜನತೆಯನ್ನು ಉಳಿಸಲು ಹಾಗೂ ಹೆಚ್.ಡಿ.ದೇವೇಗೌಡರ ಕನಸನ್ನು ನನಸು ಮಾಡಲು. 5500 ಗ್ರಾಮಗಳಿಗೆ ಭೇಟಿ ಮಾಡಿ, ಜನರ ಕಷ್ಟ ಕೇಳಿದ್ದಾರೆ. 5 ವರ್ಷದ ಅಭಿವೃದ್ಧಿ ಯೋಜನೆ ರೂಪಿಸಿದ್ದಾರೆ. ಪಂಚರತ್ನ ಯೋಜನೆಗಳನ್ನು ಮನವರಿಕೆ ಮಾಡಿಕೊಟ್ಟಿರುವ ಕುಮಾರಣ್ಣನವರಿಗೆ ಮತ ನೀಡಿ ಅವರನ್ನು ರಾಜ್ಯದ ಮುಖ್ಯಮಂತ್ರಿಯನ್ನಾಗಿ ಮಾಡಬೇಕು ಎಂದು ಮನವಿ ಮಾಡಿದರು.

ಆದರ್ಶ ರಾಜಕಾರಣಿ ಹೆಚ್.ಡಿ.ದೇವೇಗೌಡರು: ರಾಷ್ಟ್ರ, ರಾಜ್ಯ ರಾಜಕಾರಣದಲ್ಲಿ ತಮ್ಮ ಆದರ್ಶ ರಾಜಕಾರಣಿ ಎಂದು ಯಡಿಯೂರಪ್ಪ ಅವರೇ ಹೇಳಿದ ಮೇಲೆ ಕಾಂಗ್ರೆಸ್ ಯಾವ ಲೆಕ್ಕ. 1962ರಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಗೆದ್ದು ವಿಧಾನಸಭೆ ಪ್ರವೇಶ ಮಾಡಿದ ಮಣ್ಣಿನ ಮಗ ಹೆಚ್.ಡಿ.ದೇವೇಗೌಡರು, ಬಡವರಿಗೆ, ದೀನ–ದಲಿತರಿಗೆ ಶಿಕ್ಷಣ, ಆರೋಗ್ಯ ಹಾಗೂ ರೈತರಿಗೆ ನೀರು ಕೊಡಬೇಕೆಂಬ ಕನಸುಕಂಡ ಕನಸುಗಾರ. ರಾಮಕೃಷ್ಣ ಹೆಗಡೆಯವರ ನೇತೃತ್ವದಲ್ಲಿ ಲೋಕೋಪಯೋಗಿ ಹಾಗೂ ನೀರಾವರಿ ಸಚಿವರಾಗಿ ತಮ್ಮ ಬೇಡಿಕೆಗೆ ತಕ್ಕಂತೆ ರೈತರಿಗೆ ನೀರು ಬಿಡಲಿಲ್ಲವೆಂದು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟಂತಹ ನಾಯಕ ಐಎಎಸ್ ಅಧಿಕಾರಿಗಳಿಗೆ ರೈತರ ಕಷ್ಟ ಗೊತ್ತಿಲ್ಲವೆಂದು ಮೊಟ್ಟ ಮೊದಲ ಬಾರಿಗೆ ಜನತಾ ದರ್ಶನ ಕಾರ್ಯಕ್ರಮ ರೂಪಿಸಿ, ಸರ್ಕಾರವೇ ರೈತರ, ಬಡವರ ಮನೆ ಬಾಗಿಲಿಗೆ ಹೋಗಬೇಕು. ಅವರ ಕಷ್ಟ–ಸುಖಗಳನ್ನು ಅಲ್ಲಿಯೇ ಕೇಳಬೇಕು ಎಂದು ಸಂಕಲ್ಪ ಮಾಡಿದವರು. 18 ತಿಂಗಳ ಕಾಲ ರಾಜ್ಯದ ಮುಖ್ಯಮಂತ್ರಿಯಾಗಿ 16 ಜನ ಲೋಕಸಭಾ ಸದಸ್ಯರನ್ನು ಗೆಲ್ಲಿಸಿದ ಕೀರ್ತಿ ಹೆಚ್.ಡಿ.ದೇವೇಗೌಡರದ್ದು. ಕೇಂದ್ರ ಸರ್ಕಾರದಿಂದ ರೈತರಿಗೆ ಮೊದಲ ಬಾರಿಗೆ ಹಣ ಕೊಟ್ಟವರು, ಕಬ್ಬು ಬೆಳೆಗಾರರನ್ನು ಉಳಿಸಿದವರು, ಹೆದ್ದಾರಿಗಳ ಅಭಿವೃದ್ಧಿ ಅಂದೇ ಯೋಜನೆ ಸಿದ್ಧಪಡಿಸಿದ ನಾಯಕರಾದ ಹೆಚ್.ಡಿ.ದೇವೇಗೌಡರು ನಮಗೆ, ಕಾರ್ಯಕರ್ತರೆಲ್ಲರಿಗೂ ಆದರ್ಶ ರಾಜಕಾರಣಿಯಾಗಿದ್ದಾರೆ ಎಂದರು.

ಅನ್ಯಾಯ ಮಾಡಿದವರುನ್ನು ತಾಯಿ ಚಾಮುಂಡೇಶ್ವರಿ ಬಿಡಲ್ಲ: ಸಿದ್ದರಾಮಯ್ಯ ಸೇರಿದಂತೆ ಹಲವರನ್ನು ಜೆಡಿಎಸ್‌ನಿಂದ ಬೆಳೆಸಿದ್ದಾರೆ. ಹಾಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಎಲ್ಲಿದ್ದರೂ... ಅವರ ತಂದೆ ಯಾವ ಪಕ್ಷದಲ್ಲಿದ್ದರು.. ಜೆ.ಹೆಚ್.ಪಟೇಲ್ ಯಾವ ಪಕ್ಷದಲ್ಲಿದ್ದರು ಎಂಬುದನ್ನು ಗಮನಿಸಿದರೆ ಹೆಚ್.ಡಿ.ದೇವೇಗೌಡರು ಹೇಗೆ ತಮ್ಮ ಶಿಷ್ಯರನ್ನು ಬೆಳೆಸಿದ್ದಾರೆ ಎಂಬುದು ಅರ್ಥವಾಗುತ್ತದೆ. ಶಿಷ್ಯರನ್ನು ಬೆಳೆಸಿ, ಶಕ್ತಿಯುತ ನಾಯಕರನ್ನಾಗಿ ಮಾಡಿದ್ದಾರೆ. ಆದರೆ ಮುಖ್ಯಮಂತ್ರಿಯಾಗುವಂತೆ ಕುಮಾರಣ್ಣನವರ ಕಾಲಿಡಿದು ಬೇಡಿದ ಕಾಂಗ್ರೆಸ್‌ನವರು, ಕುಮಾರಸ್ವಾಮಿ ರೈತರ ಸಾಲಮನ್ನಾ, ಗ್ರಾಮ ವಾಸ್ತವ್ಯ, ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿ ಮಾಡುತ್ತಿದ್ದಾರೆ. ಇವರನ್ನು ಇದೇ ರೀತಿ ಬಿಟ್ಟರೆ ನಮಗೆ ಉಳಿಗಾಲವಿಲ್ಲವೆಂದು ಅಧಿಕಾರದಿಂದ ಕೆಳಗಿಸಿದರು. ಅದೇ ರೀತಿ ಪ್ರಧಾನಿಯಾಗಿದ್ದ ಹೆಚ್.ಡಿ.ದೇವೇಗೌಡರನ್ನು ಅಧಿಕಾರದಲ್ಲೇ ಉಳಿಯಲು ಬಿಟ್ಟರೇ ನಮಗೆ ಉಳಿಗಾಲವಿಲ್ಲವೆಂದು ತೆಗೆದು ಹಾಕಿದರು. ಇದೆಲ್ಲವನ್ನೂ ನೋಡುತ್ತಿರುವ ತಾಯಿ ಚಾಮುಂಡೇಶ್ವರಿ ಸುಮ್ಮನೆ ಇರುವುದಿಲ್ಲ. ಅನ್ಯಾಯ ಮಾಡಿದವರನ್ನು ತಾಯಿ ಬಿಡುವುದಿಲ್ಲ ಎಂದು ಹೇಳಿದರು.



ಇತ್ತೀಚೆಗೆ ಜೆಡಿಎಸ್ ಸೇರ್ಪಡೆಯಾದ ಅರಕಲಗೂಡು ಕ್ಷೇತ್ರದ ಮಾಜಿ ಶಾಸಕ ಎ.ಮಂಜು ಅವರು ವೇದಿಕೆಯಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಪಾದ ಮುಟ್ಟಿ ಆಶೀರ್ವಾದ ಪಡೆದರು.

ರಾಜ್ಯದ ಜನತೆ ಜೆಡಿಎಸ್ ಕೈ ಹಿಡಿಯುತ್ತಾರೆ

ಪಕ್ಷದ ರಾಜ್ಯಾಧ್ಯಕ್ಷ ಸಿಎಂ ಇಬ್ರಾಹಿಂ



ಮೈಸೂರು, ಮಾ.26(ಎಂಕೆ)– ಬಿಜೆಪಿ, ಕಾಂಗ್ರೆಸ್‌ನವರು ಎಷ್ಟೇ ರೋಡ್ ಶೋ ಮಾಡಿದರೂ ನಮಗೆ ಯಾವುದೇ ಆತಂಕ, ನೋವಿಲ್ಲ. ರಾಜ್ಯದ ಜನತೆ ನಮ್ಮ ಕೈಹಿಡಿಯುತ್ತಾರೆ ಎಂಬ ಸಂಪೂರ್ಣ ವಿಶ್ವಾಸವಿದೆ ಎಂದು ಜೆಡಿಎಸ್ ರಾಜ್ಯಾಧ್ಯಕ್ಷ ಸಿಎಂ ಇಬ್ರಾಹಿಂ ಹೇಳಿದರು.

ಪಂಚರತ್ನ ರಥಯಾತ್ರೆ ಸಮಾರೋಪ ಸಮಾರಂಭದಲ್ಲಿ 'ಎನ್ನ ವಾಮ–ಕ್ಷೇಮ ನಿಮ್ಮದಯ್ಯಾ ಎನ್ನ ಹಾನಿ–ವೃದ್ಧಿ ನಿಮ್ಮದಯ್ಯಾ ಎನ್ನ ಮಾನಾಪಮಾನವೂ ನಿಮ್ಮದಯ್ಯಾ, ಬಳ್ಳಿಗೆ ಕಾಯಿ ದಿಮ್ಮಿತ್ತೆ ಕೂಡಲಸಂಗಮದೇವಾ' ಎಂಬ ವಚನದೊಂದಿಗೆ ಮಾತು ಆರಂಭಿಸಿದ ಅವರು, ನಮಗಿರುವುದು ಒಂದೇ ಆಸೆ ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕಾರ ಮಾಡಬೇಕು. ಶಿವಕುಮಾರ್ ಸ್ವಲ್ಪ ದೂರಕ್ಕೆ ಕಣ್ಣು ಬಿಟ್ಟು ನೋಡಪ್ಪ... ಹೆಚ್.ಡಿ.ದೇವೇಗೌಡರ ಹತ್ತಿರ ಬರೀ ಜುಬ್ಬಾ ಪಂಚೆಯಿಲ್ಲ. ಆರೂವರೆ ಕೋಟಿ ಜನರ ಆಶೀರ್ವಾದ ದೇವೇಗೌಡರ ಮೇಲಿದೆ. ನಾವು ಪ್ರಧಾನ ಮಂತ್ರಿಗಳನ್ನಾಗಲೀ, ಸೋನಿಯಾಮ್ಮನನ್ನಾಗಲಿ ಬೈಯುವುದಿಲ್ಲ. ನಮಗೆ ನಮ್ಮ ನಾಡು, ಸಂಸ್ಕೃತಿ ಮುಖ್ಯ. ನೀವೆಷ್ಟೇ ರೋಡ್ ಶೋ ಮಾಡ್ರಿ ನಮಗೆ ಅದರಿಂದ ಆತಂಕವಿಲ್ಲ, ನೋವಿಲ್ಲ. ಜನ ನಮ್ಮ ಕೈ ಹಿಡಿಯುತ್ತಾರೆ ಎಂಬ ವಿಶ್ವಾಸವಿದೆ ಎಂದರು.

ಜೆಡಿಎಸ್‌ಗೆ ಮತ ನೀಡಲು ರಾಜ್ಯದ ಜನ ತಯಾರಾಗಿದ್ದಾರೆ. ಹಾಕಿಸಿಕೊಳ್ಳುವ ವ್ಯವಸ್ಥೆ ಮಾಡಿಕೊಳ್ಳಿ. ಮತಗಟ್ಟೆಯತ್ತ ಜನ ಇದ್ದಾರೆ. ಇನ್ನೂ ಅಭ್ಯರ್ಥಿಗಳ ಪಟ್ಟಿಯನ್ನು ಅಂತಿಮಗೊಳಿಸುತ್ತಿದ್ದೇವೆ. ಬರುವವರಿಗೆ ಗೇಟ್ ಹಾಕಬೇಡಿ ಕೈ ಮುಗಿದು ಒಳಗೆ ಕರೆದುಕೊಳ್ಳಿ. ಅನೇಕ ಜನ ಜೆಡಿಎಸ್ ಸೇರುತ್ತಿದ್ದಾರೆ. ಮಾ.30ರ ನಂತರ ಜನತಾದಳದಲ್ಲಿ ರಷ್ ಆಗಲಿದೆ ಎಂದು ಕಾರ್ಯಕರ್ತರಿಗೆ ಕಿವಿಮಾತು ಹೇಳಿದರು.

ಜೆಡಿಎಸ್‌ನ ಪಂಚರತ್ನ ರಥಯಾತ್ರೆ ಎಲ್ಲಿಯಾದ್ರು ಕೆಟ್ಟಿದೆ ಎಂದು ಹೇಳುವ ಧೈರ್ಯ ಮೋದಿ, ಸಿದ್ದರಾಮಯ್ಯ, ಬೊಮ್ಮಾಯಿಗೆ ಇಲ್ಲ. ರೈತರ ಮಕ್ಕಳನ್ನು ಮದುವೆಯಾದ ಹೆಣ್ಣು ಮಕ್ಕಳು 2 ಲಕ್ಷ ರೂ. ಪ್ರೋತ್ಸಾಹ ಧನ ನೀಡುವುದು ಹಾಗೂ ರೈತರ ಹೆಣ್ಣುಮಕ್ಕಳು ವಯಸ್ಸಾದ ಮೇಲೆ ಮದುವೆಯಾಗದೆ ಮನೆಯಲ್ಲಿ ಉಳಿಯಬಾರದು ಎಂಬ ಚಿಂತೆ ಮೋದಿಯವರಿಗಿದೆಯೇ? ಎಂದು ಪ್ರಶ್ನಿಸಿದ ಸಿಎಂ ಇಬ್ರಾಹಿಂ, ಮೋದಿಯವರಿಗೆ ಅದಾನಿ ಮತ್ತು ಅಂಬಾನಿ ಚಿಂತೆಯಾದರೆ ಸಿದ್ದರಾಮಯ್ಯನಿಗೆ ಎಲ್ಲಿ ನಿಲ್ಲಬೇಕೆನ್ನುವ ಜಾಗದ ಚಿಂತೆಯಾಗಿದೆ ಎಂದು ವ್ಯಂಗ್ಯವಾಡಿದರು.

ಜಾತಿಗಳ ನಡುವೆ ಜಗಳ ಹಚ್ಚುವ ಕೆಲಸ: ಹೆಚ್.ಡಿ.ದೇವೇಗೌಡರು ಮುಖ್ಯಮಂತ್ರಿಯಾಗಿದ್ದಾಗ ಮುಸ್ಲಿಮರಿಗೆ 4 ಪರ್ಸೆಂಟ್ ಮೀಸಲಾತಿ ಘೋಷಣೆ ಮಾಡಿದ್ದರು. ಆದರೆ ಬೊಮ್ಮಣ್ಣ.. ನಿಮ್ಮಪ್ಪ ನಮ್ ಜೊತೆ ಇದ್ನಪ್ಪಾ... ನೀತಿ ಸಂಹಿತೆ ಪತ್ರ ಬಂದಿರುವ ಸಂದರ್ಭದಲ್ಲಿ ನೀನು ಮೀಸಲಾತಿ ರದ್ದು ಮಾಡುವ ತೀರ್ಮಾನ ಮಾಡುತ್ತೀಯಾ... ಇದು ಕೋರ್ಟ್‌ನಲ್ಲಿ ನಿಲ್ಲುವುದಿಲ್ಲ ಎಂದು ಮಾತಿನಲ್ಲೇ ಕುಟುಕಿದರಲ್ಲದೆ ಯಾಕ್ ಜಾತಿ–ಜಾತಿ ನಡುವೆ ಜಗಳ ಹಚ್ಚುವ ಕೆಲಸ ಮಾಡುತ್ತಿದ್ದಿಯಾ ಬೊಮ್ಮಣ್ಣ... ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಬಂದ ಜನ, ತಂದ ಜನವಲ್ಲ: ಪಂಚರತ್ನ ರಥಯಾತ್ರೆ ಸಮಾರೋಪ ಸಮಾರಂಭಕ್ಕೆ ಲಕ್ಷಾಂತರ ಜನ ಬಂದಿದ್ದಾರೆ. ಇನ್ನೂ ಎರಡರಷ್ಟು ಜನ ಹೊರಗಡೆ ಇದ್ದಾರೆ. ಚಪ್ಪರ ಹಾಕಲು ದುಡ್ಡಿಲ್ಲ... ಇದು ಬಂದ ಜನ, ತಂದ ಜನ ಅಲ್ಲ. ಮೋದಿಯವರ ರೋಡ್ ಶೋ ನಲ್ಲಿ 500 ರೂಪಾಯಿ ಕೊಡಲಾಗುತ್ತದೆ. ನಾವಿನ್ನೂ ಒಬ್ಬರಿಗೂ ಒಂದು ರೂಪಾಯಿ ಕೊಟ್ಟಿಲ್ಲ. ಇನ್ನೂ ಐದಾರು ನೂರು ಬಸ್‌ಗಳನ್ನು ಮಾಡಿದಿದ್ದರೇ ಒಂದು ದಿನ ಮೈಸೂರನ್ನೇ ಮುಚ್ಚ ಬೇಕಾಗಿತ್ತು. ಇವತ್ತು ಹಳೇ ಮೈಸೂರು ಮಾತ್ರವಲ್ಲದೆ ಬೀದರ್, ಗುಲ್ಬರ್ಗ, ರಾಯಚೂರು, ಯಾದಗಿರಿಯಲ್ಲಿ ಲಕ್ಷಾಂತರ ಜನ ಜೆಡಿಎಸ್‌ಗೆ ಸೇರಲು ಎರಡೂ ರಾಜಕೀಯ ಪಕ್ಷಗಳು ಫೇಲ್ ಆಗಿರುವುದು ಹಾಗೂ ಕುಮಾರಸ್ವಾಮಿ ಕೊಟ್ಟ ಮಾತನ್ನು ಉಳಿಸಿಕೊಂಡಿರುವುದು ಮುಖ್ಯ ಕಾರಣವಾಗಿದೆ ಎಂದರು.

ಹೆಚ್.ಡಿ.ದೇವೇಗೌಡರ ಬಣ್ಣನೆ: ದೇಶದ ಮಾಜಿ ಪ್ರಧಾನ ಮಂತ್ರಿಗಳು ಹಾಗೂ ರಾಜ್ಯದ ಮಾಜಿ ಮುಖ್ಯಮಂತ್ರಿಗಳು, ನಮ್ಮೆಲ್ಲರ ಶಕ್ತಿ, ಕರ್ನಾಟಕದ ಕೀರ್ತಿಯನ್ನು ಕೆಂಪು ಕೋಟೆಯ ಮೇಲೆ ಹಾರಿಸಿದಂತಹ ಪ್ರಥಮ ಕನ್ನಡಿಗ ಹೆಚ್.ಡಿ.ದೇವೇಗೌಡರ ನಡುವೆ ನನ್ನದು ಶಾಶ್ವತ ಸಂಬಂಧ. ಹೆತ್ತ ಸೂತಕ 10 ದಿನ, ಸತ್ತ ಸೂತಕ 11 ದಿನವಾದರೆ, ಋಣವೆಂಬ ಸೂತಕ ಜನ್ಮ ಜನ್ಮಾಂತರಗಳವರೆಗೂ ಇರುತ್ತದೆ. ಅದರಂತೆ ಹೆಚ್.ಡಿ.ದೇವೇಗೌಡರಿಗೂ ನನಗೂ ಇರುವುದು ಋಣದ ಸೂತಕ. ಆ ಸೂತಕ ಸಾಯುವವರೆಗೂ ಇರಲಿದೆ. 92ನೇ ವಯಸ್ಸಿನಲ್ಲೂ ಅವರ ಗಂಟಲು ಇಷ್ಟು ಜೋರಾಗಿರುವುದಕ್ಕೆ ಆ ಗಂಟಲಲ್ಲಿ ಪಾಪದ ದುಡ್ಡು ಹೋಗಲಿಲ್ಲ. ದುಡಿದ ದುಡ್ಡು ಆ ಗಂಟಲಲ್ಲಿ ಹೋಗಿದೆ. ಅವರೇ ಹೇಳಿದಂತೆ ನಾವು ದುಡಿಯುವಂತಹವರು ಎಂದು ಬಣ್ಣಿಸಿದರು.

ಕಾರ್ಪೊರೇಟರ್ ಕೆ.ವಿ.ಶ್ರೀಧರ್ ನೇತೃತ್ವದಲ್ಲಿ ಎತ್ತಿನ ಗಾಡಿ, ಬೈಕ್ ಜಾಥಾ



ಮೈಸೂರು, ಮಾ.26– ರಾಷ್ಟ್ರೀಯ ಪಕ್ಷಗಳ ದುರಾಡಳಿತದಿಂದ ರಾಜ್ಯದ ಜನತೆ ಬೇಸತ್ತಿದ್ದಾರೆ. ಜಾ.ದಳಕ್ಕೆ ಸಂಪೂರ್ಣ ಅಧಿಕಾರ ನೀಡುವುದರಿಂದ ಮಾತ್ರ ರಾಜ್ಯದ ಏಳ್ಗೆ ಕಾಣಬಹುದು ಎಂದು ನಗರ ಪಾಲಿಕೆ ಸದಸ್ಯ ಕೆ.ವಿ.ಶ್ರೀಧರ ಹೇಳಿದರು. ಪಂಚರತ್ನ ಯಾತ್ರೆ ಸಮಾರೋಪ ಸಮಾರಂಭಕ್ಕೆ ಚಾಮರಾಜ ಕ್ಷೇತ್ರದಿಂದ ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸಲು ವಿಶಿಷ್ಟ ರೀತಿಯಲ್ಲಿ ಎತ್ತಿನಗಾಡಿ ಹಾಗೂ ಬೈಕ್‌ಗಳಲ್ಲಿ ತೆರಳಲು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದರು.

ರಾಷ್ಟ್ರೀಯ ಪಕ್ಷಗಳಾದ ಬಿಜೆಪಿ ಹಾಗೂ ಕಾಂಗ್ರೆಸ್, ಕೇಂದ್ರ, ರಾಜ್ಯಗಳಲ್ಲಿ ಅಧಿಕಾರದಲ್ಲಿದ್ದರೂ ಯಾವುದೇ ಮಹತ್ತರ ಅಭಿವೃದ್ಧಿ ಕಾರ್ಯಗಳನ್ನು ಮಾಡದೇ ಕೇವಲ ಭ್ರಷ್ಟಾಚಾರಗಳಿಂದ ತಮ್ಮನ್ನು ಅಭಿವೃದ್ಧಿಪಡಿಸಿಕೊಂಡಿದ್ದಾರೆ. ಜಾ.ದಳಕ್ಕೆ ಸಿಕ್ಕಷ್ಟು ಅಧಿಕಾರವಧಿಯಲ್ಲೇ ಹಲವು ವಿಶಿಷ್ಟ ಕಾರ್ಯಕ್ರಮಗಳನ್ನು ಕುಮಾರಣ್ಣ ಜಾರಿಗೆ ತಂದಿದ್ದಾರೆ ಎಂದರು. ಈಗ ಚುನಾವಣೆ ಹತ್ತಿರದಲ್ಲಿದ್ದು, ರಾಜ್ಯದ ಜನತೆ ಪ್ರಾದೇಶಿಕತೆಯ ಉಳಿವಿಗಾಗಿ ಜೆಡಿಎಸ್‌ಗೆ ಸಂಪೂರ್ಣ ಬಹುಮತ ನೀಡುವರೆಂಬ ವಿಶ್ವಾಸವಿದೆ. ರಾಜ್ಯದ ಅಭಿವೃದ್ಧಿಗಾಗಿ ಪಂಚರತ್ನವೆಂಬ ವಿಶಿಷ್ಟ ಯೋಜನೆಯೊಂದಿಗೆ ಜೆಡಿಎಸ್ ನಿಮ್ಮ ಮುಂದೆ ಬಂದಿದೆ. ಸೂರಿಲ್ಲದವರಿಗೆ ಸೂರು, ರೈತರಿಗಾಗಿ ರೈತ ಚೈತನ್ಯ, ಯುವ ಜನರಿಗಾಗಿ ನವ ಮಾರ್ಗ, ಆರೋಗ್ಯ ಸಂಪತ್ತು, ಶಿಕ್ಷಣದ ಶಕ್ತಿ ಎಂಬ ಪಂಚ ಕಾರ್ಯಕ್ರಮಗಳು ಜನರ ಕಲ್ಯಾಣದ ದ್ಯೋತಕವಾಗಿದೆ ಎಂದು ಹೇಳಿದರು. ಎತ್ತಿನಗಾಡಿ ಹಾಗೂ ಬೈಕ್ ಜಾಥಾಕ್ಕೆ ಕೆ.ಆರ್.ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಕೆ.ವಿ.ಮಲ್ಲೇಶ್ ಚಾಲನೆ ನೀಡಿದರು. ಜೆಡಿಎಸ್ ನಗರಾಧ್ಯಕ್ಷ ಕೆ.ಟಿ. ಚೆಲುವೇಗೌಡ, ಚಾಮರಾಜ ಕ್ಷೇತ್ರದ ಮುಖಂಡರು, ಕಾರ್ಯಕರ್ತರು ಪಾಲ್ಗೊಂಡಿದ್ದರು.

ಜಾಥಾ ವಿಶಿಷ್ಟ ರೀತಿಯಲ್ಲಿ ಸಿಂಗಾರಗೊಂಡ ಎತ್ತಿನಗಾಡಿಗಳು ಹಾಗೂ ಐನೂರಕ್ಕೂ ಹೆಚ್ಚು ಬೈಕ್‌ಗಳಲ್ಲಿ ಹೆಬ್ಬಾಳು ಬಡಾವಣೆಯ ಸೂರ್ಯಬೇಕರಿ ಬಳಿ ಇರುವ ಚಾಮುಂಡೇಶ್ವರಿ ದೇವಸ್ಥಾನದಿಂದ ಜಾಥಾ ಆರಂಭಗೊಂಡಿತು. ನಂತರ, ಬಡಾವಣೆಯ ಮುಖ್ಯರಸ್ತೆಯಲ್ಲಿ ಸಾಗಿ ಪಂಚರತ್ನ ಯಾತ್ರೆ ಸಮಾರೋಪ ಕಾರ್ಯಕ್ರಮ ಹಮ್ಮಿಕೊಂಡಿರುವ ಏಳಿಗೆಹುಂಡಿಯಲ್ಲಿ ಸಮಾಪ್ತಿಯಾಯಿತು.



ಸಮಾವೇಶದಲ್ಲಿ ಶಾಸಕರಾದ ಹೆಚ್.ಡಿ.ರೇವಣ್ಣ, ಸಾ.ರಾ.ಮಹೇಶ್, ಕೆ.ಮಹದೇವ್, ಅಶ್ವಿನ್ ಕುಮಾರ್, ಸಿ.ಎಸ್.ಪುಟ್ಟರಾಜು, ರವೀಂದ್ರ ಶ್ರೀಕಂಠಯ್ಯ, ವಿಧಾನಪರಿಷತ್ ಸದಸ್ಯರಾದ ಸಿ.ಎನ್.ಮಂಜೇಗೌಡ, ಶರವಣ, ಸೂರಜ್ ರೇವಣ್ಣ, ಸಂಸದ ಪ್ರಜ್ವಲ್ ರೇವಣ್ಣ, ಮಾಜಿ ಶಾಸಕ ಎ.ಮಂಜು, ಮಾಜಿ ಎಂಎಲ್‌ಸಿ ಕೆ.ಟಿ.ಶ್ರೀಕಂಠೇಗೌಡ, ಯುವ ಜನತಾದಳ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಎಂಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ, ಅಂಬೇಡ್ಕರ್ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಅನ್ನದಾನಿ ಸೇರಿದಂತೆ ಜೆಡಿಎಸ್‌ನ ಅನೇಕ ಮುಖಂಡರು ಉಪಸ್ಥಿತರಿದ್ದರು.

ಹೆಚ್.ಡಿ.ದೇವೇಗೌಡರಿಗೆ ಸ್ವರ್ಣ ಲೇಪಿತ ಕಿರೀಟ ಧಾರಣೆ...



ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರಿಗೆ ಇಮ್ಮಡಿ ಪುಲಿಕೇಶಿ ಧರಿಸುವ ಕಿರೀಟದ ಮಾದರಿಯ ಸ್ವರ್ಣ ಲೇಪಿತ ಕಿರೀಟ ಧಾರಣೆ ಮಾಡಿ, ಸ್ವರ್ಣ ಲೇಪಿತ ನೇಗಿಲನ್ನು ಸಮಸ್ತ ಜೆಡಿಎಸ್ ಕಾರ್ಯಕರ್ತರ ಪರವಾಗಿ ನೀಡಿ ಗೌರವಿಸಲಾಯಿತು. ದಕ್ಷಿಣ ಪಥೇಶ್ವರ ಎಂಬ ಬಿರುದು ಪಡೆದಿದ್ದ ಚಾಲುಕ್ಯ ಸಾಮ್ರಾಜ್ಯ ದೊರೆ ಇಮ್ಮಡಿ ಪುಲಿಕೇಶಿ, ಇಡೀ ದಕ್ಷಿಣ ಭಾರತದಲ್ಲಿ ಸ್ವತಂತ್ರ ಸಾಮ್ರಾಜ್ಯ ಸ್ಥಾಪಿಸಿದ್ದರು. ಅದರಂತೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ದಕ್ಷಿಣ ಭಾರತದಿಂದ ಪ್ರಧಾನಿಯಾಗಿ ಆಯ್ಕೆಯಾಗಿ ಆಡಳಿತ ನಡೆಸಿದ್ದಾರೆ. ಆದ್ದರಿಂದ ಇಮ್ಮಡಿ ಪುಲಿಕೇಶಿ ಧರಿಸುವ ಕಿರೀಟದ ಮಾದರಿಯ ಸ್ವರ್ಣ ಲೇಪಿತ ಕಿರೀಟವನ್ನು ಧಾರಣೆ ಮಾಡಿದ್ದು, ರೈತರ ಬಗ್ಗೆ ಅವರಿಗಿದ್ದ ಕಾಳಜಿ ಸ್ಮರಣಾರ್ಥ ಸ್ವರ್ಣ ಲೇಪಿತ ನೇಗಿಲನ್ನು ನೀಡಲಾಯಿತು. ಹಾಗೆಯೇ ಹೆಚ್.ಡಿ.ದೇವೇಗೌಡರ ಕುರಿತಾದ ವಿಡಿಯೋ ತುಣುಕನ್ನು ಪ್ರಸಾರ ಮಾಡಲಾಯಿತು.

ಕಾರ್ಯಕರ್ತರಿಗೆ ಭರ್ಜರಿ ಊಟದ ವ್ಯವಸ್ಥೆ



ಮೈಸೂರು, ಮಾ.26(ಎಂಕೆ)– ಜೆಡಿಎಸ್ ಪಂಚರತ್ನ ರಥಯಾತ್ರೆ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿದ್ದ ಲಕ್ಷಾಂತರ ಮಂದಿ ಅಭಿಮಾನಿಗಳು, ಕಾರ್ಯಕರ್ತರು ಮಧ್ಯಾಹ್ನ ಹಾಗೂ ಸಂಜೆ ವೇಳೆ ಭರ್ಜರಿ ಊಟ ಸವಿದರು.

50ಕ್ಕೂ ಅಡುಗೆ ಭಟ್ಟರು, 1700ಕ್ಕೂ ಸಹಾಯಕರು, 30ಕ್ಕೂ ಹೆಚ್ಚು ಅಡುಗೆ ಪಾತ್ರೆಗಳ ಸ್ವಚ್ಛತಾ ಸಿಬ್ಬಂದಿಗಳಿಂದ ಸಿದ್ಧವಾಗಿದ್ದ ಟೊಮ್ಯಾಟೊ ಬಾತ್, ಪುದಿನ ಬಾತ್, ಕೇಸರಿ ಬಾತ್ ಹಾಗೂ ಮೈಸೂರ್ ಪಾಕ್ ಸವಿದರು. 50ಕ್ಕೂ ಹೆಚ್ಚು ಫುಡ್ ಕೌಂಟರ್‌ಗಳಲ್ಲಿ ಹೊಟ್ಟೆ ತುಂಬುವಷ್ಟು ಬಡಿಸಲಾಯಿತು.

ಊಟದ ಜೊತೆಗೆ ವ್ಯವಸ್ಥಿತವಾಗಿ ನೀರು ಮತ್ತು ಶೌಚಾಲಯದ ವ್ಯವಸ್ಥೆಯನ್ನು ಮಾಡಲಾಗಿತ್ತು. ನೀರಿನ ಬಾಟಲ್‌ಗಳು ಹಾಗೂ ಪ್ರತ್ಯೇಕ ಸ್ಥಳದಲ್ಲಿ ತಾತ್ಕಾಲಿಕ ಶೌಚಾಲಯಗಳ ವ್ಯವಸ್ಥೆ ಮಾಡಲಾಗಿತ್ತು. ಅಡುಗೆ ಸಿದ್ಧಪಡಿಸಲು ಮೈಸೂರು, ಮಂಡ್ಯ, ದಾವಣಗೆರೆ ಸೇರಿದಂತೆ ರಾಜ್ಯದ ವಿವಿಧ ಕಡೆಗಳಿಂದ ಸಹಾಯಕರನ್ನು ಕರೆತರಲಾಗಿತ್ತು.

ಭರ್ಜರಿ ವ್ಯಾಪಾರ: ಊಟದ ಕೌಂಟರ್ ಸಮೀಪದಲ್ಲೇ ಗೋಬಿ ಮಂಚೂರಿ, ಪಾನಿಪುರಿ, ಸೌತೆಕಾಯಿ, ಕಲ್ಲಂಗಡಿ, ಕಬ್ಬಿನ ಜೂಸ್, ಐಸ್ ಕ್ರೀಂ ಅಂಗಡಿಗಳನ್ನು ಹಾಕಿಕೊಂಡಿದ್ದ ವ್ಯಾಪಾರಸ್ಥರಿಗೆ ಭರ್ಜರಿ ವ್ಯಾಪಾರವಾಯಿತು. ಆಯೋಜಕರ ಅನುಮತಿ ಪಡೆದು ಅಂಗಡಿ ಹಾಕಿಕೊಂಡಿದ್ದೇವೆ. ವ್ಯಾಪಾರ ಚೆನ್ನಾಗಿ ನಡೆದಿದೆ ಎಂದು ವ್ಯಾಪಾರಿ ಗುಡುಮಾದನಹಳ್ಳಿಯ ಸುರೇಶ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಕೆಲಕಾಲ ರಿಂಗ್ ರೋಡ್ ಬಂದ್....!

ರಿಂಗ್‌ರೋಡ್ ಸಮೀಪದ ಸರ್ಕಾರಿ ಉತ್ತನಹಳ್ಳಿ ಬಳಿ ನಡೆದ ಜೆಡಿಎಸ್ ಪಂಚರತ್ನ ರಥಯಾತ್ರೆ ಸಮಾರೋಪ ಸಮಾರಂಭದ ಹಿನ್ನೆಲೆ ನಂಜನಗೂಡು ಜಂಕ್ಷನ್‌ನಿಂದ ಬನ್ನೂರು ಮುಖ್ಯರಸ್ತೆಯ ಹೆಚ್.ಡಿ.ದೇವೇಗೌಡ ವೃತ್ತದವರೆಗಿನ ರಿಂಗ್‌ರೋಡ್ ಅನ್ನು ಕೆಲಕಾಲ ಬಂದ್ ಮಾಡಲಾಗಿತ್ತು.

ಪಂಚರತ್ನ ರಥಯಾತ್ರೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವವರನ್ನು ಹೊರತುಪಡಿಸಿ ಉಳಿದ ವಾಹನಗಳ ಸಂಚಾರಕ್ಕೆ ಅವಕಾಶ ನೀಡಲಿಲ್ಲ. ಉತ್ತನಹಳ್ಳಿ ಸಮೀಪದಲ್ಲಿ ಸುಮಾರು 4 ಕಿಲೋ ಮೀಟರ್‌ವರೆಗಿನ ರಿಂಗ್ ರಸ್ತೆ ಸಂಪೂರ್ಣವಾಗಿ ಸರ್ಕಾರಿ ಹಾಗೂ ಖಾಸಗಿ ಬಸ್‌ಗಳಿಂದ ಆವೃತ್ತವಾಗಿತ್ತು. ರಸ್ತೆಯುದ್ದಕ್ಕೂ ಕಾರು, ಬಸ್‌ಗಳನ್ನು ನಿಲ್ಲಿಸಲಾಗಿತ್ತು. ವಿವಿಧ ಕಡೆಗಳಿಂದ ಬಂದ ಜೆಡಿಎಸ್ ಬೆಂಬಲಿಗರು ರಿಂಗ್ ರಸ್ತೆಯಿಂದ ವೇದಿಕೆಯವರೆಗೆ ಸಾಗಿದರು.



ಮೈಸೂರಿನ ಹೊರವಲಯದ ಸರ್ಕಾರಿ ಉತ್ತನಹಳ್ಳಿಯಲ್ಲಿ ನಡೆದ ಜೆಡಿಎಸ್ ಪಂಚರತ್ನ ರಥಯಾತ್ರೆ ಸಮಾರೋಪ ಸಮಾರಂಭ ಸ್ಥಳದಲ್ಲಿ ಮೈಸೂರು ಅರಮನೆ ಮಾದರಿ ಹಾಗೂ ಪಕ್ಷದ ನಾಯಕರ ಬೃಹತ್ ಕಟೌಟ್‌ಗಳನ್ನು ಅಳವಡಿಸಲಾಗಿತ್ತು

ನಾನು ಕುಟುಂಬ ರಾಜಕಾರಣ ಮಾಡಲ್ಲ: ಸಚ್ಚಿದಾನಂದ



ಶ್ರೀರಂಗಪಟ್ಟಣ, ಮಾ.26– ನಾನು ಕುಟುಂಬ ರಾಜಕಾರಣ ಮಾಡಲ್ಲ. ನನಗೆ ಅದರ ಅವಶ್ಯಕತೆಯೂ ಇಲ್ಲ. ರಾಜಕೀಯಕ್ಕೆ ನಮ್ಮ ಕುಟುಂಬದಿಂದ ನಾನೇ ಮೊದಲು, ನಾನೇ ಕೊನೆ. ಹೀಗಾಗಿ ಈ ಬಾರಿಯ ಚುನಾವಣೆಯಲ್ಲಿ ನನಗೆ ಆಶೀರ್ವದಿಸಿ ಎಂದು ಬಿಜೆಪಿ ಯುವ ಮುಖಂಡ ಇಂಡುವಾಳು ಸಚ್ಚಿದಾನಂದ ಮನವಿ ಮಾಡಿದರು.

ತಾಲೂಕಿನ ಬೆಳಗೊಳ ಗ್ರಾಮದ ಖಾಸಗಿ ಭವನದಲ್ಲಿ ಆಯೋಜಿಸಿದ್ದ ಬೆಳಗೊಳ ಹೋಬಳಿ ಮಟ್ಟದ ಕಾರ್ಯಕರ್ತರ ಸಭೆ ಹಾಗೂ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹಲವು ವರ್ಷಗಳಿಂದ ನಾನು ಜನಪರ ಕೆಲಸ ಮಾಡಿಕೊಂಡು ಬರುತ್ತಿದ್ದೇನೆ. ಈ ಬಾರಿಯ ಚುನಾವಣೆಯಲ್ಲಿ ಶ್ರೀರಂಗಪಟ್ಟಣ ಕ್ಷೇತ್ರದ ಬಿಜೆಪಿ ಪಕ್ಷದ ಪ್ರಬಲ ಟಿಕೆಟ್ ಆಕಾಂಕ್ಷಿಯಾಗಿದ್ದು, ನನಗೆ ಟಿಕೆಟ್ ದೊರೆಯುವ ವಿಶ್ವಾಸವಿದೆ. ಕೇಂದ್ರದಲ್ಲಿ ಮೋದಿ, ರಾಜ್ಯದಲ್ಲಿ ಮಾಜಿ ಸಿಎಂ ಯಡಿಯೂರಪ್ಪ ಹಾಗೂ ಬಸವರಾಜ ಬೊಮ್ಮಾಯಿ ಸರ್ಕಾರದ ಜನಪರ ಕಾರ್ಯ ಮೆಚ್ಚಿ ಕ್ಷೇತ್ರದ ನೂರಾರು ಮಂದಿ ಕಾಂಗ್ರೆಸ್ ಹಾಗೂ ಜೆಡಿಎಸ್ ತೊರೆದು ಬಿಜೆಪಿ ಸೇರ್ಪಡೆಯಾಗುತ್ತಿದ್ದಾರೆ. ಹೀಗಾಗಿ ಈ ಬಾರಿ ಮತ್ತೊಮ್ಮೆ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರಲಿದ್ದು, ಜನಸೇವೆ ಮಾಡಲು ನನಗೊಂದು ಅವಕಾಶ ನೀಡುವಂತೆ ವಿನಂತಿಸಿದರು.

ಇದೇ ವೇಳೆ ಜೆಡಿಎಸ್, ಕಾಂಗ್ರೆಸ್ ತೊರೆದು ಗ್ರಾಪಂ ಮಾಜಿ ಉಪಾಧ್ಯಕ್ಷ ಮಂಜುನಾಥ್, ಬಲಮುರಿ ದೇವಾಲಯ ಅಭಿವೃದ್ಧಿ ಸಮಿತಿ ಮಾಜಿ ಅಧ್ಯಕ್ಷ ಪ್ರಸನ್ನ, ಮಾಜಿ ಸದಸ್ಯರಾದ ಮಧುರಬಾಬು, ಸತೀಶ್, ಗುತ್ತಿಗೆದಾರರಾದ ರವಿ, ನಾಗೇಂದ್ರ, ದೇವರಾಜು, ಗ್ರಾಪಂ ಮಾಜಿ ಸದಸ್ಯರಾದ ಮಹೇಶ್, ಬೆಟ್ಟೇಗೌಡ, ಭರತೇಶ್, ಶ್ರೀಧರ್, ತೇಜು, ಹುಲಿಕೆರೆ ಗ್ರಾಪಂ ಮಾಜಿ ಅಧ್ಯಕ್ಷೆ ಸುಶೀಲಮ್ಮ, ಮಾಜಿ ಸದಸ್ಯೆ ರಾಜೇಶ್ವರಿ ಸೇರಿದಂತೆ ನೂರಾರು ಮಂದಿ ಬಿಜೆಪಿಗೆ ಸೇರ್ಪಡೆಗೊಂಡರು. ಜಿಪಂ ಮಾಜಿ ಸದಸ್ಯ ಎಸ್.ಎಲ್. ಲಿಂಗರಾಜು, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಟಿ.ಶ್ರೀಧರ್, ತಾಲೂಕು ಅಧ್ಯಕ್ಷ ರಮೇಶ್ ಸೇರಿದಂತೆ ಇತರರಿದ್ದರು.

ಶಾಲೆಗಳ ಕೊಠಡಿ ನಿರ್ಮಾಣಕ್ಕೆ ಗುದ್ದಲಿಪೂಜೆ



ಭಾರತೀನಗರ, ಮಾ.26– ಇಲ್ಲಿಗೆ ಸಮೀಪದ ಮಣಿಗೆರೆಯಲ್ಲಿ 3.21 ಕೋಟಿ ರೂ. ವೆಚ್ಚದಲ್ಲಿ ವಿವಿಧ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಕೊಠಡಿ ನಿರ್ಮಾಣ ಕಾಮಗಾರಿಗೆ ಶಾಸಕ ಡಿ.ಸಿ.ತಮ್ಮಣ್ಣ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಕೆಲ ದಿನಗಳಲ್ಲೇ ಚುನಾವಣಾ ನೀತಿ ಸಂಹಿತೆ ಜಾರಿಯಾಗುವ ಹಿನ್ನೆಲೆಯಲ್ಲಿ ತಾಲೂಕಿನ ವಿವಿಧ ಶಾಲೆಗಳಿಗೆ ಹೋಗಿ ಕೊಠಡಿಗಳ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಲು ಸಾಧ್ಯವಾಗುತ್ತಿಲ್ಲ. ಹಾಗಾಗಿ ಮಣಿಗೆರೆ ಗ್ರಾಮದಲ್ಲೇ 15 ಸರ್ಕಾರಿ ಶಾಲೆಗಳ ಕೊಠಡಿ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡುತ್ತಿದ್ದೇನೆ ಎಂದರು.

ಹೂತಕೆರೆ, ತೊರೆಶೆಟ್ಟಿಹಳ್ಳಿ, ಬೊಪ್ಪಸಮುದ್ರ ಕೊಕ್ಕರೆಬೆಳ್ಳೂರು, ಮಡೇನಹಳ್ಳಿ, ಮಾದರಹಳ್ಳಿ ಪ್ರೌಢಶಾಲೆಗಳ ಕೊಠಡಿ ನಿರ್ಮಾಣಕ್ಕೆ ತಲಾ 16.40 ಲಕ್ಷ ರೂ., ಮಾದಹಳ್ಳಿ ಹಿರಿಯ ಪ್ರಾಥಮಿಕ ಶಾಲೆಗೆ 13.90 ಲಕ್ಷ, ಚಾಮನಹಳ್ಳಿ, ಸಬ್ಬನಹಳ್ಳಿ, ಚನ್ನೇಗೌಡನದೊಡ್ಡಿ, ಯಡಗನಹಳ್ಳಿ, ದೇವರಹಳ್ಳಿ, ಬ್ಯಾಡರಹಳ್ಳಿ, ಮದ್ದೂರು ಉರ್ದು ಶಾಲೆಗೆ ತಲಾ 27.80 ಲಕ್ಷ, ವಡ್ಡರಹಳ್ಳಿ ಕಿರಿಯ ಪ್ರಾಥಮಿಕ ಶಾಲೆಗೆ 13.90 ಲಕ್ಷ ಒಟ್ಟು 3.21 ಕೋಟಿ ರೂ.ವೆಚ್ಚದಲ್ಲಿ ಶಾಲಾಕೊಠಡಿ ನಿರ್ಮಾಣ ಅಭಿವೃದ್ಧಿ ಕಾಮಗಾರಿಗೆ ಕ್ರಮಕೈಗೊಂಡಿದ್ದೇನೆ ಎಂದರು.

ರೈತರ, ಕೂಲಿ ಕಾರ್ಮಿಕರ, ಬಡ ವರ್ಗದ ಮಕ್ಕಳು ಶಿಕ್ಷಣ ಪಡೆಯಬೇಕೆಂಬ ಉದ್ದೇಶದಿಂದ ಪ್ರತಿ ಹೋಬಳಿ ವ್ಯಾಪ್ತಿಯಲ್ಲಿ ಮೊರಾರ್ಜಿ ವಸತಿ ಶಾಲೆ ಹಾಗೂ ಕೈಗಾರಿಕಾ ತರಬೇತಿ ಕೇಂದ್ರಗಳನ್ನು ತೆರೆಯುತ್ತಿದ್ದೇನೆ ಎಂದರು. ಇದೇ ವೇಳೆ ಜೆಡಿಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಶಿವರಾಮು, ತಾಲೂಕು ಅಧ್ಯಕ್ಷ ಚಿಕ್ಕತಿಮ್ಮೇಗೌಡ, ಕಾರ್ಯಾಧ್ಯಕ್ಷ ರಾಜಣ್ಣ, ಮುಖಂಡರಾದ ಎಚ್.ಎಂ.ಮರಿಮಾದೇಗೌಡ, ಗ್ರಾಪಂ ಸದಸ್ಯರಾದ ಸಿದ್ದರಾಜು, ತಿಬ್ಬಯ್ಯ ಸೀನಪ್ಪ, ಶಿವಲಿಂಗೇಗೌಡ, ಇಂಜಿನಿಯರ್ ಮಹದೇವಪ್ಪ ಸೇರಿದಂತೆ ಹಲವರಿದ್ದರು.

183 ಕೋಟಿ ವೆಚ್ಚದ ಕುಡಿಯುವ ನೀರಿನ ಯೋಜನೆ ಮಂಜೂರು

ಜೆಡಿಎಸ್ ಕಾರ್ಯಕರ್ತರ ಸಭೆಯಲ್ಲಿ ಶಾಸಕ ಸಿ.ಎಸ್.ಪುಟ್ಟರಾಜು

ಪಾಂಡವಪುರ, ಮಾ.26– ತಾಲೂಕಿನ ಪ್ರತಿ ಮನೆಗಳಿಗೆ ಕಾವೇರಿ ನದಿಯಿಂದ ಶುದ್ಧ ಕುಡಿಯುವ ನೀರು ಪೂರೈಸುವ 183 ಕೋಟಿ ವೆಚ್ಚದ ಯೋಜನೆ ಮಂಜೂರು ಮಾಡಿಸಿದ್ದೇನೆ ಎಂದು ಶಾಸಕ ಸಿ.ಎಸ್.ಪುಟ್ಟರಾಜು ತಿಳಿಸಿದರು.

ತಾಲೂಕಿನ ಜಕ್ಕನಹಳ್ಳಿಯಲ್ಲಿ ನಡೆದ ಜಕ್ಕನಹಳ್ಳಿ ಹಾಗೂ ಲಕ್ಷ್ಮಿಸಾಗರ ಜಿಪಂ ವ್ಯಾಪ್ತಿಯ ಜೆಡಿಎಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಹೆಚ್.ಡಿ.ಕುಮಾರಸ್ವಾಮಿ ಅವರು ತಮ್ಮ ಅಧಿಕಾರವಧಿಯಲ್ಲಿ ಜಿಲ್ಲೆ, ಎಲ್ಲಾ ತಾಲೂಕುಗಳ ಮನೆ ಮನೆಗೆ ಕಾವೇರಿ ನದಿಯಿಂದ ಶುದ್ಧ ಕುಡಿಯುವ ನೀರು ಪೂರೈಕೆ ಮಾಡುವ ಯೋಜನೆಗಾಗಿ 1500 ಕೋಟಿ ರೂ. ಅನುದಾನ ಮಂಜೂರು ಮಾಡಿದ್ದರು. ಬದಲಾದ ರಾಜಕೀಯ ಸನ್ನಿವೇಶದಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರ ಅನುದಾನ ಮೊಟಕುಗೊಳಿಸಿ 700 ಕೋಟಿ ರೂ. ಟೆಂಡರ್ ಮಾಡಿ ಕೆ.ಆರ್.ಪೇಟೆ, ನಾಗಮಂಗಲ ಹಾಗೂ ಪಾಂಡವಪುರ ತಾಲೂಕಿಗೆ ಮಾತ್ರ ಕುಡಿಯುವ ನೀರಿನ ಯೋಜನೆ ಮಂಜೂರು ಮಾಡಿತು ಎಂದು ಕಿಡಿಕಾರಿದರು.

ಪ್ರತಿ ಹಂತದಲ್ಲೂ ಅಭಿವೃದ್ಧಿ ಕಾರ್ಯಗಳಿಗೆ ವಿರೋಧಿಗಳು ತಡೆಯೊಡ್ಡುವ ಮೂಲಕ ನೋವುಂಟು ಮಾಡಿದ್ದಾರೆ. ಎಲ್ಲಿ ಪುಟ್ಟರಾಜುಗೆ ಹೆಸರು ಬರುತ್ತೆ ಎಂದು ಹುನ್ನಾರ ನಡೆಸಿದ್ದಾರೆ. ಅದ್ಯಾವುದಕ್ಕೂ ತಲೆ ಕೆಡಿಸಿಕೊಳ್ಳದೆ ಕ್ಷೇತ್ರದಲ್ಲಿ ಹಲವು ಅಭಿವೃದ್ಧಿ ಕೆಲಸ ಮಾಡಿದ್ದೇನೆ. ಮುಂದೆಯೂ ಅಭಿವೃದ್ಧಿ ಕೆಲಸ ಮಾಡುವ ಯೋಜನೆ ರೂಪಿಸಿದ್ದೇನೆ ಎಂದರು.

ಜಕ್ಕನಹಳ್ಳಿ ಬಾಂಬೆ ಇದ್ದಂತೆ. ಪ್ರಮುಖ ವಾಣಿಜ್ಯ ಕೇಂದ್ರವಾಗಿ ದಾಪುಗಾಲು ಹಾಕುತ್ತಿದೆ. ಮುಂದಿನ ದಿನಗಳಲ್ಲಿ 7 ಮಂದಿ ವೈದ್ಯರ ಸಮುದಾಯ ಆರೋಗ್ಯ ಕೇಂದ್ರ ಮಂಜೂರು ಮಾಡಿಸಲಿದ್ದು, ಸುಂಕಾತೊಣ್ಣೂರಿಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರು ಮಾಡಿಸುವೆ. ಮೇಲುಕೋಟೆ ಆಸ್ಪತ್ರೆ ಮೇಲ್ದರ್ಜೆಗೇರಿಸಲಾಗುವುದು ಎಂದರು. ಪ್ರೊ.ಎಚ್.ಆರ್.ತಿಮ್ಮೇಗೌಡ ಮಾತನಾಡಿ, ಕ್ಷೇತ್ರವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಜೊತೆಗೆ ಕೊರೊನಾದಂತಹ ಸಂಕಷ್ಟದ ಸಂದರ್ಭ ಜನರಿಗೆ ಸ್ಪಂದಿಸಿ ಕೆಲಸ ಮಾಡಿದ ಸಿ.ಎಸ್.ಪುಟ್ಟರಾಜು ಅವರು ಬೇಕೋ? ಚುನಾವಣೆಯಲ್ಲಿ ಸೋತ ಬಳಿಕ ಅಮೆರಿಕಾಕ್ಕೆ ಹೋಗಿ ಚುನಾವಣೆ 6 ತಿಂಗಳು ಇರುವಾಗ ಬಂದಿರುವ ವ್ಯಕ್ತಿ ಬೇಕೋ? ಎನ್ನುವುದನ್ನು ಕ್ಷೇತ್ರದ ಜನತೆ ತೀರ್ಮಾನಿಸಬೇಕು ಎಂದು ಮನವಿ ಮಾಡಿದರು.



ಸಣ್ಣ ನೀರಾವರಿ ಸಚಿವನಾದ ನಂತರ ಕ್ಷೇತ್ರಕ್ಕೆ ಸಾಕಷ್ಟು ನೀರಾವರಿ ಯೋಜನೆ ಮಂಜೂರು ಮಾಡಿಸಿದ್ದೇನೆ. ಮಳೆಯಾಶ್ರಿತ ಪ್ರದೇಶವಾದ ಜಕ್ಕನಹಳ್ಳಿ, ಮೇಲುಕೋಟೆ, ಸುಂಕಾತೊಣ್ಣೂರು ವ್ಯಾಪ್ತಿಯ ಎಲ್ಲಾ ಕೆರೆಗಳನ್ನು ತುಂಬಿಸುವ ಕೆಲಸ ಮಾಡಲಾಗುತ್ತಿದೆ. ದುದ್ದ ಹೋಬಳಿಯ 54 ಕೆರೆ ತುಂಬಿಸುವ ಯೋಜನೆಗೆ ಚಾಲನೆ ನೀಡಲಾಗಿದೆ. ಇನ್ನೂ 20 ಹೆಚ್ಚುವರಿ ಕೆರೆ ತುಂಬಿಸುವ ಯೋಜನೆಗೂ ಚಾಲನೆ ನೀಡಲಾಗಿದೆ. ಹೋಬಳಿಗೆ 2 ವಿದ್ಯುತ್ ಸಬ್ ಸ್ಟೇಷನ್ ಮಂಜೂರು ಮಾಡಿಸಿದ್ದೇನೆ. ಜೊತೆಗೆ 100 ಕೋಟಿ ವೆಚ್ಚದಲ್ಲಿ 220 ಕೆವಿ ವಿದ್ಯುತ್ ಸ್ಟೇಷನ್ ಮಂಜೂರು ಮಾಡಿಸಲಾಗಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿದೆ.

-ಸಿ.ಎಸ್.ಪುಟ್ಟರಾಜು, ಶಾಸಕ.

ಸಿ.ಎಸ್.ಪುಟ್ಟರಾಜು ಅವರನ್ನು ಸೋಲಿಸಲು ಕ್ಷೇತ್ರದಲ್ಲಿ ಸಾಕಷ್ಟು ಹುನ್ನಾರ ನಡೆಯುತ್ತಿವೆ. ಪುಟ್ಟರಾಜು ಸೋತರೆ ಕ್ಷೇತ್ರ ಇನ್ನಷ್ಟು ಹಿಂದೆ ಉಳಿಯಲಿದೆ. ಜತೆಗೆ ಕ್ಷೇತ್ರದಂತಹ ನತದೃಷ್ಟರು ಮತ್ತೊಬ್ಬರಿಲ್ಲ. ಹಾಗಾಗಿ ಪ್ರತಿಯೊಬ್ಬರೂ ಸಿ.ಎಸ್.ಪುಟ್ಟರಾಜು ಅವರನ್ನು ಗೆಲ್ಲಿಸಿಕೊಟ್ಟರೆ ಅವರು ಮಂತ್ರಿಯಾಗುವ ಸಾಕಷ್ಟು ಅವಕಾಶಗಳಿವೆ ಎಂದರು. ಇದಕ್ಕೂ ಮುನ್ನ ನೂರಾರು ಮಹಿಳೆಯರ ಪೂರ್ಣಕುಂಭದೊಂದಿಗೆ ಅದ್ಧೂರಿ ಮೆರವಣಿಗೆ ಮೂಲಕ ವೇದಿಕೆಗೆ ಪುಟ್ಟರಾಜು ಅವರನ್ನು ಕರೆತರಲಾಯಿತು.

ಈ ಸಂದರ್ಭದಲ್ಲಿ ಜೆಡಿಎಸ್ ಅಧ್ಯಕ್ಷ ಎಸ್.ಎ. ಮಲ್ಲೇಶ್, ತಾಪಂ ಮಾಜಿ ಸದಸ್ಯ ಕೆ.ಪುಟ್ಟೇಗೌಡ, ಗ್ರಾಪಂ ಅಧ್ಯಕ್ಷೆ ಲಕ್ಷ್ಮಮ್ಮ, ಮಾಜಿ ಉಪಾಧ್ಯಕ್ಷ ಲೋಕೇಶ್, ಮಾಜಿ ಅಧ್ಯಕ್ಷ ಎಸ್.ಮಹೇಶ್, ಟಿಎಪಿಸಿಎಂಎಸ್ ನಿರ್ದೇಶಕ ಬೆಟ್ಟಸ್ವಾಮೀಗೌಡ, ಮುಖಂಡರಾದ ವೈರಮುಡಿಗೌಡ, ನಂಜೇಗೌಡ, ಆನಂದ್, ಅಶ್ವಥ್ ಕುಮಾರೇಗೌಡ, ಶಿವಶಂಕರ್, ಪುಟ್ಟಣ್ಣ, ಚಂದ್ರಶೇಖರ್, ಎಸ್.ಕೆ. ದೇವೇಗೌಡ, ಕೆಂಪರಾಜು ಸೇರಿದಂತೆ ಹಲವರಿದ್ದರು.

ರಂಗಾಯಣದಿಂದ ಅಡ್ಡಂಡ ಕಾರ್ಯಪ್ಪ ವಜಾಕ್ಕೆ ಆಗ್ರಹ

ಮಂಡ್ಯ, ಮಾ.26– ಮೈಸೂರು ರಂಗಾಯಣ ನಿರ್ದೇಶಕರಾಗಿ ರಂಗಭೂಮಿಗೆ ಶಕ್ತಿ ತುಂಬದೇ ಕೀಳು ಮಟ್ಟದ ರಾಜಕಾರಣ ಮಾಡುತ್ತಿರುವ ಅಡ್ಡಂಡ ಸಿ.ಕಾರ್ಯಪ್ಪ ಅವರನ್ನು ಸರ್ಕಾರ ಕೂಡಲೇ ವಜಾಗೊಳಿಸಬೇಕು ಎಂದು ಕರ್ನಾಟಕ ಸಂಘದ ಅಧ್ಯಕ್ಷ ಬಿ.ಜಯಪ್ರಕಾಶಗೌಡ ಆಗ್ರಹಿಸಿದರು.

ನಗರದ ಕರ್ನಾಟಕ ಸಂಘದ ಆವರಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಂಗಭೂಮಿ ಜಾತಿ, ಪಂಥ, ತತ್ವ, ಭಾಷೆ ಮತ್ತು ಪ್ರಾದೇಶಿಕತೆ ಎಲ್ಲವನ್ನು ಮೀರಿ ಜನರನ್ನು ಒಂದುಗೂಡಿಸುವ ಕೆಲಸ ಮಾಡುತ್ತದೆ. ಆದರೆ, ರಂಗಾಯಣ ನಿರ್ದೇಶಕರಾಗಿ ಜನರನ್ನು ಒಡೆಯುವ, ಛಿದ್ರಗೊಳಿಸುವ ಕಾರ್ಯದಲ್ಲಿ ಅಡ್ಡಂಡ ಸಿ.ಕಾರ್ಯಪ್ಪ ಅವರು ನಿರತರಾಗಿರುವುದರಿಂದ ಆ ಸ್ಥಾನದಲ್ಲಿ ಮುಂದುವರೆಯಲು ಯಾವುದೇ ನೈತಿಕತೆ ಇಲ್ಲ ಎಂದು ಆರೋಪಿಸಿದರು.

ಶ್ರೀಆದಿಚುಂಚನಗಿರಿ ಮಠ ಒಕ್ಕಲಿಗರಿಗೆ ಸೀಮಿತವಾದ ಮಠವಲ್ಲ ಎಂಬುದನ್ನು ಮರೆತು ಶ್ರೀನಿರ್ಮಲಾನಂದನಾಥ ಸ್ವಾಮೀಜಿ ವಿರುದ್ಧವಾ ಕೇವಲವಾಗಿ ಮಾತನಾಡಿರುವ ಅಡ್ಡಂಡ ಸಿ.ಕಾರ್ಯಪ್ಪ, ಚುಂಚನಗಿರಿ ಒಕ್ಕಲಿಗರಿಗೆ ಸೀಮಿತವಾದ ಮಠವಲ್ಲ ಎಂಬ ಕನಿಷ್ಠ ತಿಳುವಳಿಕೆ ಇಲ್ಲದೆ ಅರ್ಥಹೀನವಾಗಿ ಬಡಬಡಾಯಿಸಿದ್ದಾರೆ. ಜಾತಿ ಮೀರಿ ಕೃಷಿ ಅಪ್ಪಿಕೊಂಡಿರುವ ಎಲ್ಲಾ ಮಂದಿಯೂ ಕ್ಷೇತ್ರಕ್ಕೆ ಭಕ್ತರಾಗಿದ್ದಾರೆ. ವರ್ಣ ವ್ಯವಸ್ಥೆ ತಳಮಟ್ಟದಲ್ಲಿರುವ ಎಲ್ಲ ಜಾತಿಯವರು ಶ್ರೀಕ್ಷೇತ್ರಕ್ಕೆ ನಡೆದುಕೊಳ್ಳುತ್ತಾರೆ. ಇದು ಕಾರ್ಯಪ್ಪಗೆ ಅರ್ಥವಾಗಬೇಕಾದರೆ ಅಮಾವಾಸ್ಯೆ ದಿನ ಶ್ರೀಕ್ಷೇತ್ರಕ್ಕೆ ಬಂದು ನೋಡಲಿ ಎಂದು ಚಾಟಿ ಬೀಸಿದರು.



ಗೋಷ್ಠಿಯಲ್ಲಿ ನಿವೃತ್ತ ಪ್ರಾಧ್ಯಾಪಕರಾದ ಅನಿಲ್‌ಕುಮಾರ್, ಡಾ.ಎಸ್.ಬಿ. ಶಂಕರೇಗೌಡ, ಸಂಘದ ಪದಾಧಿಕಾರಿಗಳಾದ ಪಿ.ಲೋಕೇಶ್ ಚಂದಗಾಲು, ತಗ್ಗಹಳ್ಳಿ ವೆಂಕಟೇಶ್, ನಾಗರೇವಕ್ಕ, ಹರೀಶ್‌ಕುಮಾರ್ ಇದ್ದರು.

ಅಕ್ಕಿಹೆಬ್ಬಾಳು ಗ್ರಾಪಂಗೆ ಗಾಂಧಿ ಗ್ರಾಮ ಪ್ರಶಸ್ತಿ

ಕೆ.ಆರ್.ಪೇಟೆ, ಮಾ.26– ತಾಲೂಕಿನ ಅಕ್ಕಿಹೆಬ್ಬಾಳು ಗ್ರಾಮ ಪಂಚಾಯಿತಿ 2019–20ನೇ ಸಾಲಿನ ಗಾಂಧಿ ಗ್ರಾಮ ಪ್ರಶಸ್ತಿಗೆ ಭಾಜನವಾಗಿದೆ.

ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಕೋಟಾ ಶ್ರೀನಿವಾಸ ಪೂಜಾರಿ ಅವರಿಂದ ಅಕ್ಕಿಹೆಬ್ಬಾಳು ಗ್ರಾಪಂ ಅಧ್ಯಕ್ಷೆ ನಾಗೇಶ್ವರಿ, ಪಿಡಿಓ ರವಿಕುಮಾರ್, ಉಪಾಧ್ಯಕ್ಷ ಸತೀಶ್, ಸದಸ್ಯರಾದ ರಕ್ಷಿತಾ, ಅಣ್ಣಯ್ಯ, ಹರೀಶ್, ರಮೇಶ್, ಸುಂದರ್, ಜಯಶೀಲ, ಸೌಮ್ಯ, ನಾಗಯ್ಯ, ಕುಮಾರೇಗೌಡ, ದೇವಮ್ಮ, ನಾಗಮ್ಮ, ಆಶಾ, ತಾರಾಶ್ರೀ, ಮನೋಹರ್ ಸೇರಿದಂತೆ ಎಲ್ಲಾ ಸದಸ್ಯರು ಗಾಂಧಿ ಗ್ರಾಮ ಪ್ರಶಸ್ತಿಯನ್ನು ಸ್ವೀಕರಿಸಿದರು. ಗಾಂಧಿ ಗ್ರಾಮ ಪ್ರಶಸ್ತಿಯು 5 ಲಕ್ಷ ರೂ., ಪ್ರಶಸ್ತಿ ಪತ್ರ, ಚಿನ್ನದ ಪದಕವನ್ನು ಒಳಗೊಂಡಿದೆ. 2019–20ನೇ ಸಾಲಿನಲ್ಲಿ ಉತ್ತಮ ಪ್ರಗತಿಗಾಗಿ ಅಕ್ಕಿಹೆಬ್ಬಾಳು ಗ್ರಾಪಂ ಗಾಂಧಿ ಗ್ರಾಮ ಪ್ರಶಸ್ತಿಗೆ ಆಯ್ಕೆಯಾಗಿದ್ದು, ಗ್ರಾಪಂ ಆಡಳಿತ ಮಂಡಳಿಯನ್ನು ಸಚಿವ ಡಾ.ಕೆ.ಸಿ.ನಾರಾಯಣ ಗೌಡ, ಜಿಪಂ ಸಿಇಓ ಶಾಂತ ಹುಲ್ಮನಿ, ತಾಪಂ ಇಓ ಸತೀಶ್, ಸಹಾಯಕ ನಿರ್ದೇಶಕ ಸಂದೀಪ್ ಅಭಿನಂದಿಸಿದ್ದಾರೆ.



ಮೈಸೂರಲ್ಲಿ ಜೆಡಿಎಸ್ ಮಹಾಶಕ್ತಿ ಪ್ರದರ್ಶನ



ಮೂರನೇ ಪುಟದಿಂದ

ಸಾ.ರಾ.ಮಹೇಶ್ ಸೇರಿದಂತೆ ರಾಜ್ಯದೆಲ್ಲೆಡೆಯಿಂದ ಜೆಡಿಎಸ್ ನಾಯಕರು, ಮುಖಂಡರು, ಕಾರ್ಯಕರ್ತರು ಭಾಗವಹಿಸಿದ್ದರು.

ಮೈಸೂರು, ಹಾಸನ, ಮಂಡ್ಯ, ಚಾಮರಾಜನಗರ, ಕೊಡಗು, ಕೋಲಾರ, ಬೀದರ್, ಬೆಂಗಳೂರು, ಕಲಬುರ್ಗಿ, ದಕ್ಷಿಣ ಕನ್ನಡ, ಬಳ್ಳಾರಿ ಸೇರಿದಂತೆ ರಾಜ್ಯದ ಎಲ್ಲಾ ಜಿಲ್ಲೆಗಳ ಬಹುತೇಕ ವಿಧಾನಸಭಾ ಕ್ಷೇತ್ರಗಳಿಂದಲೂ ಜೆಡಿಎಸ್ ಕಾರ್ಯಕರ್ತರು ತಂಡೋಪತಂಡವಾಗಿ ಆಗಮಿಸಿದ್ದರು. ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಬಸ್‌ಗಳು, ಖಾಸಗಿ ಬಸ್, ವ್ಯಾನ್ ಇನ್ನಿತರ ಸಾವಿರಾರು ವಾಹನಗಳಲ್ಲಿ ಲಕ್ಷಾಂತರ ಜನ ಬಂದು ಸಾಗರೋಪಾದಿಯಲ್ಲಿ ನೆರೆದಿದ್ದರು. ಕಣ್ಣು ಹಾಯಿಸಿದಲ್ಲೆಲ್ಲಾ ಜನರೇ ಕಾಣುತ್ತಿದ್ದರು. ಸಮಾವೇಶಕ್ಕೆ ಆಗಮಿಸಿದ್ದ ಎಲ್ಲರಿಗೂ ಮಧ್ಯಾಹ್ನ ಹಾಗೂ ರಾತ್ರಿ ಊಟದ ವ್ಯವಸ್ಥೆ ಮಾಡಲಾಗಿತ್ತು. ಮೈಸೂರಿನ ಪ್ರಮುಖ ವೃತ್ತ, ರಸ್ತೆ, ರಿಂಗ್ ರಸ್ತೆ ಸೇರಿದಂತೆ ಸಮಾವೇಶದ ಸ್ಥಳದಲ್ಲಿ ಜೆಡಿಎಸ್ ಬಾವುಟಗಳು, ಪಕ್ಷದ ನಾಯಕರ ಬೃಹತ್ ಕಟೌಟ್‌ಗಳು ರಾರಾಜಿಸಿದವು. ಬೃಹತ್ ವೇದಿಕೆ ಮುಂಭಾಗ ಮುಖಂಡರು ಹಾಗೂ ಕಾರ್ಯಕರ್ತರಿಗೆ ವ್ಯವಸ್ಥಿತವಾಗಿ ಆಸನ ವ್ಯವಸ್ಥೆ ಮಾಡಲಾಗಿತ್ತು. ಊಟ ನೀಡಲು ಪ್ರತ್ಯೇಕವಾದ ಕೌಂಟರ್ ವ್ಯವಸ್ಥೆ ಮಾಡಲಾಗಿತ್ತು. ಎಪಿಎಂಸಿ ಬಳಿಯ ರಿಂಗ್‌ರಸ್ತೆ ಜಂಕ್ಷನ್‌ನಿಂದಲೇ ವಿಪರೀತ ಟ್ರಾಫಿಕ್ ಜಾಮ್ ಉಂಟಾಗಿದ್ದರಿಂದ ವಾಹನದಿಂದ ಇಳಿದು ಜನ ಸಮಾವೇಶದ ಸ್ಥಳಕ್ಕೆ ನಡೆದೇ ಬಂದರು. ರಿಂಗ್ ರಸ್ತೆ ಇಕ್ಕೆಲಗಳಲ್ಲೂ ಬಸ್‌ಗಳನ್ನು ಪಾರ್ಕ್ ಮಾಡಲಾಗಿತ್ತು. ಈ ಪರಿಸ್ಥಿತಿಯಲ್ಲಿ ದ್ವಿಚಕ್ರ ವಾಹನದಲ್ಲಿ ಬಂದವರು ಹೈರಾಣಾದರು. ಸಮಾವೇಶ ಆರಂಭವಾದ ನಂತರವೂ ಜನ ನದಿಯಂತೆ ಹರಿದು ಬಂದರು. ಸಮಾವೇಶ ಮುಗಿದ ಬಳಿಕ ತಾವು ಬಂದಿದ್ದ ವಾಹನಗಳಿಗೆ ಹುಡುಕಾಟ ನಡೆಸಿದ್ದು ಕಂಡುಬಂದಿತು. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಚಾಮುಂಡೇಶ್ವರಿ ಶಾಸಕ ಜಿ.ಟಿ.ದೇವೇಗೌಡರು, ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ ನಂತರ ಕೊನೆಯಲ್ಲಿ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವರು ತಮ್ಮ ಸುದೀರ್ಘ ಭಾಷಣದಲ್ಲಿ 99 ದಿನಗಳ ಪಂಚರತ್ನ ರಥಯಾತ್ರೆಯ ಅನುಭವವನ್ನು ನೆರೆದಿದ್ದ ಜನಸಮೂಹದೊಂದಿಗೆ ಹಂಚಿಕೊಂಡರು. ಭಾಷಣದ ಕೊನೆಯಲ್ಲಿ ನೆರೆದಿದ್ದವರಿಗೆ ಧನ್ಯವಾದ ತಿಳಿಸುವಾಗ ವೇದಿಕೆಯಲ್ಲಿದ್ದ ವಿವಿಧ ಕ್ಷೇತ್ರದ ನಾಯಕರು ಕುಮಾರಸ್ವಾಮಿ ಅವರ ಬಳಿ ಹೋಗಿ ತಮ್ಮ ಕ್ಷೇತ್ರದ ಹೆಸರೇಳುವಂತೆ ದುಂಬಾಲು ಬಿದ್ದರು. ಹಾಗೇಯೇ ಕುಮಾರಸ್ವಾಮಿ ಅವರು ಕ್ಷೇತ್ರದ ಹೆಸರೇಳಿ ಎಲ್ಲಾ ಕಡೆಯಿಂದ ಜನ ಕಾರ್ಯಕರ್ತರು ಬಂದಿದ್ದೀರಿ ಎಂದು ಕೃತಜ್ಞತೆ ಸಲ್ಲಿಸಿದರು. ಪಂಚರತ್ನ ಯೋಜನೆಗಳನ್ನು ಪ್ರಚುರಪಡಿಸುವ ಗೀತೆಗೆ ವಿಶೇಷ ನೃತ್ಯ ಸೇರಿದಂತೆ ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಸಮಾವೇಶ ಮುಕ್ತಾಯವಾದ ಬಳಿಕ ಬಾನಂಗಳದಲ್ಲಿ ಚಿತ್ತಾರ ಮೂಡಿಸುವ ಸಿಡಿಮದ್ದುಗಳನ್ನು ಸಿಡಿಸಲಾಯಿತು. ಜೆಡಿಎಸ್ ನಾಯಕರು ಚಾಮುಂಡಿಬೆಟ್ಟಕ್ಕೆ ತೆರಳಿ ತಾಯಿಯ ಆಶೀರ್ವಾದ ಪಡೆದ ಬಳಿಕ ಕಳೆದ ವರ್ಷ ನವೆಂಬರ್ 18ರಂದು ಕೋಲಾರ ಜಿಲ್ಲೆ ಮುಳಬಾಗಿಲಿನ ಕುರುಡುಮಲೆಯಿಂದ 'ಪಂಚರತ್ನ' ರಥಯಾತ್ರೆ ಆರಂಭಿಸಲಾಗಿತ್ತು. ಅಲ್ಲಿನ ಕುರುಡುಮೇಲೆ ಗಣಪತಿ ದೇವಾಲಯದಲ್ಲಿ ಪೂಜೆ ಸಲ್ಲಿಸುವ ಮೂಲಕ ಮಾಜಿ ಪ್ರಧಾನಿ, ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಹೆಚ್.ಡಿ ದೇವೇಗೌಡರು ಚಾಲನೆ ನೀಡಿದ್ದರು.

ಅಂದಿನಿಂದ 88 ವಿಧಾನಸಭಾ ಕ್ಷೇತ್ರಗಳಲ್ಲಿ 99 ದಿನಗಳ ಕಾಲ ಸುಮಾರು 10 ಲಕ್ಷ ಕಿ.ಮೀ. ಸಂಚರಿಸಿದ ರಥಯಾತ್ರೆಯಲ್ಲಿ 55 ಲಕ್ಷಕ್ಕೂ ಹೆಚ್ಚು ಜನ ನೇರವಾಗಿ ಭಾಗಿಯಾಗಿದ್ದು, ಸಾಮಾಜಿಕ ಜಾಲತಾಣಗಳ ಮೂಲಕ ಈ ಯಾತ್ರೆ 3 ಕೋಟಿಗೂ ಅಧಿಕ ಜನರನ್ನು ತಲುಪುವ ಮೂಲಕ ರಾಜ್ಯ ರಾಜಕೀಯ ಇತಿಹಾಸದಲ್ಲಿ ದಾಖಲೆಯಾಗಿದೆ. ಉತ್ತಮ ಗುಣಮಟ್ಟದ ಹಾಗೂ ವ್ಯವಸ್ಥಿತ ಶಿಕ್ಷಣವನ್ನು ಉಚಿತವಾಗಿ ನೀಡುವ 'ಶಿಕ್ಷಣವೇ ಆಧುನಿಕ ಶಕ್ತಿ', ಪ್ರತಿಯೊಂದು ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ 24x7 ಕಾರ್ಯ ನಿರ್ವಹಿಸುವ ಸುಸಜ್ಜಿತ ಹೈಟೆಕ್ ಆಸ್ಪತ್ರೆ ನಿರ್ಮಿಸುವ 'ಆರೋಗ್ಯ ಸಂಪತ್ತು', ಆಧುನಿಕ ತಂತ್ರಜ್ಞಾನದ ಕೃಷಿ ಪದ್ಧತಿ ಅಳವಡಿಕೆ, ಸರಿಯಾದ ಬೆಳೆ ಶೇಖರಣಾ ವ್ಯವಸ್ಥೆ ಹಾಗೂ ಲಾಭದಾಯಕವಾದ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವ 'ರೈತ ಚೈತನ್ಯ', ಯುವ ಜನತೆ ಹಾಗೂ ಮಹಿಳೆಯರಿಗೆ ಉದ್ಯೋಗ ಪಡೆಯಲು ಅಗತ್ಯ ತರಬೇತಿ ಹಾಗೂ ಮಾರ್ಗದರ್ಶನ ನೀಡುವ 'ಯುವ ನವ ಮಾರ್ಗ ಹಾಗೂ ಮಹಿಳಾ ಸಬಲೀಕರಣ' ಹಾಗೂ ವಸತಿ ಇಲ್ಲದವರಿಗೆ ಸರ್ಕಾರದಿಂದಲೇ ವಸತಿ ನಿರ್ಮಿಸುವ 'ವಸತಿಯ ಆಸರೆ', ಈ ಐದು ಯೋಜನೆಗಳ ಅನುಷ್ಠಾನಕ್ಕಾಗಿ ಒಮ್ಮೆ ಜೆಡಿಎಸ್‌ಗೆ ಸ್ಪಷ್ಟ ಬಹುಮತ ನೀಡುವಂತೆ ರಾಜ್ಯದ ಜನರನ್ನು ಬೇಡುವ ಉದ್ದೇಶದಿಂದ ಕೈಗೊಂಡಿದ್ದ 'ಪಂಚರತ್ನ' ರಥಯಾತ್ರೆ ಇಂದು ಮೈಸೂರಿನಲ್ಲಿ ಸಂಪನ್ನಗೊಂಡಿತು.

ಜೆಡಿಎಸ್ ದೊಡ್ಡ ಸಾಧನೆ ಮಾಡಲಿದೆ

ಒಂದು ಸಣ್ಣ ದೀಪ ಹಚ್ಚಿದೆ ಎಂಬ ಸಮಾಧಾನ ನನಗಿದೆ. ನಾನು ಕೆಡುಕು ಮಾಡಿಲ್ಲ. ಕರ್ನಾಟಕಕ್ಕೆ ಅಗೌರವ ತರುವ ಕೆಲಸ ಎಂದೂ ಮಾಡಿಲ್ಲ. ಭಗವದ್ಗೀತೆಯಲ್ಲಿ ಹೇಳಿದಂತೆ ಫಲಾಪೇಕ್ಷೆಯಿಲ್ಲದೆ ದುಡಿಯುತ್ತಾ ಬಂದಿದ್ದೇನೆ. ನಮ್ಮನ್ನು ನಂಬಿ, ನಮ್ಮ ಪಕ್ಷವನ್ನು ನಂಬಿ ಮತ್ತು ನಮ್ಮ ದುಡಿಮೆಯನ್ನು ನಂಬಿ ಎಂದಷ್ಟೇ ನಾನು ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ ಎಂದು ಮನವಿ ಮಾಡಿದರು.

ಮತ್ತೆ ಅವಕಾಶದ ಸೂಚನೆ: ಇಷ್ಟು ದೊಡ್ಡ ಸಂಖ್ಯೆಯಲ್ಲಿ ಇಲ್ಲಿ ಇಂದು ನೆರೆದಿರುವ ನಿಮ್ಮೆಲ್ಲರಿಗೂ ನಾನು ತಲೆಬಾಗಿ ವಂದಿಸುತ್ತೇನೆ. ನಾನು ಜೀವನದಲ್ಲಿ ಬೆಳೆದದ್ದು, ರಾಜಕೀಯದಲ್ಲಿ ಬೇರೂರಿದ್ದು ನಿಮ್ಮಿಂದ, ನನ್ನ ಪಕ್ಷದ ಕಾರ್ಯಕರ್ತರಿಂದ ಮತ್ತು ದೇವರ ಕೃಪೆಯಿಂದ. ನನ್ನ ಸುದೀರ್ಘ ಜೀವನದಲ್ಲಿ ಎಷ್ಟೇ ಕಷ್ಟ ಕಾರ್ಪಣ್ಯಗಳು ಬಂದರೂ, ನನ್ನನ್ನು ಕೈಬಿಡದೆ ನಡೆಸಿದ್ದು ಧೃತಿಗೆಡದಂತೆ ಮಾಡಿದ ಈ ಶಕ್ತಿಗಳಿಗೆ ನಾನು ಹೃದಯಂತರಾಳದಿಂದ ಅನಂತ ಅನಂತ ವಂದನೆಗಳನ್ನು ಸಲ್ಲಿಸುತ್ತೇನೆ. ನನಗೆ ಈಚೆಗೆ ಆರೋಗ್ಯದಲ್ಲಿ ಏರುಪೇರಾಗಿತ್ತು. ಇಂದು ನಿಮ್ಮನ್ನು ಕಣ್ತುಂಬಿಕೊಳ್ಳಲು ಆ ಭಗವಂತ ಅನುಗ್ರಹಿಸುತ್ತಾನೋ ಇಲ್ಲವೋ ಎಂಬ ಆತಂಕವಿತ್ತು ಆದರೆ ಆ ಪರಮಾತ್ಮ ನನಗೆ ತಕ್ಕ ಮಟ್ಟಿಗೆ ಚೇತರಿಕೆ ಕೊಟ್ಟು ನಿಮ್ಮ ಮುಂದೆ ನಿಲ್ಲಿಸಿದ್ದಾನೆ ಎಂದರೆ ಅದರ ಹಿಂದೆ ಅವನದೇನೋ ದೊಡ್ಡ ಆಟವಿದೆ ಎಂದು ನಂಬಿದ್ದೇನೆ. ನಾನು ಅವನ ಆಟದ ಭಾಗ. ನೀವು ನನ್ನ ಶಕ್ತಿಯ ಭಾಗ. ಈ ಭಗವಂತನ ಆಟ ಮತ್ತು ನಿಮ್ಮ ಶಕ್ತಿ ಒಟ್ಟುಗೂಡಿರುವುದು ನಮ್ಮ ಪಕ್ಷ ಈ ಚುನಾವಣೆಯಲ್ಲಿ ದೊಡ್ಡ ಸಾಧನೆ ಮಾಡಲಿದೆ ಎಂಬುದನ್ನು ಸೂಚಿಸುತ್ತದೆ. ಇದು ನಮಗೆ ಮತ್ತೆ ಜನಸೇವೆಯ ಅವಕಾಶ ಸಿಗುತ್ತದೆ ಎಂಬುದರ ಮುನ್ಸೂಚನೆ ಎಂದು ನಾನು ತಿಳಿಯುತ್ತೇನೆ. ನಿಮ್ಮ ಶ್ರಮ, ಪಕ್ಷದ ನಾಯಕರ ಶ್ರಮ ನಮ್ಮನ್ನು ಗುರಿಮುಟ್ಟುವಂತೆ ಮಾಡುತ್ತದೆ ಎಂಬುದರ ಬಗ್ಗೆ ನನಗೆ ಅನುಮಾನವಿಲ್ಲ ಎಂದು ನುಡಿದರು.

ನಮ್ಮದು ದುಡಿಮೆಯ ಪಕ್ಷ: ನಮ್ಮ ಪಕ್ಷ ಶ್ರಮದ ಮೇಲೆ, ದುಡಿಮೆಯ ಮೇಲೆ ನಿಂತಿದೆ. ನಾನು, ನೀವು ರೈತರ ಮಕ್ಕಳು, ಬೆವರು ಸುರಿಸಿ ಅನ್ನ ತಿನ್ನುತ್ತೇವೆ. ಇಲ್ಲಸಲ್ಲದ ಬಣ್ಣದ ನಾಟಕದ ಮಾತುಗಳಿಂದ ಮೇಲೆ ಬರುವುದಿಲ್ಲ. ಜಾತಿ, ಧರ್ಮದ ವೈಷಮ್ಯ ಬಿತ್ತಿ ಜನರನ್ನು ಒಡೆದು ಆಳುವ ಮಾದರಿ ನಮ್ಮದಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷರು ಹಾಗೆ ಮಾಡುತ್ತಿದ್ದರು. ಆನಂತರದ ದಶಕಗಳಲ್ಲಿ ಕೆಲವು ಪಕ್ಷಗಳು ಇದನ್ನು ಮುಂದುವರಿಸಿಕೊಂಡು ಬಂದಿವೆ. ಈಚೆಗೆ ನಾನು ಇಂತಹುದೇ ಬೆಳವಣಿಗೆಗಳನ್ನು ಗಮನಿಸುತ್ತಿದ್ದೇನೆ. ನಮ್ಮದು ಅನೇಕ ಸಂತರು, ಸಾಧಕರು, ಮಹಾತ್ಮ ಗಾಂಧಿಯವರು ಕಟ್ಟಿದ ದೇಶ. ಇದರ ಜಾಯಮಾನ ಬೇರೆ. ಇಲ್ಲಿ ಸುಳ್ಳು ಸ್ವಲ್ಪ ದಿನ ನಡೆಯಬಹುದು, ಆದರೆ ಸತ್ಯ ಮಾತ್ರ ಪುನರ್ಜನ್ಮ ಪಡೆಯುತ್ತಲೇ ಇರುತ್ತದೆ. ನಮ್ಮ ಪಕ್ಷದ ಜೊತೆ ನಿಂತಿರುವ ಎಲ್ಲರೂ ದುಡಿದು ತಿನ್ನುವ ಜನ ಮತ್ತು ಈ ಸತ್ಯದ ಅರಿವು, ಎಚ್ಚರಿಕೆ ಇರುವ ಜನ. ಪಕ್ಷದ ನಾಯಕರಾದ ಕುಮಾರಸ್ವಾಮಿಯವರು ಆರೋಗ್ಯವನ್ನು ಲೆಕ್ಕಿಸದೆ 'ಪಂಚರತ್ನ' ರಥಯಾತ್ರೆಯಲ್ಲಿ ಸುತ್ತಾಡಿದ್ದು, ಅವರಿಗೆ ಪ್ರತಿ ಹೆಜ್ಜೆಯಲ್ಲೂ ನೀವು ಶಕ್ತಿ ತುಂಬಿದ್ದನ್ನು ನಾನು ಕಂಡಿದ್ದೇನೆ. ನನ್ನನ್ನು ಈ ಕಾರ್ಯಕ್ರಮದಲ್ಲಿ ಒಮ್ಮೆಯಾದರೂ ಭಾಗಿಯಾಗುವಂತೆ ಭಗವಂತನನ್ನು ಬೇಡಿದ್ದೆ. ಅದನ್ನು ಈಗ ಈಡೇರಿಸಿ ನಿಮ್ಮ ಮುಂದೆ ನಿಲ್ಲಿಸಿದ್ದಾನೆ ಎಂದರು.

ಸಂಪೂರ್ಣ ವಿಶ್ವಾಸವಿದೆ: ನಾವು ಯಾವಾಗಲೂ ನುಡಿದಂತೆ ನಡೆದಿದ್ದೇವೆ. ಪಂಚರತ್ನ ಕಾರ್ಯಕ್ರಮದ ಭರವಸೆ ನೀಡಿರುವ ಕುಮಾರಸ್ವಾಮಿ, ಅಧಿಕಾರ ಬಂದಕೂಡಲೆ ಅದನ್ನು ನೆರವೇರಿಸುತ್ತಾರೆ ಎಂಬುದರಲ್ಲಿ ನನಗೆ ಯಾವುದೇ ಸಂಶಯವಿಲ್ಲ. ಕಳೆದ ಬಾರಿ ಅವರ ಕೈಕಟ್ಟಿ ಹಾಕುವ ಎಷ್ಟೇ ಪ್ರಯತ್ನ ನಡೆದಿದ್ದರೂ ರೈತರ ಸಾಲ ಮನ್ನಾ ಮಾಡಿದರು. ನನ್ನ ಏಳು ದಶಕಗಳ ರಾಜಕೀಯ ಜೀವನದಲ್ಲಿ ನಾನು ಎಂದೂ ಜನರ ಕಣ್ಣಿಗೆ ಮಣ್ಣೆರಚಲಿಲ್ಲ. ನಾನು ಮಾಡಬಯಸಿದ ಯೋಜನೆಗಳನ್ನಿಟ್ಟು ಮತ ಭಿಕ್ಷೆ ಕೇಳಿದ್ದೇನೆ. ಅಧಿಕಾರಕ್ಕೆ ಬಂದಾಗ ಅದನ್ನು ಈಡೇರಿಸಲು ಪ್ರಯತ್ನಿಸಿದ್ದೇನೆ. ಅದಕ್ಕೆ ಕೆಲವು ಶಕ್ತಿಗಳು ತೊಂದರೆ ಕೊಟ್ಟಾಗ ಹೋರಾಟ ಮಾಡಿದ್ದೇನೆ. ಅದೂ ಫಲಿಸದಿದ್ದಾಗ ಹತಾಶನಾಗಿ ರಾಜೀನಾಮೆ ಕೊಟ್ಟು ಮತ್ತೆ ಜನರ ಮುಂದೆ ಖಾಲಿ ಕೈಯಲ್ಲಿ ನಿಂತಿದ್ದೇನೆ. ಆಗಲೂ ಜನ ಮತ್ತೆ ನನ್ನನ್ನು ಹುರಿದುಂಬಿಸಿ ಅಧಿಕಾರ ಕೊಟ್ಟಿದ್ದಾರೆ. ನಾನು ಎಲ್ಲಾ ಕಾಲಕ್ಕೂ ಜಪಿಸಿದ್ದು ಅಭಿವೃದ್ಧಿಯ ಮಂತ್ರ ಮಾತ್ರ. ನಾನು ಅಧಿಕಾರದಲ್ಲಿ ಇದ್ದದ್ದು ಬಹಳ ಕಡಿಮೆ ವರ್ಷಗಳು. ಆದರೆ ಸಿಕ್ಕ ಅವಕಾಶದಲ್ಲಿ ನಾನು ಜನರ ಹಿತಕ್ಕಾಗಿ ದುಡಿದಿದ್ದೇನೆ ಎಂದು ಭಗವಂತನ ಮೇಲೆ ಪ್ರಮಾಣ ಮಾಡಿ ಹೇಳುತ್ತೇನೆ. ನನ್ನ ಪಕ್ಷದ ನಾಯಕರು ಹಾಗೂ ನನ್ನ ಮಕ್ಕಳಿಗೂ ಇದನ್ನೇ ಹೇಳಿಕೊಡಲು ಪ್ರಯತ್ನಿಸಿದ್ದೇನೆ. ಅವರು ಮುಂದೆಯೂ ಅದೇ ಹಾದಿಯಲ್ಲಿ ಕ್ರಮಿಸುತ್ತಾರೆ ಎಂಬ ವಿಶ್ವಾಸ ನನಗಿದೆ. ಹಾಗೆ ನಡೆದುಕೊಂಡರೆ ಜನ ಕೈಬಿಡುವುದಿಲ್ಲ ಎಂಬ ವಿಶ್ವಾಸ ನನಗಿದೆ. ಅವರಿಂದ ದೂರವಾದರೆ ಎಚ್ಚರಿಸುವ ವಿಧಾನವೂ ಜನರಿಗೆ ಗೊತ್ತಿದೆ ಎಂದು ನಾನು ತಿಳಿದಿದ್ದೇನೆ ಎಂದು ಎಚ್ಚರಿಕೆಯನ್ನೂ ನೀಡಿದರು. ಈ ಪಂಚರತ್ನ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ನಾವು ಮತ ಕೇಳಬೇಕಿದೆ. ಜನ ನಮ್ಮನ್ನು ಆಶೀರ್ವದಿಸುವುದರಲ್ಲಿ ಯಾವುದೇ ಸಂಶಯವಿಲ್ಲ. ನನ್ನ ರಾಜಕೀಯ ಜೀವನದಲ್ಲಿ ನಾನು ಎಲ್ಲಾ ವರ್ಗದ, ಎಲ್ಲಾ ಧರ್ಮದ ಜನರಿಗಾಗಿ ದುಡಿದಿದ್ದೇನೆ. ರೈತರ ಹಕ್ಕಿಗಾಗಿ ಹೋರಾಟ ಮಾಡಿದ್ದೇನೆ. ದೂರದ ಪಂಜಾಬಿನ ರೈತರು ಒಂದು ಬತ್ತದ ತಳಿಗೆ ನನ್ನ ಹೆಸರು ಇಟ್ಟುಕೊಂಡಿದ್ದಾರೆ. ನನಗೆ ಇನ್ನಾವ ಸನ್ಮಾನವೂ ಬೇಡ. ನಾನು ರೈತರ ಹಕ್ಕು, ಕಾವೇರಿ, ಕೃಷ್ಣ, ನರ್ಮದೆ, ಗಂಗೆಯ ನಿರ್ವಹಣೆಗಾಗಿ ದುಡಿದದ್ದೇ ಹೆಚ್ಚು. ಮಹಿಳೆಯರ ಹಕ್ಕಿಗಾಗಿಯೂ ಅಷ್ಟೇ ದೀರ್ಘವಾದ ಹೋರಾಟ ನಡೆಸಿದ್ದೇನೆ. ಅವರಿಗೆ ರಾಜಕೀಯ ಮೀಸಲಾತಿ ಕೊಡಬೇಕು ಎಂದು ಈ ದೇಶದಲ್ಲಿ ಮೊದಲು ಪ್ರಸ್ತಾವನೆ ಮಾಡಿದ್ದು ನಾನು. ನಾನು ಮುಖ್ಯಮಂತ್ರಿಯಾಗಿಯೇ ಆ ಕೆಲಸ ಮಾಡಿದೆ. ಪ್ರಧಾನಿಯಾದಾಗ ಅದನ್ನು ಕಾನೂನು ಮಾಡುವ ಪ್ರಕ್ರಿಯೆ ಪ್ರಾರಂಭಿಸಿದೆ. ಆದರೆ ಅಷ್ಟರಲ್ಲಿ ಅಧಿಕಾರ ಕಳೆದುಕೊಂಡೆ. ಇದೆಲ್ಲವೂ ಕಡತಗಳಲ್ಲಿ ಭದ್ರವಾಗಿದೆ. ಆದರೆ ತದನಂತರ ಬಂದ ಮಂದಿ ನನ್ನ ಹೆಸರು ಹೇಳಲು ಮರೆತರು. ಅವರು ಹೆಸರು ಹೇಳಲು ಮರೆತರು ಎಂದು ನನಗೆ ಬೇಸರವಿಲ್ಲ. ಜನ ನನ್ನನ್ನು ಸ್ಮರಿಸುತ್ತಾರೆ, ನಾನು ಇಲ್ಲವಾದಾಗಲೂ ಸ್ಮರಿಸುತ್ತಾರೆ ಎಂದು ನನಗೆ ತಿಳಿದಿದೆ ಎಂದರು.

ನಾನು ಪರಿಶಿಷ್ಟ ಜಾತಿ, ಪಂಗಡಗಳಿಗಾಗಿಯೂ ದುಡಿದಿದ್ದೇನೆ. ವಾಲ್ಮೀಕಿ ಸಮುದಾಯಕ್ಕೆ ನ್ಯಾಯ ದೊರಕಬೇಕಾದರೆ ನಾನು ಅಂದು ಪ್ರಧಾನಿಯಾಗಿದ್ದ ಚಂದ್ರಶೇಖರ್ ಅವರೊಂದಿಗೆ ಪಟ್ಟ ಪರಿಪಾಟಲು ನನಗೆ ಮಾತ್ರ ಗೊತ್ತು. ನಮ್ಮ ಮುಸಲ್ಮಾನ ಬಾಂಧವರಿಗೆ ನಾನು ಏನು ಮಾಡಿದ್ದೇನೆ ಎಂಬುದು ಅರಿವಿದೆ. ಇವತ್ತು ಬೆಂಗಳೂರು ನಗರ ಇಡೀ ರಾಜ್ಯವನ್ನು ಸಾಕುವಷ್ಟು ಆದಾಯ ಪಡೆಯುತ್ತಿದೆ. ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದಲ್ಲಿ ಘರ್ಜಿಸುತ್ತಿದೆ. ಇದೆಲ್ಲದಕ್ಕಾಗಿ ಈ ರೈತನ ಮಗ ದುಡಿದಿದ್ದಾನೆ. ನಾನೇ ಎಲ್ಲಾ ಮಾಡಿದೆ ಎಂದು ಹೇಳಿಕೊಳ್ಳುವ ದುಷ್ಟತನ, ಹುಂಬತನವಿಲ್ಲ. ಆದರೆ ನಾನು ಏನು ಮಾಡಿದೆ ಎಂಬುದು ಜನರಿಗೆ, ಆ ಭಗವಂತನಿಗೆ ತಿಳಿದಿದೆ. ನಾನು ಮುಖ್ಯಮಂತ್ರಿಯಾದಾಗ ಮತ್ತು ಪ್ರಧಾನಿಯಾದಾಗ ರಾಜಧಾನಿ ಬೆಂಗಳೂರಿಗಾಗಿ ಯಾವ ನಿರ್ಧಾರಗಳನ್ನು ತೆಗೆದುಕೊಂಡೆ ಎಂಬುದು ಕಡತಗಳಲ್ಲಿ ಇದೆ. ನಾನು ಎಂದಿಗೂ ಪ್ರಚಾರದ ಹಂಗಿಗೆ ಬಿದ್ದವನಲ್ಲ. ಅದಕ್ಕಾಗಿ ಒಂದು ಬಿಡಿಗಾಸನ್ನೂ ವ್ಯಯ ಮಾಡಿಲ್ಲ. ಯಾರೋ ಮಾಡಿದ ಸಾಧನೆಯನ್ನು ನನ್ನದು ಎಂದು ಬೀಗುವ ಕೀಳುಮಟ್ಟಕ್ಕೂ ಇಳಿಯಲಿಲ್ಲ ಎಂದು ಹೇಳಿದರು.

123 ಸ್ಥಾನದ ಗುರಿ ಸಾಕಾರಗೊಳಿಸಿ

ಭಾಗದಲ್ಲೂ ವಿಭಿನ್ನ ಅನುಭವವಾಗಿದೆ. ಕರ್ನಾಟಕವನ್ನು ನನಗಿಂತ ಅರಿತವರಿಲ್ಲ ಎಂದು ಗರ್ವದಿಂದ ಹೇಳಬಲ್ಲೆ. ಈ ಅನುಭವದ ಆಧಾರದಲ್ಲೇ ಪಂಚರತ್ನ ಕಾರ್ಯಕ್ರಮಗಳನ್ನು ರೂಪಿಸಿರುವುದು. ಉತ್ತಮ ಗುಣಮಟ್ಟದ ಶಿಕ್ಷಣ, ಪ್ರತಿ ಗ್ರಾಪಂ ವ್ಯಾಪ್ತಿಯಲ್ಲಿ ಸುಸಜ್ಜಿತ 30 ಬೆಡ್‌ಗಳ ಆಸ್ಪತ್ರೆ, ರೈತರು, ಯುವ ಸಮುದಾಯ ಹಾಗೂ ಮಹಿಳೆಯರ ಅಭಿವೃದ್ಧಿ, ಪ್ರತಿಯೊಬ್ಬರಿಗೂ ಸೂರು ಕಲ್ಪಿಸುವ ಐದು ಯೋಜನೆಗಳ ಜೊತೆಗೆ ಹತ್ತಾರು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಆಶಯವಿದೆ ಎಂದರು.

ರೈತ ಯುವಕರ ವಿವಾಹವಾದರೆ ಆ ಕುಟುಂಬಕ್ಕೆ ಆರ್ಥಿಕ ನೆರವು, ಸ್ತ್ರೀಶಕ್ತಿ ಸ್ವಸಹಾಯ ಸಂಘಗಳು ಡಿಸಿಸಿ ಬ್ಯಾಂಕ್‌ನಲ್ಲಿ ಪಡೆದಿರುವ ಸಾಲ ಮನ್ನಾ, ಕಿಡ್ನಿ ವೈಫಲ್ಯದಿಂದ ಬಳಲುವವರಿಗೆ ಉಚಿತ ಡಯಾಲಿಸಿಸ್ ಹಾಗೂ 40 ಲಕ್ಷ ರೂ. ವರೆಗೂ ಉಚಿತ ಚಿಕಿತ್ಸೆ, 6006 ಗ್ರಾಪಂ ವ್ಯಾಪ್ತಿಯಲ್ಲೂ ಸುಸಜ್ಜಿತ ಆಸ್ಪತ್ರೆ, ಬಿತ್ತನೆ ಬೀಜ ಹಾಗೂ ರಸಗೊಬ್ಬರಕ್ಕಾಗಿ ಎಕರೆಗೆ 10 ಸಾವಿರದಂತೆ ಗರಿಷ್ಠ 10 ಎಕರೆವರೆಗೆ ಉಚಿತ ಆರ್ಥಿಕ ನೆರವು, ಕಬ್ಬು ಬೆಳೆಗಾರರಿಗೆ ಖರ್ಚಿಗಿಂತ ಶೇ.50ರಷ್ಟು ಹೆಚ್ಚಿನ ನ್ಯಾಯಯುತ ಬೆಲೆ, ಕ್ವಿಂಟಾಲ್ ಕೊಬ್ಬರಿಗೆ 15 ಸಾವಿರ ರೂ., ಭೂಮಿ ಇಲ್ಲದ ಕೃಷಿ ಕಾರ್ಮಿಕರಿಗೆ ನೆರವು, 2006ರಲ್ಲಿ ಯೋಜಿಸಿದ್ದ ಸುವರ್ಣ ಗ್ರಾಮೋದಯ ಜಾರಿ, ಯುವಕರು, 24 ಗಂಟೆ ಕೃಷಿ ಪಂಪ್‌ಸೆಟ್‌ಗೆ ವಿದ್ಯುತ್, ಹೆಣ್ಣು ಮಕ್ಕಳ ಸ್ವಾಭಿಮಾನದ ಬದುಕಿಗೆ ಹಲವು ಕಾರ್ಯಕ್ರಮ ಜಾರಿಗೆ ತರುವ ಯೋಜನೆಯಿದೆ. ಇದಕ್ಕೆಲ್ಲಾ ಅಗತ್ಯವಾದ 2.50 ಲಕ್ಷ ಕೋಟಿ. ರೂ. ಸಂಗ್ರಹಿಸಿ ಬಂಡವಾಳ ವೆಚ್ಚವಾಗಿ ವಿನಿಯೋಗಿಸುವ ವಿಶ್ವಾಸ ನನ್ನಲಿದೆ ಎಂದು ನುಡಿದರು.

ಪ್ರವಾಹದಿಂದ ಜನ ನೊಂದಿದ್ದಾಗ ಸೌಜನ್ಯಕ್ಕೂ ಸಾಂತ್ವನ ಹೇಳದ ಪ್ರಧಾನಿ ಮೋದಿ ಈಗ ರೋಡ್ ಶೋ ಮಾಡಿ ಮತ ಕೇಳುತ್ತಿದ್ದಾರೆ. ಅವರು ಉತ್ತರ ಕರ್ನಾಟಕಕ್ಕೆ ಬಂದು ಸ್ವಚ್ಛ ಭಾರತ, ಜಲಜೀವನ್ ಮಿಷನ್ ಯೋಜನೆಯ ನೈಜತೆ ತಿಳಿಯಬೇಕು. ಇನ್ನು ಕಾಂಗ್ರೆಸ್‌ನವರು ಗ್ಯಾರಂಟಿ ಅಲ್ಲ ಡೂಪ್ಲಿಕೇಟ್ ಕಾರ್ಡ್ ಹಂಚುತ್ತಿದ್ದಾರೆ. 5.50 ಲಕ್ಷ ಕೋಟಿ ಸಾಲ ಇದೆ. ಹೀಗಿರುವಾಗ ಕಾಂಗ್ರೆಸ್ ಕಾರ್ಯಕ್ರಮಗಳಿಗೆ ಎಲ್ಲಿಂದ ಹಣ ತರಲು ಸಾಧ್ಯ. ನುಸಿ ರೋಗದಿಂದ ತೆಂಗು ಕಳೆದುಕೊಂಡ ರೈತರಿಗೆ ಪರಿಹಾರಕ್ಕೆ ದೇವೇಗೌಡರ ನೇತೃತ್ವದಲ್ಲೇ ಮೋದಿ ಅವರನ್ನು ಭೇಟಿ ಮಾಡಿ ಮನವಿ ಮಾಡಿದರೂ ಒಂದು ಬಿಡಿಗಾಸು ಕೊಡಲಿಲ್ಲ. ಆಗ ರಾಜ್ಯದಲ್ಲಿದ್ದ ಕಾಂಗ್ರೆಸ್ ಸರ್ಕಾರವೂ ಕೊಡಲಿಲ್ಲ. ಬಳಿಕ ನಾನು ಸಿಎಂ ಆದಾಗ ಎಕರೆಗೆ 18 ಸಾವಿರ ರೂ. ಪರಿಹಾರ ನೀಡಲಾಯಿತು. ಚಾಮರಾಜನಗರ ಜಿಲ್ಲೆಯ ತೆಂಗು ಬೆಳೆಗಾರರಿಗೂ 17 ಸಾವಿರ ಕೋಟಿ ರೂ. ಪರಿಹಾರ ನೀಡಿದ್ದೂ ಈ ರೈತನ ಮಗನೇ ಎಂದು ಹೇಳಿದರು.

ಮೈಸೂರಲ್ಲಿ ದೇವರ ದಾಸಿಮಯ್ಯ ಜಯಂತಿ



ಮೈಸೂರು,ಮಾ.26(ಎಸ್‌ಪಿಎನ್)– ದೇವರ ದಾಸಿಮಯ್ಯನವರು ತಮ್ಮ ವಿಚಾರ ಧಾರೆಗಳ ಮೂಲಕ 11ನೇ ಶತಮಾನದಲ್ಲಿನ ಸಮಾಜದ ಅಂಕುಡೊಂಕುಗಳನ್ನು ತಿದ್ದಿದರು. ಹಾಗಾಗಿ ಅವರು ಬರಹಗಳ ಮೂಲಕ ಇಂದಿಗೂ ಜೀವಂತವಿದ್ದಾರೆ ಎಂದು ಶಾಸಕ ಎಲ್. ನಾಗೇಂದ್ರ ಅವರು ತಿಳಿಸಿದರು.

ಮೈಸೂರು ಕಲಾಮಂದಿರದಲ್ಲಿ ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ದೇವರ ದಾಸಿಮಯ್ಯ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ದೇವರ ದಾಸಿಮಯ್ಯ ಬಸವಣ್ಣನವರಿಗಿಂತ ಹಿರಿಯರಾಗಿದ್ದು ಬಸವಣ್ಣನವರೇ ದೇವರ ದಾಸಿಮಯ್ಯ ಅವರನ್ನು ಆದ್ಯ ವಚನಕಾರರು ಎಂದು ಹೊಗಳಿದ್ದಾರೆ. ಅಲ್ಲದೆ, 11ನೇ ಶತಮಾನದಲ್ಲಿದ್ದ ದೇವರ ದಾಸಿಮಯ್ಯನವರು ತಮ್ಮ ವಚನಗಳ ಮೂಲಕ ಕಾಯಕ ಶ್ರೇಷ್ಠತೆಯನ್ನು ತಿಳಿಸುತ್ತಿದ್ದರು. ಅವರ ವಚನಗಳಿಂದ ಪ್ರಭಾವಿತರಾದ ಎಷ್ಟೋ ನೇಕಾರರು ಇಂದಿಗೂ ಕಾಯಕವೇ ಕೈಲಾಸವೆಂದು ದುಡಿಯುತ್ತಿದ್ದಾರೆ.

ರಾಜ್ಯ ಸರ್ಕಾರವು ಕೂಡ ರಾಜ್ಯ ನೇಕಾರರ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಿ ನೇಕಾರರ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿದೆ. ಹಾಗಾಗಿ ನೇಕಾರರು ಇದರ ಲಾಭವನ್ನು ಪಡೆದು ಸಮಾಜದ ಮುಖ್ಯವಾಹಿನಿಗೆ ಬಂದು ಕಾರ್ಯನಿರ್ವಹಿಸಬೇಕಾಗಿದೆ ಎಂದರು.

ಚೌಡೇಶ್ವರಿ ದೇವಿಯ ಬ್ರಹ್ಮರಥೋತ್ಸವದಲ್ಲಿ ನೆರೆದಿದ್ದ ಭಕ್ತ ಸಾಗರವನ್ನು ಕಂಡು ನನಗೆ ತುಂಬಾ ಸಂತೋಷವಾಯಿತು ಈ ರೀತಿ ನಮ್ಮ ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಹಾಗೂ ಚೌಡೇಶ್ವರಿ ದೇವಾಲಯದ ಅಭಿವೃದ್ಧಿಗಾಗಿ 15 ಲಕ್ಷ ರೂ. ಅನುದಾನ ಬಿಡುಗಡೆಯಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ದಾವಣಗೆರೆಯ ಶ್ರೀ ಗುರು ಮಾರ್ಕಂಡೇಶ್ವರ ಪದ್ಮಶಾಲಿ ಗುರುಮಠದ ಶ್ರೀ ಪ್ರಭುಲಿಂಗ ಸ್ವಾಮೀಜಿ, ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ, ನಗರ ಪಾಲಿಕೆ ಸದಸ್ಯೆ ಶೋಭಾ ಸುನಿಲ್, ಕನ್ನಡ ಹೋರಾಟಗಾರರಾದ ನಂಜುಂಡಸ್ವಾಮಿ, ನಗರ ಪಾಲಿಕೆ ಮಾಜಿ ಸದಸ್ಯ ಸುನಿಲ್, ಸಾಮಾಜಿಕ ಹೋರಾಟಗಾರ ಎಂ.ಎಸ್.ಸತ್ಯಾನಂದ ವಿಟ್ಟು ಸೇರಿದಂತೆ ಮೊದಲಾದವರು ಉಪಸ್ಥಿತರಿದ್ದರು.

ಒಕ್ಕಲಿಗರ, ವೀರಶೈವರ ದಶಕಗಳ ಬೇಡಿಕೆ ಈಡೇರಿಸಿದ್ದು ಬಿಜೆಪಿ ಸರ್ಕಾರ

ಪಕ್ಷದ ಮುಖಂಡ ಅರುಣ್ ಕುಮಾರ್‌ಗೌಡ

ಮೈಸೂರು, ಮಾ.26– ಒಕ್ಕಲಿಗರು ಮತ್ತು ವೀರಶೈವ ಸಮುದಾಯಗಳ ದಶಕಗಳ ಬೇಡಿಕೆಯನ್ನು ಬಿಜೆಪಿ ಸರ್ಕಾರ ಈಡೇರಿಸಿದ್ದು, ಇದಕ್ಕಾಗಿ ಬಿಜೆಪಿ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಅಭಿನಂದನೆ ಸಲ್ಲಿಸುವುದಾಗಿ ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಮುಖಂಡ ಅರುಣ್‌ಕುಮಾರ್‌ಗೌಡ ತಿಳಿಸಿದ್ದಾರೆ. ಒಕ್ಕಲಿಗ ಸಮುದಾಯಕ್ಕಿದ್ದ ಶೇ.4ರಷ್ಟು ಮೀಸಲಾತಿಯನ್ನು 6ಕ್ಕೆ ಏರಿಕೆ ಮಾಡಲಾಗಿದೆ. ಅಂತೆಯೆ ವೀರಶೈವ ಸಮುದಾಯಕ್ಕಿದ್ದ ಶೇ. 5ರಷ್ಟು ಮೀಸಲಾತಿಯನ್ನು 7ಕ್ಕೆ ಏರಿಕೆ ಮಾಡಲಾಗಿದೆ. ಇದು ಅತ್ಯಂತ ಗಂಭೀರವಾದ ವಿಚಾರ.



ಸರ್ಕಾರದ ಈ ನಿರ್ಧಾರದಿಂದ ಆ ಸಮುದಾಯಗಳ ಜನರಿಗೆ ಸರ್ವ ರೀತಿಯಲ್ಲೂ ಹೆಚ್ಚಿನ ಅವಕಾಶಗಳು ಒದಗಿ ಬರಲಿದೆ ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ. ಇನ್ನು ಪರಿಶಿಷ್ಟ ಜಾತಿಗಳಿಗೆ ಒಳ ಮೀಸಲಾತಿ ಜಾರಿ ಮಾಡಿರುವುದರಿಂದ ಸಾಮಾಜಿಕವಾಗಿ ಮುಂದೆ ಬರಲು ಅನುಕೂಲವಾಗಲಿದೆ. ಎಡಗೈಗೆ ಶೇ.6 ಬಲಗೈಗೆ ಶೇ.5.5, ಭೋವಿ, ಬಂಜಾರಕ್ಕೆ ಶೇ.4.5, ಅಲೆಮಾರಿ ಸಣ್ಣ ಸಮುದಾಯಗಳಿಗೆ ಶೇ.1 ಮೀಸಲಾತಿ ನೀಡಿರುವುದು ಬಿಜೆಪಿಗೆ ಜನರ ಬಗ್ಗೆ ಇರುವ ಬದ್ಧತೆ ಹಾಗೂ ಕಾಳಜಿಯನ್ನು ಎತ್ತಿ ತೋರುವಂತಿದೆ ಎಂದು ವ್ಯಾಖ್ಯಾನಿಸಿದ್ದಾರೆ. ಜಾತಿ ಹೆಸರಿನಲ್ಲಿ ರಾಜಕಾರಣ ಮಾಡುತ್ತಿದ್ದ ಜೆಡಿಎಸ್ ಹಾಗೂ ಕಾಂಗ್ರೆಸ್‌ನವರು ಅಧಿಕಾರದಲ್ಲಿದ್ದ ವೇಳೆ ಈ ಬಗ್ಗೆ ಎಂದಿಗೂ ಚಿಂತನೆ ಮಾಡಲಿಲ್ಲ. ಅಧಿಕಾರ ಕಳೆದುಕೊಂಡ ಬಳಿಕ ಇವರಿಗೆ ಇಲ್ಲಸಲ್ಲದ ಆಲೋಚನೆಗಳು ಬರುತ್ತಿವೆ. ಹಾಗಾಗಿ ಇಂತಹವರಿಂದ ಏನನ್ನು ತಾನೇ ನಿರೀಕ್ಷಿಸಲು ಸಾಧ್ಯ ಎಂದು ಪ್ರಶ್ನಿಸಿದ್ದಾರೆ. ರಾಜ್ಯ ಸರ್ಕಾರದ ಈ ದಿಟ್ಟ ನಿರ್ಧಾರ ಬಿಜೆಪಿಗೆ ಮತ್ತಷ್ಟು ಬಲ ತಂದುಕೊಡುವುದರ ಜತೆಗೆ ಮುಂದಿನ ದಿನಗಳಲ್ಲಿ ಅಧಿಕಾರ ಹಿಡಿಯಲು ಸಹಕಾರಿಯಾಗಲಿದೆ. ಅಲ್ಲದೆ ಇಂತಹ ನಿರ್ಧಾರಗಳನ್ನು ಬಿಜೆಪಿಯಿಂದ ಮಾತ್ರ ನಿರೀಕ್ಷಿಸಲು ಸಾಧ್ಯ ಎಂದು ತಿಳಿಸಿದ್ದಾರೆ.

ಪ್ರಶಸ್ತಿ, ಪುರಸ್ಕಾರಗಳ ಬಗ್ಗೆ ಅನುಮಾನದಿಂದ ನೋಡುವಂತಾಗಿದೆ

ಜೀವನದಿ ಕಾವೇರಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸಾಹಿತಿ ಬನ್ನೂರು ಕೆ.ರಾಜು ಬೇಸರ



ಮೈಸೂರು, ಮಾ.26(ಜಿಎ)– ಪ್ರಶಸ್ತಿ–ಪುರಸ್ಕಾರಗಳು, ಗೌರವ–ಸನ್ಮಾನಗಳು ಅನರ್ಹರ ಪಾಲಾಗಿ ಮೌಲ್ಯ ಕಳೆದುಕೊಳ್ಳುತ್ತಿರುವ ಇವತ್ತಿನ ಕಾಲಘಟ್ಟದಲ್ಲಿ ಇಂಥ ಪ್ರಶಸ್ತಿಗಳನ್ನು ಕೊಡುವವರನ್ನು ಹಾಗೂ ತೆಗೆದುಕೊಳ್ಳುವವರನ್ನು ಜನ ಅನುಮಾನದಿಂದಲೂ, ಗುಮಾನಿಯಿಂದಲೂ ನೋಡುವಂತಾಗಿದೆ ಎಂದು ಸಾಹಿತಿ ಬನ್ನೂರು ಕೆ.ರಾಜು ಬೇಸರ ವ್ಯಕ್ತಪಡಿಸಿದರು.

ನಗರದ ಕಾವೇರಿ ಬಳಗ ಮತ್ತು ಹಿರಣ್ಮಯಿ ಪ್ರತಿಷ್ಠಾನ ಸಂಯುಕ್ತವಾಗಿ ಅಗ್ರಹಾರದ ತ್ಯಾಗರಾಜ ರಸ್ತೆಯಲ್ಲಿರುವ ಅಕ್ಕನ ಬಳಗದಲ್ಲಿ ಕೊಡಗಿನ ಶ್ರೀಮತಿ ಗೌರು ಪೊನ್ನವ್ವ ನಂಬಿ ಯಪಂಡ ಅವರ ಸ್ಮರಣಾರ್ಥ ಏರ್ಪಡಿಸಿದ್ದ ಜೀವನದಿ ಕಾವೇರಿ ಪ್ರಶಸ್ತಿ ಪ್ರದಾನ ಸಮಾರಂಭನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕೊಡಗಿನ ಭಾಗಮಂಡಲದಲ್ಲಿ ಹುಟ್ಟಿ ತಾನು ಹರಿದ ನೆಲದಲ್ಲೆಲ್ಲಾ ಸಮೃದ್ಧಿಯನ್ನು ಸೃಷ್ಟಿಸಿ ಎಲ್ಲರ ಜೀವನವನ್ನು ಪಾವನಗೊಳಿಸಿರುವ ಕನ್ನಡ ನಾಡಿನ ಜೀವನದಿ ಕಾವೇರಿಯು ದೇವನದಿಯೂ ಆಗಿದ್ದು ಇಂತಹ ಭಾಗ್ಯನಿಧಿ ಕಾವೇರಿ ತಾಯಿಯ ಹೆಸರಿನಲ್ಲಿ ಜೀವನದಿ ಕಾವೇರಿ ಪ್ರಶಸ್ತಿಯನ್ನು ಸಾಧಕರಿಗೆ ನೀಡುತ್ತಿರುವುದು ನಿಜಕ್ಕೂ ಸಾರ್ಥಕ ಕಾರ್ಯ ಎಂದರು.


ಎರಡು ಕಾರಣಕ್ಕೆ ಈ ಪ್ರಶಸ್ತಿಯು ಅತ್ಯಂತ ಮೌಲ್ಯವಾದದ್ದಾಗಿದೆ. ಮೊದಲ ಕಾರಣ ಸರ್ಕಾರದಿಂದಾಗಲಿ, ಖಾಸಗಿಯವರಿಂದಾಗಲಿ ಒಂದು ನಯಾ ಪೈಸೆಯನ್ನೂ ಪಡೆಯದೆ ಓರ್ವ ನಿವೃತ್ತ ಶಿಕ್ಷಕಿಯಾಗಿ ತಮಗೆ ಬರುತ್ತಿರುವ ನಿವೃತ್ತಿ ವೇತನದಿಂದಲೇ ಪ್ರತೀವರ್ಷ ಎನ್.ಕೆ.ಕಾವೇರಿಯಮ್ಮನವರು ತಾವು ಕಾವೇರಿ ನೀರು ಕುಡಿದು, ಬೆಳೆದು ಬದುಕನ್ನು ರೂಪಿಸಿಕೊಂಡಿರುವ ಅಮೃತಮಯಿ ತಾಯಿ ಕಾವೇರಿಯ ಋಣ ಪ್ರಜ್ಞೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಅಲ್ಪವಾದರೂ ತಾಯಿ ಋಣ ತೀರಿಸುವ ಶ್ರೇಷ್ಠ ಕಾರ್ಯ ಮಾಡುತ್ತಿರುವುದು. ಮತ್ತೊಂದು ಇಂತಹ ಶ್ರೇಷ್ಠ ಪ್ರಶಸ್ತಿಯನ್ನು ಎಲೆಮರೆಯ ಕಾಯಿಯಂತೆ ತಮ್ಮ ಪಾಡಿಗೆ ತಾವು ಸೇವೆ ಸಲ್ಲಿಸುತ್ತಿರುವ ಅಷ್ಟೇ ಶ್ರೇಷ್ಠರೆನಿಸಿದ ನೈಜ ಸಾಧಕರನ್ನು ಹುಡುಕಿ ಗೌರವಿಸುತ್ತಿರುವುದು. ಪ್ರಶಸ್ತಿಗಳನ್ನು ಕೊಡುವುದು ಮುಖ್ಯವಲ್ಲ, ತೆಗೆದುಕೊಳ್ಳುವುದು ಮುಖ್ಯವಲ್ಲ. ಇವೆರಡರ ಮಧ್ಯೆ ಮೌಲ್ಯವನ್ನು ಉಳಿಸಿಕೊಂಡು ಹೋಗುವುದು ಬಹಳ ಮುಖ್ಯ ಎಂದು ತಿಳಿಸಿದರು.


ಸಾಧಕರಾದ ಹರೀನಹಳ್ಳಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ವಿ.ಎನ್. ಉಮೇಶ್ವರಿ, ಹರವೆ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ದೈಹಿಕ ಶಿಕ್ಷಣ ಶಿಕ್ಷಕಿ ಕರವಟ್ಟಿರ ಗಂಗಮ್ಮ, ಅಸ್ವಾಳು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ಎಸ್. ಬಿ. ಚಿಕ್ಕದೇವಿ, ಬಲ್ಲಾಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಕೆ.ಎಸ್.ಗಿರೀಶ್, ವಾಹನ ಚಾಲಕ ಟಿ.ಮೋಹನ್ ಕುಮಾರ್, ಸಮಾಜ ಸೇವಾಕರ್ತೆ ಮಾಲಿನಿ ಆರ್. ಪಾಲಾಕ್ಷ ಹಾಗೂ ಶುಶ್ರೂಷಕಿ ಜಯಂತಿ ಬಾಲ ಸುಬ್ರಹ್ಮಣ್ಯ ಅವರುಗಳಿಗೆ ಖ್ಯಾತ ಕಲಾವಿದೆ ಮತ್ತು ಲೇಖಕಿ ಡಾ. ಜಮುನಾ ರಾಣಿ ಮಿರ್ಲೆ ಅವರು 'ಜೀವನದಿ ಕಾವೇರಿ ಪ್ರಶಸ್ತಿ' ಯನ್ನು ಪ್ರದಾನ ಮಾಡಿದರು.

ಕಾರ್ಯಕ್ರಮದಲ್ಲಿ ಕಾವೇರಿ ಬಳಗದ ಅಧ್ಯಕ್ಷೆ ಎನ್.ಕೆ. ಕಾವೇರಿಯಮ್ಮ, ಹಿರಣ್ಮಯಿ ಪ್ರತಿಷ್ಠಾನದ ಅಧ್ಯಕ್ಷ ಎ.ಸಂಗಪ್ಪ, ವಿಶ್ರಾಂತ ಶಿಕ್ಷಕ ಎಚ್. ವಿ. ಮುರಳಿಧರ, ಶಿಕ್ಷಕಿಯರಾದ ಫಾತಿಮಾ, ಎನ್.ಅನುಪಮಾ, ಚಿತ್ರಕಲಾ ಶಿಕ್ಷಕ ಮನೋಹರ್, ವಿಶ್ರಾಂತ ಇಂಜಿನಿಯರ್ ಮನುಗನಹಳ್ಳಿ ಎಸ್.ಗೋವಿಂದೇಗೌಡ ಮುಂತಾದವರು ಉಪಸ್ಥಿತರಿದ್ದರು.

ಹಾಸನ ಜಿಲ್ಲೆಯ ಹುಟ್ಟೂರಲ್ಲಿ ಎಲ್.ಎಲ್.ಭೈರಪ್ಪರ ಸಾಂಸ್ಕೃತಿಕ ಕೇಂದ್ರ

ಪದ್ಮಭೂಷಣ ಡಾ.ಎಸ್.ಎಲ್.ಭೈರಪ್ಪ ಅವರ ಗೌರವಾರ್ಥ ಕಲೆ-ಸಂಸ್ಕೃತಿಯ ಶ್ರೇಷ್ಠತಾ ಕೇಂದ್ರಕ್ಕೆ ಶಂಕುಸ್ಥಾಪನೆ





ಖ್ಯಾತ ಕಾದಂಬರಿಕಾರ ಎಸ್.ಎಲ್.ಭೈರಪ್ಪ ಅವರ ಹುಟ್ಟೂರು ಹಾಸನ ಜಿಲ್ಲೆಯ ಸಂತೆಶಿವರ ಗ್ರಾಮದಲ್ಲಿ ಭಾನುವಾರ ಎಸ್.ಎಲ್.ಭೈರಪ್ಪ ಅವರ ಗೌರವಾರ್ಥ ನಿರ್ಮಾಣಗೊಳ್ಳಲಿರುವ ಕಲೆ ಮತ್ತು ಸಂಸ್ಕೃತಿಯ ಶ್ರೇಷ್ಠತಾ ಕೇಂದ್ರಕ್ಕೆ ಶ್ರವಣಬೆಳಗೊಳ (ಚನ್ನರಾಯಪಟ್ಟಣ) ಶಾಸಕ ಸಿ.ಎನ್.ಬಾಲಕೃಷ್ಣ ಶಂಕುಸ್ಥಾಪನೆ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಚಿತ್ರದಲ್ಲಿ ಎಸ್.ಎಲ್.ಭೈರಪ್ಪ, ಹಾಸನ ಜಿಲ್ಲಾಧಿಕಾರಿ ಎಂ.ಎಸ್.ಅರ್ಚನಾ ಸೇರಿದಂತೆ ಮತ್ತಿತರರಿದ್ದರು. ಕಲಾವಿದರ ಕಲ್ಪನೆಯಲ್ಲಿ ಮೂಡಿಬಂದಿರುವ ಎಸ್.ಎಲ್.ಭೈರಪ್ಪ ಕಲೆ ಮತ್ತು ಸಂಸ್ಕೃತಿ ಕೇಂದ್ರದ ನೀಲನಕ್ಷೆಯನ್ನು ಬಲಚಿತ್ರದಲ್ಲಿ ಕಾಣಬಹುದು.

ಮೈಸೂರು,ಮಾ.26(ಬಿಸಿಟಿ/ಪಿಎಂ)– ಪದ್ಮಭೂಷಣ ಖ್ಯಾತ ಕಾದಂಬರಿಕಾರ ಎಸ್.ಎಲ್.ಭೈರಪ್ಪ ಅವರ ಗೌರವಾರ್ಥ ಕಲೆ ಮತ್ತು ಸಂಸ್ಕೃತಿಯ ಶ್ರೇಷ್ಠತಾ ಕೇಂದ್ರಕ್ಕೆ ಭಾನುವಾರ ಬೆಳಗ್ಗೆ ಹಾಸನ ಜಿಲ್ಲೆಯ ಸಂತೆಶಿವರ ಗ್ರಾಮದಲ್ಲಿ ಶಂಕುಸ್ಥಾಪನೆ ನೆರವೇರಿಸಲಾಯಿತು. ಆ ಮೂಲಕ ಕನ್ನಡ ಖ್ಯಾತ ಕಾದಂಬರಿಕಾರ ಡಾ.ಸಂತೇಶಿವರ ಲಿಂಗಣ್ಣಯ್ಯ ಭೈರಪ್ಪ (ಡಾ.ಎಸ್.ಎಲ್.ಭೈರಪ್ಪ) ಅವರ ಹುಟ್ಟೂರಲ್ಲಿ ಅವರ ಹೆಸರಿನ ಶ್ರೇಷ್ಠತಾ ಕೇಂದ್ರಕ್ಕೆ ಮುನ್ನುಡಿ ಬರೆಯಲಾಯಿತು.

ಡಾ.ಎಸ್.ಎಲ್.ಭೈರಪ್ಪ ಅವರ ಸಮ್ಮುಖದಲ್ಲಿ ಶಾಸಕ ಸಿ.ಎನ್.ಬಾಲಕೃಷ್ಣ, ಜಿಲ್ಲಾಧಿಕಾರಿ ಎಂ.ಎಸ್.ಅರ್ಚನಾ ಸೇರಿದಂತೆ ಮತ್ತಿತರ ಗಣ್ಯರು ಶಂಕುಸ್ಥಾಪನೆ ನೆರವೇರಿಸಿದರು. 2020–2021ರ ಬಜೆಟ್‌ನಲ್ಲಿ ಅಂದಿನ ಮುಖ್ಯ ಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಚನ್ನರಾಯಪಟ್ಟಣ ತಾಲೂಕಿನ ಸಂತೆಶಿವರ ಗ್ರಾಮದಲ್ಲಿ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯ ಪ್ರಸಾರಕ್ಕಾಗಿ ಶ್ರೇಷ್ಠತಾ ಕೇಂದ್ರ ಸ್ಥಾಪನೆಗೆ 5 ಕೋಟಿ ರೂ. ಘೋಷಣೆ ಮಾಡಿದ್ದರು.

ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಮಾತನಾಡಿದ ಎಸ್.ಎಲ್.ಭೈರಪ್ಪ ಅವರು, ತಮ್ಮ ಕೊಡುಗೆಗಳನ್ನು ಕರ್ನಾಟಕ ಸರ್ಕಾರ ಗುರುತಿಸಿರುವುದಕ್ಕೆ ಸಂತಸ ಉಂಟಾಗಿದೆ ಎಂದರಲ್ಲದೆ, ಗ್ರಾಮೀಣ ಜನತೆಯಲ್ಲಿ ಶಾಸ್ತ್ರೀಯ ಕಲೆ ಮತ್ತು ಸಾಹಿತ್ಯವನ್ನು ಉತ್ತೇಜಿಸುವ ನಿಟ್ಟಿನಲ್ಲಿ ಈ ಕೇಂದ್ರ ನಿರ್ಮಿಸುತ್ತಿರುವುದಕ್ಕೆ ಹರ್ಷ ವ್ಯಕ್ತಪಡಿಸಿದರು.

ಕೋವಿಡ್ ಮತ್ತು ಇತರ ಕಾರಣಗಳಿಂದ ಸದರಿ ಯೋಜನೆ ವಿಳಂಬವಾದರೂ ಸರ್ಕಾರ ಇದೀಗ ಹಣ ಬಿಡುಗಡೆ ಮಾಡಿರುವುದು ನನಗೆ ಖುಷಿ ತಂದಿದೆ. ಹುಟ್ಟೂರು ನನಗೆ ಎಂದಿಗೂ ಭಾವನಾತ್ಮಕವಾದ ರೋಮಾಂಚನ ನೀಡುತ್ತದೆ. ಇತ್ತೀಚೆಗೆ ನನಗೆ ಪದ್ಮಭೂಷಣ ಲಭಿಸಿರುವುದು ಕೊಂಚ ತೃಪ್ತಿ ತಂದಿದ್ದರೂ, ನನ್ನ ಜನ್ಮಸ್ಥಳದಿಂದ ಸಿಗುವ ಗೌರವಕ್ಕೆ ಸರಿಸಾಟಿ ಇಲ್ಲ. ನನ್ನ ಹುಟ್ಟೂರಿನ ಜನತೆ ನನಗೆ ಪ್ರೀತಿ, ವಾತ್ಸಲ್ಯವನ್ನು ಧಾರೆಯೆರೆದಿದ್ದಾರೆ ಎಂದು ಭಾವುಕರಾದರು.

ಇದೇ ಸಂದರ್ಭದಲ್ಲಿ ಜಾಬಘಟ್ಟ ಗ್ರಾಮದ ಬಳಿ ಇರುವ ನಾಗಮಂಗಲ ಶಾಖಾ ಕಾಲುವೆಯಿಂದ ಸಂತೆಶಿವರ ಕೆರೆ, ಅಗ್ರಹಾರ ಬೆಳಗುಲಿ ಊರ ಮುಂದಿನಕೆರೆ ಮತ್ತು ಅಗ್ರಹಾರ ಬೆಳಗುಲಿ ಹೊನ್ನನ ಕೆರೆಗೆ 67.16 ಟಿಎಂಸಿಎಫ್‌ಟಿ (ಸಾವಿರ ಮಿಲಿಯನ್ ಘನ ಅಡಿ) ನೀರು ತುಂಬಿಸಲು ಏತ ನೀರಾವರಿ ಯೋಜನೆಗೆ ಚಾಲನೆ ನೀಡಲಾಯಿತು. ಈ ಯೋಜನೆಯಿಂದ ಡಾ.ಭೈರಪ್ಪ ಅವರ ಹುಟ್ಟೂರು ಸೇರಿದಂತೆ 14 ಗ್ರಾಮಗಳಿಗೆ ಅನುಕೂಲವಾಗಲಿದೆ.

ಹಾಸನ ಜಿಲ್ಲಾಧಿಕಾರಿ ಎಂ.ಎಸ್. ಅರ್ಚನಾ ಮಾತನಾಡಿ, ಮೈಸೂರಿಗೆ ಹಾಸನ ಹತ್ತಿರವಾಗಿದ್ದರೂ ಪ್ರಾಮುಖ್ಯತೆ ಪಡೆದಿಲ್ಲ. ಡಾ.ಭೈರಪ್ಪ ಅವರ ಗೌರವಾರ್ಥ ಕಲೆ ಮತ್ತು ಸಂಸ್ಕೃತಿಯ ಶ್ರೇಷ್ಠತೆ ಕೇಂದ್ರದ ಮೂಲಕ ಇಡೀ ಹಾಸನಕ್ಕೆ ಹೆಚ್ಚಿನ ಅನುಕೂಲವಾಗುವಂತೆ ಸಾಂಸ್ಕೃತಿಕ ಚಟುವಟಿಕೆಗಳನ್ನು ಹೆಚ್ಚಿಸಲಾಗುವುದು ಎಂದು ಹೇಳಿದರು.

ವಿನ್ಯಾಸ ಸಿದ್ಧ: ಬಜೆಟ್ ಘೋಷಣೆಯ ನಂತರ ಉದ್ದೇಶಿತ ಕೇಂದ್ರದ ಸಂಬಂಧ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಿ ಪ್ರಸ್ತಾವನೆಯನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸಲಾಗಿದೆ. 2022–23ರ ಬಜೆಟ್‌ನಲ್ಲಿ ಯೋಜನೆಗೆ 1 ಕೋಟಿ ರೂ. ಮಂಜೂರು ಮಾಡಿ ಬಿಡುಗಡೆ ಮಾಡಲಾಗಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಶ್ರೇಷ್ಠತಾ ಕೇಂದ್ರದ ಯೋಜನೆಯನ್ನು ಕಾರ್ಯಗತಗೊಳಿಸುತ್ತಿದ್ದು, ಹಾಸನ ನಿರ್ಮಿತಿ ಕೇಂದ್ರವು ಶ್ರೇಷ್ಠತಾ ಕೇಂದ್ರದ ನಿರ್ಮಾಣ ಕಾರ್ಯ ಕೈಗೆತ್ತಿಕೊಳ್ಳಲಿದೆ. ಕೇಂದ್ರವು ಸರ್ಕಾರದ ಮಾರ್ಗಸೂಚಿಗಳ ಪ್ರಕಾರ ನಿರ್ಮಾಣಗೊಳ್ಳಲಿದೆ. ಜೊತೆಗೆ 'ಗೌರಮ್ಮ ಸ್ಮಾರಕ ಟ್ರಸ್ಟ್'ನಿಂದ ವಾಸ್ತುಶಿಲ್ಪ ಮತ್ತು ತಾತ್ಕಾಲಿಕ ವಿನ್ಯಾಸ ಸಿದ್ಧಪಡಿಸಲಾಗಿದೆ.

ಸಂತೆಶಿವರದ ಗೌರಮ್ಮ ಟ್ರಸ್ಟ್ ಮತ್ತು ಮೈಸೂರಿನ ಎಸ್.ಎಲ್.ಭೈರಪ್ಪ ಸಾಹಿತ್ಯ ಪ್ರತಿಷ್ಠಾನವು ಯೋಜನೆ ಪರಿಕಲ್ಪನೆ ಮತ್ತು ವಿನ್ಯಾಸದಲ್ಲಿ ಸಂಘಟಿತ ಪ್ರಯತ್ನ ನಡೆಸಿತು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಇದೇ ವೇಳೆ ಮೆಚ್ಚುಗೆ ವ್ಯಕ್ತಪಡಿಸಿದರು.

ಎಸ್.ಎಲ್.ಭೈರಪ್ಪ ಸಾಹಿತ್ಯ ಪ್ರತಿಷ್ಠಾನದ ಕಾರ್ಯದರ್ಶಿ ಪ್ರೊ.ಜಿ.ಎಲ್.ಶೇಖರ್ ಮಾತನಾಡಿ, ಪ್ರಸ್ತಾಪಿತ ಕೇಂದ್ರವು ಸಂಶೋಧನೆ ಮತ್ತು ಬರವಣಿಗೆಯ ಮೂಲಕ ಜ್ಞಾನದ ಅನ್ವೇಷಣೆಯಲ್ಲಿ ಆಸಕ್ತಿ ಹೊಂದಿದವರಿಗೆ ಉತ್ತೇಜಿತ ತಾಣವಾಗಲಿದೆ. ಓದಲು, ಸಂಶೋಧನೆಯಲ್ಲಿ ತೊಡಗುವ ಮೂಲಕ ಕಲಿಕೆಯ ಕೇಂದ್ರವಾಗಲಿದೆ. ಮೈಸೂರು ಮೂಲದ ಖ್ಯಾತ ಇಂಜಿನಿಯರ್ ಮತ್ತು ವಾಸ್ತುಶಿಲ್ಪಿ ಎಂ.ಎಸ್.ವಿಜಯಶಂಕರ್ ಅವರು ಕಟ್ಟಡದ ವಿನ್ಯಾಸ ಮಾಡಿದ್ದಾರೆ ಎಂದು ತಿಳಿಸಿದರು.

ಪ್ರಸ್ತಾಪಿತ ಕೇಂದ್ರವು ವಿವಿಧ ಮೂಲಸೌಕರ್ಯಗಳನ್ನು ಹೊಂದಿರಲಿದೆ. ಸಮ್ಮೇಳನ ಸಭಾಂಗಣ, ಗ್ರಂಥಾಲಯ ಮತ್ತು ಸಂಪನ್ಮೂಲ ಕೇಂದ್ರ, ತರಗತಿ ಕೊಠಡಿಗಳು ಮತ್ತು ಗ್ಯಾಲರಿಯಂತಹ ಸೌಲಭ್ಯಗಳನ್ನು ಹೊಂದಿರಲಿದೆ. ಆನ್‌ಲೈನ್ ಶಿಕ್ಷಣಕ್ಕಾಗಿ ಸ್ಟುಡಿಯೋ ಮತ್ತು ಟ್ರಾನ್ಸ್‌ಮಿಷನ್ ಹಬ್ ಅನ್ನು ಒದಗಿಸಲು ಸಹ ಯೋಜನೆ ರೂಪಿಸಲಾಗಿದೆ. ಸಂತೆಶಿವರ ಗ್ರಾಮ ಮತ್ತು ಸುತ್ತಮುತ್ತಲಿನ ಬಡವರು ಮತ್ತು ಹಿಂದುಳಿದವರಿಗೆ ಕನ್ನಡ ಕಲಿಸುವುದು ಆದ್ಯತೆಯ ಕಾರ್ಯಸೂಚಿಯಾಗಿದೆ ಎಂದು ತಿಳಿಸಿದರು.

ಸಂಶೋಧಕರಿಗೆ ಅತಿಥಿ ಕೊಠಡಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೂಲಗಳ ಪ್ರಕಾರ, ಉದ್ದೇಶಿತ ಕೇಂದ್ರದಲ್ಲಿ ಭೈರಪ್ಪ ಅವರ ಎಲ್ಲಾ ಕೃತಿಗಳು, ಬರಹಗಳು ಮತ್ತು ಪುಸ್ತಕಗಳನ್ನು ಪ್ರದರ್ಶಿಸಲು ಗ್ಯಾಲರಿ ಇರಲಿದೆ. ಇದರ ಹೊರತಾಗಿ ಪ್ರಸಿದ್ಧ ಲೇಖಕರ ಕೃತಿಗಳು ಹಾಗೂ ಅವುಗಳನ್ನು ಆಧರಿಸಿದ ಚಲನಚಿತ್ರ ಪ್ರದರ್ಶನ ಇರಲಿದ್ದು, ಜೊತೆಗೆ ಪ್ರಸಿದ್ಧ ಲೇಖಕರ ಕುರಿತು ಸಾಕ್ಷ್ಯಚಿತ್ರಗಳು ಪ್ರದರ್ಶನಕ್ಕೆ ವ್ಯವಸ್ಥೆ ಇರಲಿದೆ. ಭೈರಪ್ಪರ ಕೃತಿಗಳ ಕುರಿತು ಸಂಶೋಧನೆ ಮಾಡಲು ಬಯಸುವವರಿಗೆ ಕೇಂದ್ರದಲ್ಲಿ ನಾಲ್ಕು ಅತಿಥಿ ಕೊಠಡಿಗಳ ವ್ಯವಸ್ಥೆ ಕಲ್ಪಿಸಲಾಗುತ್ತಿದೆ.

ಕೇಂದ್ರದ ನಿರ್ಮಾಣ ಪ್ರದೇಶವು **120x90** ಅಡಿ ಇರಲಿದ್ದು, ನೆಲದ ಜೊತೆಗೆ ಎರಡು ಮಹಡಿಗಳನ್ನು ಹೊಂದಿರಲಿದೆ. ಪ್ರಸ್ತಾಪಿತ ಕೇಂದ್ರಕ್ಕೆ ಸ್ವತಃ ಭೈರಪ್ಪನವರೇ ಹೆಚ್ಚಿನ ಭೂಮಿ ನೀಡಿದ್ದು, ಅದೇ ಗ್ರಾಮದ ಗಂಗೇಗೌಡ ಅವರು ಸ್ವಲ್ಪ ಭೂಮಿ ದಾನ ಮಾಡಿದ್ದಾರೆ.

ಮುಸ್ಲಿಮರಿಗೆ ಮೀಸಲಾತಿ ರದ್ದು ವಿರೋಧಿಸಿ ಎಸ್‌ಡಿಪಿಐ ಪ್ರತಿಭಟನೆ



ಮೈಸೂರು, ಮಾ.26(ಜಿಎ)–ಮುಸ್ಲಿಮರಿಗೆ ನೀಡಬೇಕಾದ ಮೀಸಲಾತಿಯನ್ನು ಕಿತ್ತು, ಬೇರೆ ಅವರಿಗೆ ನೀಡುವ ಮೂಲಕ ಮುಸ್ಲಿಮರನ್ನು ಅಭಿವೃದ್ಧಿಯಿಂದ ವಂಚಿತರಾಗುವಂತೆ ಮಾಡಲಾಗಿದೆ. ಇದರಿಂದ ರಾಜ್ಯ ಉದ್ಧಾರವಾಗುತ್ತಾ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಪ್ರಶ್ನಿಸಿದ್ದಾರೆ.

ಮುಸ್ಲಿಮರ ಮೀಸಲಾತಿ ರದ್ದುಪಡಿಸಿರುವುದು ಖಂಡಿಸಿ ಎಸ್‌ಡಿಪಿಐ ಕಾರ್ಯಕರ್ತರು ನಗರದ ಸಂತ ಫಿಲೋಮಿನ ಚರ್ಚ್ ವೃತ್ತದ ಮುಂಭಾಗ ಪ್ರತಿಭಟನೆ ನಡೆಸಿ, ರಾಜ್ಯ ಸರ್ಕಾರದ ವಿರುದ್ಧ ವಿವಿಧ ಘೋಷಣೆಗಳನ್ನು ಕೂಗಿದರು.

ಈ ವೇಳೆ ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಮಾತನಾಡಿ, ಬಸವಣ್ಣನ ಅನುಯಾಯಿಯಾಗಿರುವ ಬಸವರಾಜ ಬೊಮ್ಮಾಯಿ ಅವರು ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕವಾಗಿ ಹಿಂದುಳಿದಿರುವ ಮುಸ್ಲಿಂ ಸಮುದಾಯದ ಯುವಕರಿಗೆ ಶಿಕ್ಷಣ, ಉದ್ಯೋಗ ನೀಡಬೇಕಾಗಿತ್ತು. ಆದರೆ, ಅವರು ಕಳೆದ 30 ವರ್ಷಗಳಿಂದ ನೀಡುತ್ತಾ ಬಂದಿರುವ ಶೇ.4 ರಷ್ಟು ಮೀಸಲಾತಿಯನ್ನು ರದ್ದುಗೊಳಿಸಿ ಅದನ್ನು ಬೇರೆ ಸಮುದಾಯಕ್ಕೆ ನೀಡುತ್ತಿದ್ದಾರೆ. ಒಂದು ಕೋಟಿಗೂ ಅಧಿಕ ಜನಸಂಖ್ಯೆ ಇರುವ ಮುಸ್ಲಿಂಮರಿಗೆ ಇಂತಹ ಘೋರ ಅನ್ಯಾಯ ಮಾಡಿದ್ದೀರಾ, ಇದನ್ನು ಇತಿಹಾಸ ಎಂದಿಗೂ ಕ್ಷಮಿಸುವುದಿಲ್ಲ ಎಂದರು.

ಇತ್ತೀಚಿನ ದಿನಗಳಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಎಂದರೆ ಏನು ಎಂಬುದು ತಿಳಿಯುತ್ತಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆಡಳಿತ ಮಾಡುವವರು ರಾಜ್ಯ, ದೇಶದಲ್ಲಿರುವ ಎಲ್ಲಾ ಸಮುದಾಯಗಳನ್ನು ಉತ್ತಮ ಸ್ಥಾನಕ್ಕೆ ಕೊಂಡೊಯ್ಯುವ ಕೆಲಸ ಮಾಡಿ, ಸಕಲ ಸೌಲಭ್ಯ ನೀಡಬೇಕು. ಇದರಿಂದ ಮಾತ್ರ ದೇಶ ಉದ್ಧಾರವಾಗುತ್ತದೆ. ಮುಸ್ಲಿಂರನ್ನು ಅಭಿವೃದ್ಧಿಯಿಂದ ವಂಚಿತರಾಗುವಂತೆ ಮಾಡಿದ್ದೆ, ಈ ರಾಜ್ಯ ಉದ್ಧಾರವಾಗುತ್ತಾ? ಎಂದು ಬಸವರಾಜ ಬೊಮ್ಮಾಯಿ ವಿರುದ್ಧ ವಾಗ್ದಾಳಿ ನಡೆಸಿದರು.

ಈ ಚುನಾವಣೆಯ ಸಂದರ್ಭದಲ್ಲಿ ತಮಗೆ ಈ ರೀತಿ ಆಲೋಚನೆ ಏಕೆ ಬಂತು. ನಾವು ಯಾರಿಗೂ ಮೀಸಲಾತಿ ನೀಡಬೇಡಿ ಎಂದು ಹೇಳುವುದಿಲ್ಲ. ನಾವು ಅಂತಹ ಕಠೋರ ಹೃದಯಿಗಳಲ್ಲ ಆದರೆ, ನಮ್ಮಿಂದ ಕಿತ್ತು ಬೇರೆ ಅವರಿಗೆ ಮೀಸಲಾತಿ ನೀಡುವ ಘೋರ ಕೆಲಸವನ್ನು ಮಾಡಿದ್ದಾರೆ. ಮೀಸಲಾತಿ ಮೂಲಕ ಎಲ್ಲರಿಗೂ ಸಮಸಮಾಜ ನಿರ್ಮಾಣವಾಗಬೇಕು ಎಂದು ಸಂವಿಧಾನದಲ್ಲಿ ಬಹಳ ಸ್ಪಷ್ಟವಾಗಿ ಹೇಳಿದೆ. ಯಾವ ಸಮುದಾಯಗಳು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದಿವೆಯೋ ಅಂತಹ ಸಮುದಾಯಕ್ಕೆ ಮೀಸಲಾತಿ ನೀಡಬೇಕೆಂದು ತಿಳಿಸಿದೆ ಎಂದರು.

ಪ್ರತಿಭಟನೆಯಲ್ಲಿ ಎಸ್‌ಡಿಪಿಐನ ಜಿಲ್ಲಾ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಭಾಗಿಯಾಗಿದ್ದರು.

ಏ.5ರಿಂದ ಚಿತ್ರಕಲಾ ಶಿಬಿರ

ಮೈಸೂರು,ಮಾ.26–ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ಚಿತ್ರಕಲಾ ಶಿಬಿರವನ್ನು ಏ.5ರಿಂದ 26ರವರೆಗೆ, ಡಾ.ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತದಲ್ಲಿರುವ ಜೆಎಸ್‌ಎಸ್ ಬಾಲಜಗತ್‌ನಲ್ಲಿ ಏರ್ಪಡಿಸಲಾಗಿದೆ. ಶಿಬಿರವು ಬೆಳಗ್ಗೆ 9ರಿಂದ ಮಧ್ಯಾಹ್ನ 1ರ ತನಕ ಮೂರು ವಿಭಾಗಗಳಲ್ಲಿ ನಡೆಯಲಿದ್ದು, 6ರಿಂದ 9 ವರ್ಷ, 10ರಿಂದ 13 ವರ್ಷ ಮತ್ತು 14ರಿಂದ 16 ವರ್ಷದ ಮಕ್ಕಳಿಗೆ ಪ್ರತ್ಯೇಕ ಗುಂಪುಗಳಲ್ಲಿ ತರಬೇತಿ ನೀಡಲಾಗುವುದು. ಅರ್ಜಿ ಸಲ್ಲಿಸಲು ಕೊನೆಯ ದಿನ 4.4.2023. ವಿವರಗಳಿಗೆ ಜೆಎಸ್‌ಎಸ್ ಬಾಲಜಗತ್ ಶಾಲೆಯ ಮುಖ್ಯೋಪಾಧ್ಯಾಯಿನಿಯವಾದ ಹೆಚ್.ಜಿ.ಮಂಜುಳ (ದೂರವಾಣಿ: 2441370 / 9686677503), ಸಂಚಾಲಕರಾದ ಎಸ್.ಎಂ.ಜಂಬುಕೇಶ್ವರ (98866 23490), ಎನ್.ಬಿ.ಪಲ್ಲೇದ (99022 74832) ಮತ್ತು ಪಿ.ಎಸ್.ಸಲಬಣ್ಣವರನ್ನು (8095440122) ಸಂಪರ್ಕಿಸಬಹುದು.

ಬಿಜೆಪಿ ಹಿಂದುಳಿದ ವರ್ಗ ಮೋರ್ಚಾ ಸಮಾವೇಶ

ಎನ್.ಆರ್.ಕ್ಷೇತ್ರದ ಅಭಿವೃದ್ಧಿಗೆ ಬಿಜೆಪಿ ಶಾಸಕನ ಆಯ್ಕೆಯೇ ಮದ್ದು



ಮೈಸೂರು, ಮಾ.26(ಎಸ್‌ಪಿಎನ್)– ಮೈಸೂರು ನಗರದ ಕೃಷ್ಣರಾಜ, ಚಾಮರಾಜ ವಿಧಾನಸಭಾ ಕ್ಷೇತ್ರಗಳ ಅಭಿವೃದ್ಧಿ ಪರ್ವ ನಾಗಾಲೋಟದಲ್ಲಿದೆ. ಆದರೆ, ಪಕ್ಕದ ನರಸಿಂಹರಾಜ ಕ್ಷೇತ್ರ ಹಲವು ವರ್ಷಗಳಿಂದ ಅಭಿವೃದ್ಧಿಯಿಂದ ವಂಚಿತವಾಗಿದೆ. ಈ ಕ್ಷೇತ್ರವೂ ಅಭಿವೃದ್ಧಿ ಹೊಂದಬೇಕಾದರೆ, ಬಿಜೆಪಿ ಅಭ್ಯರ್ಥಿ ಈ ಬಾರಿ ಶಾಸಕರಾಗಿ ಆಯ್ಕೆಯಾಗಲು ಇಲ್ಲಿನ ಪ್ರಜ್ಞಾವಂತ ಮತದಾರರು ಸಂಕಲ್ಪ ತೊಡಬೇಕು ಎಂದು ಸಂಸದ ಪ್ರತಾಪ್ ಸಿಂಹ, ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ ಕರೆ ನೀಡಿದರು.

ಮೈಸೂರು ಗಾಯತ್ರಿಪುರಂನಲ್ಲಿ ಬಿಜೆಪಿ ಜಿಲ್ಲಾ ಒಬಿಸಿ ಮೋರ್ಚಾ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಸಂಸದ ಪ್ರತಾಪ್ ಸಿಂಹ, ಕಳೆದೆರಡು ದಿನಗಳ ಹಿಂದೆ ಬೊಮ್ಮಾಯಿ ನೇತೃತ್ವದ ಬಿಜೆಪಿ ಮೀಸಲಾತಿ ವಿಚಾರದಲ್ಲಿ ಕ್ರಾಂತಿಕಾರಕ ನಿರ್ಧಾರ ಪ್ರಕಟಿಸಿದೆ. ಅನುಸೂಚಿತ ಜಾತಿಗೆ ಶೇ.15ರಿಂದ 17ಕ್ಕೆ, ಅನುಸೂಚಿತ ಪಂಗಡಕ್ಕೆ ಶೇ.3ರಿಂದ 7ಕ್ಕೆ ಏರಿಸಲಾಗಿತ್ತು ಇದರಲ್ಲಿ ಎಸ್ಸಿ ಸಮುದಾಯದ ಹಲವು ವರ್ಷಗಳ ಬೇಡಿಕೆಯಾದ ಒಳ ಮಿಸಲಾತಿ ನೀಡಿ, ರಾಜ್ಯ ಸರ್ಕಾರ ಕ್ರಾಂತಿಕಾರಕ ನಿರ್ಧಾರ ಪ್ರಕಟಿಸಿದೆ. ಇದರ ಜೊತೆಗೆ ಲಿಂಗಾಯತ ಸಮುದಾಯಕ್ಕೆ ಶೇ.7ರಷ್ಟು, ಒಕ್ಕಲಿಗ ಸಮುದಾಯಕ್ಕೆ ಶೇ.6 ರಷ್ಟು ಹೆಚ್ಚಿಸಿದ್ದು, ಆಯಾಯ ಸಮುದಾಯಗಳ ಅಭಿವೃದ್ಧಿಗೆ ಪೂರಕವಾಗಿ ನಿರ್ಧಾರವನ್ನು ಬಿಜೆಪಿ ಸರ್ಕಾರ ಕೈಗೊಂಡಿದೆ ಎಂದರು.

ಮೈಸೂರು ನಗರದಲ್ಲಿ ಕೃಷ್ಣರಾಜ, ಚಾಮರಾಜ ಕ್ಷೇತ್ರಗಳು, ಹಲವು ವರ್ಷಗಳಿಂದ ಅಭಿವೃದ್ಧಿ ಹೊಂದುತ್ತಿವೆ. ಆದರೆ, ಎನ್.ಆರ್.ಕ್ಷೇತ್ರ 1994–2023ರವರೆಗೂ ಒಬ್ಬರೇ ಶಾಸಕರಿದ್ದರೂ ಅಭಿವೃದ್ಧಿ ಹೊಂದುತ್ತಿಲ್ಲ. ಜೊತೆಗೆ ಒಬಿಸಿ, ಎಸ್ಸಿ–ಎಸ್ಟಿ ವರ್ಗದ ಅನುದಾನಗಳು ಫಲಾನುಭವಿಗಳಿಗೆ ತಲುಪಿಸುತ್ತಿಲ್ಲ. ಹಿಂದೂಗಳು ವಾಸಿಸುತ್ತಿರುವ ಬಡಾವಣೆಗಳಿಗೆ ಸರಿಯಾದ ರಸ್ತೆಗಳಿಲ್ಲ. ಎನ್.ಆರ್.ಕ್ಷೇತ್ರದ ರಸ್ತೆಗಳು ಗುಂಡಿಮಯವಾಗಿವೆ. ಅಲ್ಲದೆ, ಹಿಂದೂ ಕುಟುಂಬಗಳು ಹಲವು ವರ್ಷಗಳಿಂದ ಭಯದ ನೆರಳಿನಲ್ಲಿ ಬದುಕುತ್ತಿದ್ದು, ಇದನ್ನು ತಡೆಗಟ್ಟಬೇಕಾದರೆ, ಎನ್.ಆರ್.ಕ್ಷೇತ್ರ ವ್ಯಾಪ್ತಿಯ ಹಿಂದೂಗಳೆಲ್ಲಾ ಒಂದಾಗಿ ಶಾಸಕರನ್ನು ಆಯ್ಕೆ ಮಾಡುವ ಸಂಕಲ್ಪ ತೊಡಬೇಕು ಎಂದು ಮನವಿ ಮಾಡಿದರು.

ಪಕ್ಕದ ಕ್ಷೇತ್ರಗಳು ಅಭಿವೃದ್ಧಿ ಹೊಂದುತ್ತಿದ್ದರೂ ನಿಮ್ಮ ಕ್ಷೇತ್ರ ಮಾತ್ರ ಏಕೆ ಅಭಿವೃದ್ಧಿಯಾಗುತ್ತಿಲ್ಲ ಎಂದು ಒಮ್ಮೆ ಯೋಚಿಸಬೇಕು. ಎಸ್ಸಿ–ಎಸ್ಟಿ, ಒಬಿಸಿ ಮತ್ತು ಒಕ್ಕಲಿಗ, ಲಿಂಗಾಯತ ಸಮುದಾಯಗಳಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರದಿಂದ ಸಿಗಬೇಕಾದ ಸೌಕರ್ಯಗಳಿಂದ ವಂಚಿತರಾಗುತ್ತಿದ್ದಾರೆ. ಎನ್.ಆರ್.ಕ್ಷೇತ್ರದ ವಿಶೇಷ ಮುತುವರ್ಜಿ ವಹಿಸಿ, ಕೇಂದ್ರ ಸರ್ಕಾರದ ಯೋಜನೆಗಳನ್ನು ತಲುಪಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿ ಕೆಡಿಪಿ ಸಭೆಯಲ್ಲಿ ಈ ಬಗ್ಗೆ ವಿಚಾರಿಸಿದರೆ, ಸರಿಯಾದ ಮಾಹಿತಿ ಲಭ್ಯವಿಲ್ಲ ಎನ್ನುತ್ತಾರೆ ಎಂದು ಪರಿಸ್ಥಿತಿ ಎಳೆಎಳೆಯಾಗಿ ವಿವರಿಸಿದರು.

ಶಾಸಕ ಎಸ್.ಎ.ರಾಮದಾಸ್: ನಮ್ಮ ಕ್ಷೇತ್ರದಲ್ಲಿ ಎಲ್ಲಾ ವರ್ಗಗಳಿಗೂ ರಾಜ್ಯ ಮತ್ತು ಕೇಂದ್ರ ಸರ್ಕಾರ ಸವಲತ್ತುಗಳನ್ನು ಮನೆಮನೆಗೆ ತಲುಪಿಸುವ ಕೆಲಸ ಮಾಡಲಾಗುತ್ತಿದೆ. ಆದರೆ, ಎನ್.ಆರ್.ಕ್ಷೇತ್ರದ ಹಲವು ಮತದಾರರಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರದ ಸವಲತ್ತುಗಳನ್ನು ಸಿಗುತ್ತಿಲ್ಲ ನಮ್ಮ ಬಳಿ ಬಂದು ಅಲವತ್ತುಕೊಳ್ಳುತ್ತಿದ್ದಾರೆ. ಆಯುಷ್ಮಾನ್ ಭಾರತ್ ಆರೋಗ್ಯ ಯೋಜನೆ ಕಾರ್ಡ್ ಸೇರಿದಂತೆ ಇತರೆ ಸವಲತ್ತುಗಳಿಂದ ವಂಚಿತರಾಗುತ್ತಿರುವ ಬಗ್ಗೆ ನಮ್ಮ ಕಾರ್ಯಕರ್ತರಿಂದ ಮಾಹಿತಿ ಬಂದಿದೆ. ಅಂತೆಯೇ ಇಲ್ಲಿನ ಹಲವು ರಸ್ತೆಗಳು ಗುಂಡಿಮಯವಾಗಿದ್ದು, ಓಡಾಡಲು ಇಲ್ಲಿನ ಜನರು ದಿನನಿತ್ಯ ಕಷ್ಟಪಡುವ ಸ್ಥಿತಿ ಬಂದಿದೆ. ಒಟ್ಟಿನಲ್ಲಿ ಅಭಿವೃದ್ಧಿಯಿಂದ ಎನ್.ಆರ್.ಕ್ಷೇತ್ರ ವಂಚಿತವಾಗಿದೆ ಎಂದರೆ ತಪ್ಪಾಗಲಾರದು. ಹಾಗಾಗಿ ಈ ಕ್ಷೇತ್ರದ ಅಭಿವೃದ್ಧಿಗಾಗಿ ಬಿಜೆಪಿ ಅಭ್ಯರ್ಥಿ ಗೆಲ್ಲಿಸುವ ಪಣತೊಡಬೇಕು ಎಂದರು.

ಶಾಸಕ ಎಲ್.ನಾಗೇಂದ್ರ ನನ್ನ ಕ್ಷೇತ್ರದಲ್ಲಿ ದಿನನಿತ್ಯ ಮತದಾರರ ಕಷ್ಟಗಳಿಗೆ ಸ್ಪಂದಿಸುತ್ತ, ರಸ್ತೆ, ಚರಂಡಿ, ಯುಜಿಡಿ ಸಂಪರ್ಕ ಸೇರಿದಂತೆ ಇತರೆ ಅಭಿವೃದ್ಧಿ ಕಾರ್ಯಗಳನ್ನು ತ್ವರಿತವಾಗಿ ಹಮ್ಮಿಕೊಂಡು ಕೆಲಸ ನಿರ್ವಹಿಸುತ್ತಿದ್ದೇನೆ. ಈ ಕ್ಷೇತ್ರದ ರಸ್ತೆಗಳು ಗುಂಡಿಮಯವಾಗಿದ್ದು, ಅಭಿವೃದ್ಧಿ ಮರೀಚಿಕೆಯಾಗಿದೆ ಎಂದು ಬೇಸರ ಹೊರಹಾಕಿದರಲ್ಲದೆ, 2023ರ ಚುನಾವಣೆಯಲ್ಲಿ ಅಭಿವೃದ್ಧಿ ಪರವಾಗಿ ಶಾಸಕರನ್ನು ಗೆಲ್ಲಿಸಲು ಮತ್ತು ತಮ್ಮ ಕುಟುಂಬಗಳ ಸುರಕ್ಷೆ ಕಾಪಾಡುವ ಜನಪ್ರತಿನಿಧಿ ಗೆಲ್ಲಿಸಲು ಪಣ ತೊಡಬೇಕು ಎಂದು ಮನವಿ ಮಾಡಿದರು.

ಮೈಲ್ಯಾಕ್ ಅಧ್ಯಕ್ಷ ರಘು ಆರ್.ಕೌಟಿಲ್ಯ ಹೇಳಿಕೆ: ಒಬಿಸಿ ಕುಲಕಸುಬುಗಳಿಗೆ ಉತ್ತೇಜಿಸುವ ಸಲುವಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನೇಕ ಯೋಜನೆಗಳನ್ನು ಜಾರಿಗೊಳಿಸಿವೆ. ಇದರ ಸದುಪಯೋಗ ಪಡೆಯಲು ಎನ್.ಆರ್.ಕ್ಷೇತ್ರದ ಹಿಂದುಳಿದ, ಎಸ್ಸಿ–ಎಸ್ಟಿ ಸಮುದಾಯ ಮುಂದಾಗಬೇಕು. ಸ್ವ ಉದ್ಯೋಗ ಕಲ್ಪಿಸಲು ಕೇಂದ್ರ ಸರ್ಕಾರ ಮುದ್ರಾ ಯೋಜನೆ ಜಾರಿಗೆ ತಂದಿದೆ, ಅಲ್ಲದೆ, ರಾಜ್ಯ ಸರ್ಕಾರ ದೀನ–ದಲಿತರ ಏಳಿಗೆಗೆ ಮೀಸಲಾತಿ ಹೆಚ್ಚಳ, ಮರುವರ್ಗೀಕರಣ ಮಾಡಿದೆ. ಅಂತೆಯೇ ಇಷ್ಟು ದಿನ ಎಸ್ಸಿ–ಎಸ್ಟಿ ಮತ್ತು ಒಬಿಸಿ ಸಮುದಾಯದ ಏಳಿಗೆಗೆ ಯಾವುದೇ ಯೋಜನೆಯನ್ನು ಕಾಂಗ್ರೆಸ್ ರೂಪಿಸಿಲ್ಲ. ಹಾಗಾಗಿ ಈ ವೇದಿಕೆ ಮೇಲಿರುವ ಎಲ್ಲಾ ಜನಪ್ರತಿನಿಧಿಗಳು ತಮ್ಮ ಅನಿಸಿಕೆ ವ್ಯಕ್ತಪಡಿಸಿದ್ದಂತೆ ಎನ್.ಆರ್.ಕ್ಷೇತ್ರದಲ್ಲಿ ಈ ಬಾರಿ ಬಿಜೆಪಿ ಪಕ್ಷದ ಅಭ್ಯರ್ಥಿ ಗೆಲ್ಲಿಸಲು ಎಲ್ಲರೂ ಪಣತೊಡಬೇಕು ಎಂದು ಕಾರ್ಯಕರ್ತರನ್ನು ಹುರಿದುಂಬಿಸಿದರು.

ಮಾಜಿ ಮೇಯರ್ ಹಾಗೂ ಬಿಜೆಪಿ ಮುಖಂಡ ಸಂದೇಶ್ ಸ್ವಾಮಿ ಹೇಳಿಕೆ: ರಾಜ್ಯದ ಪ್ರತಿಯೊಬ್ಬ ನಾಗರಿಕರ ಅಭಿವೃದ್ಧಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ ಹಲವು ಯೋಜನೆಗಳನ್ನು ಜಾರಿಗೆ ತಂದರೂ ಎನ್.ಆರ್.ಕ್ಷೇತ್ರದಲ್ಲಿ ಸರ್ಕಾರದ ಯೋಜನೆಗಳು ಸರಿಯಾಗಿ ಅನುಷ್ಠಾನವಾಗುತ್ತಿಲ್ಲ. ಅದರಲ್ಲೂ ಒಬಿಸಿ ಸಮುದಾಯಕ್ಕೆ ಸಿಗಬೇಕಾದ ಸವಲತ್ತು ಸಿಗುತ್ತಿಲ್ಲ. ಹಾಗಾಗಿ ಒಬಿಸಿ ಸಮುದಾಯ ಈ ಬಾರಿ ಪಣ ತೊಟ್ಟು ಬಿಜೆಪಿ ಪಕ್ಷದ ಅಭ್ಯರ್ಥಿಯನ್ನು ಶಾಸಕರಾಗಿ ಆಯ್ಕೆ ಮಾಡಲು ಶ್ರಮಿಸಬೇಕು. ಇದಕ್ಕೆ ಈ ಭಾಗದ ಒಬಿಸಿ ಮೋರ್ಚಾ ಕಾರ್ಯಕರ್ತರು ಶ್ರಮಿಸುವಂತೆ ಮನವಿ ಮಾಡಿದರು.

ಈ ವೇಳೆ ಮೈಸೂರು ಮಹಾನಗರ ಪಾಲಿಕೆ ಮೇಯರ್ ಶಿವಕುಮಾರ್, ಬಿಜೆಪಿ ನಗರ ಘಟಕ ಅಧ್ಯಕ್ಷ ಶ್ರೀವತ್ಸ, ಜಿಲ್ಲಾ ಬಿಜೆಪಿ ಒಬಿಸಿ ಮೋರ್ಚಾ ಅಧ್ಯಕ್ಷ ಜೋಗಿ ಮಂಜು, ರಾಜ್ಯ ಉಪಾಧ್ಯಕ್ಷ ರಾಜೇಂದ್ರ, ರಾಜ್ಯ ಪ್ರಧಾನ ಕಾರ್ಯದರ್ಶಿ ಸುರೇಶ್ ಬಾಬು, ಬಿಜೆಪಿ ಮುಖಂಡರಾದ ಮೈ.ವಿ.ರವಿಶಂಕರ್, ಪ್ರಧಾನ ಕಾರ್ಯದರ್ಶಿಗಳಾದ ಗಿರಿಧರ್, ಸೋಮಸುಂದರ್, ವಾಣೀಶ್, ರಂಗಸ್ವಾಮಿ, ಬಿಜೆಪಿ ಎನ್.ಆರ್.ಕ್ಷೇತ್ರದ ಘಟಕದ ಪ್ರಧಾನ ಕಾರ್ಯದರ್ಶಿ ಗೋಪಾಲ್ ಮಣಿರತ್ನಂ, ನಗರ ಪಾಲಿಕೆ ಸದಸ್ಯರಾದ ಸಾತ್ವಿಕ್ ಸಂದೇಶ್‌ಸ್ವಾಮಿ, ರಂಗಸ್ವಾಮಿ, ಸುಬ್ಬಯ್ಯ, ಸತೀಶ್, ಛಾಯಾದೇವಿ, ಕಾರ್ಯಕರ್ತರಾದ ಅಭಿಲಾಷ್, ಜೀವನ್, ಸೂರಜ್, ವಿಜಯಕುಮಾರ್, ಶಿವಪ್ಪ, ನಾರಾಯಣ ಆಚಾರ್, ರಾಚಪ್ಪಾಜಿ, ಶಿವರಾಜ್, ಭರತ್, ಜಗದೀಶ್, ಮಂಜುನಾತ್, ಸೋಮಶೇಖರ್ ರಾಜು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಸೋಮವಾರ 27 ಮಾರ್ಚ್ 2023

ದಲಿತರು, ಬಡವರಿಗೆ ನಿವೇಶನ ನೀಡದೆ ನಿರ್ಲಕ್ಷ್ಯ ಆರೋಪ

ಚುನಾವಣೆ ಬಹಿಷ್ಕರಿಸಲು ಅಮ್ಮತ್ತಿ ಕಾರ್ಮಾಡು ನಿವಾಸಿಗಳ ನಿರ್ಧಾರ



ವಿರಾಜಪೇಟೆ, ಮಾ.26– ಅಮ್ಮತ್ತಿ ಕಾರ್ಮಾಡು ಪಂಚಾಯಿತಿ ವ್ಯಾಪ್ತಿಯ ದಲಿತರು ಮತ್ತು ಬಡ ಕಾರ್ಮಿಕರು ಸ್ವಂತ ಸೂರಿಲ್ಲದೆ ಬಹಳ ವರ್ಷಗಳಿಂದ ಬಾಡಿಗೆ ಮನೆ ಹಾಗೂ ಲೈನ್ ಮನೆಗಳಲ್ಲಿ ವಾಸ ಮಾಡುತ್ತಿದ್ದು, ಸೂರಿಗಾಗಿ ಹೋರಾಟ ನಡೆಸಿ ಮನವಿ ಸಲ್ಲಿಸಿದರೂ ಯಾರೂ ಸ್ಪಂದಿಸದ ಕಾರಣ ಮುಂಬರುವ ವಿಧಾನಸಭಾ ಚುನಾವಣೆಯನ್ನು ಬಹಿಷ್ಕರಿಸಲು ನಿರ್ಧರಿಸಿರುವುದಾಗಿ ನಿವೇಶನ ಹೋರಾಟ ಸಮಿತಿಯ ಗೌರವ ಅಧ್ಯಕ್ಷ ಎ.ಮಹದೇವ್ ತಿಳಿಸಿದ್ದಾರೆ.

ವಿರಾಜಪೇಟೆ ಬಳಿಯ ಅಮ್ಮತ್ತಿ ಕಾರ್ಮಾಡು ಚೌಡೇಶ್ವರಿ ನಗರದ ಅಂಬೇಡ್ಕರ್ ಸಮುದಾಯ ಭವನದಲ್ಲಿ ಹೋರಾಟ ಸಮಿತಿ ವತಿಯಿಂದ ಆಯೋಜಿಸಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮನೆ ಇಲ್ಲದವರಿಗೆ ಸರ್ಕಾರಿ ಜಾಗದಲ್ಲಿ ನಿವೇಶನ ನೀಡುವಂತೆ ತಾಲೂಕು ಕಚೇರಿ ಹಾಗೂ ಗ್ರಾಮ ಪಂಚಾಯಿತಿ ಎದುರು ಅನೇಕ ಬಾರಿ ಪ್ರತಿಭಟನೆ ನಡೆಸಿ ಅಧಿಕಾರಿ ಗಳಿಗೆ ಮನವಿ ಸಲ್ಲಿಸಿದರೂ ಇದುವರೆಗೂ ಯಾವುದೇ ಪ್ರಯೋಜನವಾಗಿಲ್ಲ ಎಂದರು.

ಈ ಸರಕಾರಕ್ಕೆ ಬಡವರ ಬಗ್ಗೆ ಕರುಣೆ ಇಲ್ಲದಂತಾಗಿದೆ. ಇರುವ ಸರಕಾರಿ ಜಾಗ ಒತ್ತುವರಿಯಿಂದ ಉಳ್ಳವರ ಪಾಲಾಗಿದೆ. ಅಧಿಕಾರಿಗಳು ಕಂಡರೂ ಕಾಣದಂತಿದ್ದಾರೆ. ಆದ್ದರಿಂದ ಈ ಚುನಾವಣೆಯಲ್ಲಿ ಮತದಾನ ಬಹಿಷ್ಕರಿಸಲು ನಿರ್ಧರಿಸುವುದಾಗಿ ತಿಳಿಸಿದ ಅವರು, ಮತದಾನದ ಪಟ್ಟಿಯಲ್ಲಿ ಹೆಸರು ಸೇರಿಸಲು ಸರಕಾರದ ಆದೇಶವಿದ್ದರೂ ಇಲ್ಲಿನ ಅಂಗನವಾಡಿ ಕಾರ್ಯಕರ್ತೆ ಮತ್ತು ಕಂದಾಯ ಅಧಿಕಾರಿ ಕೆಲವರ ಮಾತು ಕೇಳಿ ಮತದಾರರ ಹೆಸರನ್ನೆ ಪಟ್ಟಿಯಿಂದ ತೆಗೆದಿದ್ದಾರೆ. ಈ ಸಂಬಂಧ ಕಾನೂನು ಹೋರಾಟ ನಡೆಸುವುದಾಗಿ ತಿಳಿಸಿದರು.

ಕಾರ್ಮಾಡು ಚೌಡೇಶ್ವರಿ ನಗರದ ಶೀಲಾ ಮಾತನಾಡಿ, ಕಾರ್ಮಾಡು ಪಂಚಾಯಿತಿ ನಿವೇಶನ ನೀಡುವುದಾಗಿ ಆಧಾರ್, ಪಡಿತರ ಚೀಟಿ ಇತ್ಯಾದಿ ದಾಖಲೆಗಳನ್ನು ಪಡೆದುಕೊಂಡಿದ್ದರು. ಆದರೆ ಈಗ ಕೇಳಿದರೆ ನಿವೇಶನವೇ ಇಲ್ಲ ಎನ್ನುತಾರೆ. ನಾವುಗಳು ತಿಂಗಳಿಗೊಂದು ಬಾಡಿಗೆ ಮನೆ ಹುಡುಕುವಂತಾಗಿದೆ. ಜನಪ್ರತಿನಿಧಿಗಳು ದಲಿತರು ಮತ್ತು ಕಾರ್ಮಿಕರನ್ನು ಕಡೆಗಣಿಸುತ್ತಿದ್ದಾರೆ ಎಂದರು. ಸಭೆಯಲ್ಲಿದ್ದ ಸ್ಥಳೀಯ ನಿವಾಸಿಗಳು ಮಾತನಾಡಿ, ಜನಪ್ರತಿನಿಧಿಗಳು ಚುನಾವಣೆ ಸಂದರ್ಭ ಮಾತ್ರ ಗ್ರಾಮಕ್ಕೆ ಬರುತ್ತಾರೆ. ಗೆದ್ದ ನಂತರ ನಮ್ಮನ್ನು ಮರೆತು ಬಿಡುತ್ತಾರೆ ಎಂದು ದೂರಿದರು.

ಸಭೆಯಲ್ಲಿ ಸ್ಥಳೀಯ ನಿವಾಸಿಗಳಾದ ಆರ್.ಹೊನ್ನಪ್ಪ, ಕೆ.ಜಿ.ಯಶೋಧ, ಅಮ್ಮತಿ ಜಯಮ್ಮ, ಪಾಪಣ್ಣ, ಆರ್. ಶ್ರೀಧರ್, ಚೈತ್ರ ಗಣೇಶ್, ವೀಣಾಕುಮಾರಿ, ಕುಸುಮ, ನಾರಾಯಣ, ಸುಶಿಲಾ ಮನೋಜ್, ವೇಲಾಯುದನ್, ಸುರೇಶ್, ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಕೊಡವರ ಕುರಿತು ವಿವಾದಾತ್ಮಕ ಹೇಳಿಕೆ

ಕೊಡವರ ಕ್ಷಮೆ ಯಾಚಿಸದಿದ್ದರೆ ಕಾನೂನು ಹೋರಾಟ, ಪ್ರತಿಭಟನೆ

ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ. ಜಯಪ್ರಕಾಶ್‌ಗೌಡರ ವಿರುದ್ಧ ಆಕ್ರೋಶ

ಮಡಿಕೇರಿ, ಮಾ.26– ವ್ಯಕ್ತಿಯೊಬ್ಬರನ್ನು ನಿಂದಿಸುವ ಭರದಲ್ಲಿ ಕೊಡವರ ಕುರಿತು ವಿವಾದಾತ್ಮಕ ಹೇಳಿಕೆಯನ್ನು ನೀಡುವ ಮೂಲಕ ಇಡೀ ಕೊಡವ ಸಮುದಾಯದ ಭಾವನೆಯನ್ನು ಕೆರಳಿಸಿರುವ ಮಂಡ್ಯ ಜಿಲ್ಲೆಯ ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ. ಜಯಪ್ರಕಾಶ್ ಗೌಡರು ಕೂಡಲೇ ಕೊಡವ ಜನಾಂಗದ ಕ್ಷಮೆಯಾಚಿಸಬೇಕು. ತಪ್ಪಿದ್ದಲ್ಲಿ ಇವರ ವಿರುದ್ಧ ಕಾನೂನು ಹೋರಾಟ ಹಾಗೂ ಪ್ರತಿಭಟನೆಯನ್ನು ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಅಖಿಲ ಕೊಡವ ಸಮಾಜ ಹಾಗೂ ಅಖಿಲ ಕೊಡವ ಸಮಾಜ ಯೂತ್ ವಿಂಗ್ ಎಚ್ಚರಿಸಿವೆ.

ಈ ಕುರಿತು ಜಂಟಿ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಅಖಿಲ ಕೊಡವ ಸಮಾಜದ ಅಧ್ಯಕ್ಷ ಪರದಂಡ ಸುಬ್ರಮಣಿ ಕಾವೇರಪ್ಪ ಹಾಗೂ ಅಖಿಲ ಕೊಡವ ಸಮಾಜ ಯೂತ್ ವಿಂಗ್ ಅಧ್ಯಕ್ಷ ಚಮ್ಮಟೀರ ಪ್ರವೀಣ್ ಉತ್ತಪ್ಪ ಅವರುಗಳು, ಪ್ರೊಫೆಸರ್ ಜಯಪ್ರಕಾಶ್ ಗೌಡರ ಹೇಳಿಕೆಯನ್ನು ತೀವ್ರವಾಗಿ ಖಂಡಿಸಿದ್ದು, ತಮ್ಮ ಆಕ್ರೋಶವನ್ನು ಹೊರಹಾಕಿದ್ದಾರೆ.

ಈ ದೇಶಕ್ಕೆ ಒಬ್ಬರು ಮಹಾದಂಡನಾಯಕ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಹಾಗೂ ಮತ್ತೊಬ್ಬರು ಜನರಲ್ ತಿಮ್ಮಯ್ಯ ಅವರಂತಹ ನೂರಾರು ಸೇನಾಧಿಕಾರಿಗಳನ್ನು, ಲಕ್ಷಾಂತರ ಸೈನಿಕರನ್ನು ಕೊಡುಗೆಯಾಗಿ ನೀಡಿರುವ ಕೊಡವರ ಬಗ್ಗೆ ಮಾತನಾಡುವ ನೈತಿಕತೆ ಪ್ರೊಫೆಸರ್ ಜಯಪ್ರಕಾಶ್ ಗೌಡರಿಗೆ ಇದೆಯೇ ಎಂದು ಪ್ರಶ್ನಿಸಿದ್ದಾರೆ.

ಕೊಡವರ ಕುಲಮಾತೆಯಾಗಿರುವ ಕಾವೇರಿ ಹರಿದು ಬರುತ್ತಿರುವ ಮಂಡ್ಯ ಜಿಲ್ಲೆಗೂ ಕೊಡಗಿಗೂ ಭಾವನಾತ್ಮಕ ಸಂಬಂಧವಿದೆ. ಮಂಡ್ಯದ ಹಾಗೂ ಕೊಡಗಿನ ಜನಾಂಗಗಳ ನಡುವೆ ಸಾಮರಸ್ಯವಿದೆ. ಅಡ್ಡಂಡ ಕಾರ್ಯಪ್ಪ ಅವರ ಹೇಳಿಕೆಯ ವಿಚಾರವನ್ನಿಟ್ಟುಕೊಂಡು ಕೊಡವರನ್ನು ಗುರಿಯಾಗಿಸಿಕೊಂಡು ಅಸಂಬದ್ಧ ಹೇಳಿಕೆಯನ್ನು ನೀಡುವ ಮೂಲಕ ನಮ್ಮ ಜನಾಂಗವನ್ನು ಅವಮಾನ ಮಾಡಿದ್ದೀರಿ. ತಕ್ಷಣವೇ ಕೊಡವ ಜನಾಂಗದ ಕ್ಷಮೆ ಕೇಳಬೇಕು, ತಪ್ಪಿದಲ್ಲಿ ಕಾನೂನು ಹೋರಾಟ ಮಾಡಬೇಕಾಗುತ್ತದೆ ಎಂದು ಕೊಡವ ಜನಾಂಗದ ಮಾತೃ ಸಂಸ್ಥೆಯಾಗಿರುವ ಅಖಿಲ ಕೊಡವ ಸಮಾಜ ಹಾಗೂ ಅದರ ಅಂಗಸಂಸ್ಥೆಗಳು ಎಚ್ಚರಿಸಿವೆ.

ಕಾಲು ಜಾರಿ ಬಿದ್ದು ಮಹಿಳೆ ಸಾವು



ಮಡಿಕೇರಿ, ಮಾ.26– ಆಕಸ್ಮಿಕವಾಗಿ ಕಾಲು ಜಾರಿ ಬಿದ್ದು ಮಹಿಳೆಯೊಬ್ಬರು ಮೃತಪಟ್ಟ ಘಟನೆ ವಿರಾಜಪೇಟೆ ತಾಲೂಕಿನ ಕಡಂಗದ ಮರೂರು ಗ್ರಾಮದಲ್ಲಿ ನಡೆದಿದೆ. ಅಲ್ಲಿನ ನಿವಾಸಿ, ಗೋಣಿಕೊಪ್ಪಲು ಕಾವೇರಿ ಕಾಲೇಜಿನಲ್ಲಿ ಎನ್.ಸಿ.ಸಿ ಅಧಿಕಾರಿಯಾಗಿದ್ದ ಡಾ. ಬಲ್ಯಂಡ ಬೀನಾ(52) ಎಂಬುವರೇ ಮೃತ ದುರ್ದೈವಿ. ಡಾ. ಬಲ್ಯಂಡ ಬೀನಾ ಅವರು ಶನಿವಾರ ರಾತ್ರಿ ತಮ್ಮ ತಾಯಿಯ ಮನೆಯಲ್ಲಿ ಕೆಲಸ ಮಾಡುತ್ತಿದ್ದಾಗ ಆಕಸ್ಮಿಕವಾಗಿ ಕಾಲುಜಾರಿ ಬಿದ್ದಿದ್ದರು. ಇದರಿಂದ ತಲೆಯ ಭಾಗಕ್ಕೆ ಗಂಭೀರ ಸ್ವರೂಪದ ಗಾಯಗಳಾಗಿತ್ತು. ಈ ಹಿನ್ನೆಲೆಯಲ್ಲಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಭಾನುವಾರ ಸಾವನ್ನಪ್ಪಿದ್ದಾರೆ.

ಮುಸ್ಲಿಮರಿಗೆ ಮೀಸಲಾತಿ ಕಡಿತ: ಕಾಂಗ್ರೆಸ್ ಅಲ್ಪಸಂಖ್ಯಾತ ಘಟಕದಿಂದ ಖಂಡನೆ

ಮಡಿಕೇರಿ, ಮಾ.26– ಮುಸ್ಲಿಮರಿಗೆ ಪ್ರವರ್ಗ 2ಬಿ ಅಡಿಯಲ್ಲಿ ನೀಡುತ್ತಿದ್ದ ಶೇ.4ರಷ್ಟು ಮೀಸಲಾತಿಯನ್ನು ರದ್ದು ಮಾಡಿರುವ ರಾಜ್ಯ ಸರ್ಕಾರದ ನಿರ್ಧಾರ ಖಂಡನೀಯ ಎಂದು ಕೊಡಗು ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಲ್ಪಸಂಖ್ಯಾತರ ಘಟಕದ ಜಿಲ್ಲಾಧ್ಯಕ್ಷ ಎಂ.ಎ.ಉಸ್ಮಾನ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.



ಪತ್ರಿಕಾ ಹೇಳಿಕೆ ನೀಡಿರುವ ಅವರು, ಮುಸ್ಲಿಮರು ರಾಜ್ಯ ಸರ್ಕಾರಕ್ಕೆ ಏನು ಅನ್ಯಾಯ ಮಾಡಿದ್ದಾರೆ. ಮುಸ್ಲಿಮರ ಮೀಸಲಾತಿಯನ್ನು ಕಸಿದು ನಮಗೆ ನೀಡಿ ಎಂದು ಮತ್ತೊಂದು ಸಮುದಾಯದವರು ಕೇಳಿದ್ದಾರೆಯೇ ಎಂದು ಪ್ರಶ್ನಿಸಿದ್ದಾರೆ. ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎಂಬ ನೀತಿಯಂತೆ ರಾಜ್ಯ ಕಟ್ಟುವ ಕೆಲಸ ಮಾಡಲಾಗುತ್ತಿದೆ ಎಂದು ಮುಖ್ಯಮಂತ್ರಿಗಳು ಸಭೆ, ಸಮಾರಂಭಗಳಲ್ಲಿ ಹೇಳಿಕೊಳ್ಳುತ್ತಾರೆ. ಆದರೆ ಇಂದು ಏಕಾಏಕಿ ಮುಸ್ಲಿಮರ ಹಕ್ಕುಗಳನ್ನು ಕಸಿದುಕೊಳ್ಳುವ ಮೂಲಕ ಇದು ತಾರತಮ್ಯದ ಸರ್ಕಾರ ಎನ್ನುವುದನ್ನು ಸಾಬೀತುಪಡಿಸಿದ್ದಾರೆ. ಸಂವಿಧಾನದ ಆಶಯದಂತೆ ಮುಸ್ಲಿಮರಿಗೂ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಮೀಸಲಾತಿಯ ಹಕ್ಕು ದೊರೆತಿದೆ. ಆದರೆ ಇದನ್ನು ಇಲ್ಲದಂತೆ ಮಾಡುವ ಮೂಲಕ ಈ ದೇಶದ ಜಾತ್ಯತೀತ ವ್ಯವಸ್ಥೆಗೆ ಮಸಿ ಬಳಿಯಲಾಗಿದೆ ಎಂದು ಟೀಕಿಸಿದ್ದಾರೆ. ರಾಜ್ಯ ಸರ್ಕಾರಕ್ಕೆ ಸಂವಿಧಾನದ ಮೇಲೆ ನೈಜ ಗೌರವವಿದ್ದರೆ ತಕ್ಷಣ ಮುಸ್ಲಿಮರ ಮೀಸಲಾತಿಯನ್ನು ಯಥಾಸ್ಥಿತಿ ಕಾಯ್ದುಕೊಳ್ಳಬೇಕು ಎಂದು ಒತ್ತಾಯಿಸಿರುವ ಉಸ್ಮಾನ್, ತಪ್ಪಿದಲ್ಲಿ ಹೋರಾಟ ಅನಿವಾರ್ಯವಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ. ಸಮಾಜದಲ್ಲಿ ಒಡಕು ಮೂಡಿಸಿ ರಾಜಕೀಯ ಲಾಭ ಮಾಡಿಕೊಳ್ಳುವ ಭ್ರಮೆಯಲ್ಲಿರುವ ಬಿಜೆಪಿಗೆ ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಜನರು ತಕ್ಕ ಪಾಠ ಕಲಿಸಲಿದ್ದಾರೆ ಎಂದು ಹೇಳಿದ್ದಾರೆ.

ಕೊಳಕೇರಿ–ಕೋಕೇರಿ ರಸ್ತೆ ದುರಸ್ತಿಗೆ ಆಗ್ರಹಿಸಿ ಗ್ರಾಮಸ್ಥರಿಂದ ರಸ್ತೆ ತಡೆ



ನಾಪೋಕ್ಲು, ಮಾ.26– ನಾಪೋಕ್ಲುವಿನಿಂದ ವಿರಾಜಪೇಟೆ ಸಂಪರ್ಕಿಸುವ ರಾಜ್ಯ ಹೆದ್ದಾರಿಯ ಕೊಳಕೇರಿಯಲ್ಲಿ ರಸ್ತೆತಡೆ ನಡೆಸಿ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು. ಕೋಕೇರಿ ಮತ್ತು ಕೊಳಕೇರಿ ಗ್ರಾಮದ ರಸ್ತೆಯು ಎರಡು ದಶಕಗಳಿಂದ ದುರಸ್ತಿ ಕಾಣದೆ ಸಂಚಾರ ದುಸ್ತರವಾಗಿದೆ. ರಸ್ತೆ ದುರಸ್ತಿಯ ಬಗ್ಗೆ ಹಲವು ಬಾರಿ ಪ್ರತಿಭಟನೆ ನಡೆಸಿ ಸಂಬಂಧಪಟ್ಟ ಅಧಿಕಾರಿಗಳು ಜನಪ್ರತಿನಿಧಿಗಳ ಗಮನಕ್ಕೆ ತಂದರೂ ಸಮಸ್ಯೆಗೆ ಪರಿಹಾರ ದೊರೆತಿಲ್ಲ ಎಂದು ಆರೋಪಿಸಿರುವ ಪ್ರತಿಭಟನಾಕಾರರು ರಸ್ತೆ ತಡೆನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ವಿರಾಜಪೇಟೆ ಕಡೆಯಿಂದ ನಾಪೋಕ್ಲುವಿಗೆ ಬರುವ ಬಸ್ಸು, ಇನ್ನಿತರ ವಾಹನಗಳನ್ನು ಪ್ರತಿಭಟನಾಕಾರರು ಹಿಂದಕ್ಕೆ ಕಳುಹಿಸಿದರು. ನಾಪೋಕ್ಲು ಕಡೆಯಿಂದ ಇದೇ ಮಾರ್ಗವಾಗಿ ಸಂಚರಿಸುವ ವಾಹನಗಳನ್ನು ಹದಗೆಟ್ಟ ಕೊಳಕೇರಿ–ಕೋಕೇರಿ ರಸ್ತೆಯ ಮೂಲಕ ಕಳುಹಿಸಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಅಭಿಯಂತರರು ಸ್ಥಳಕ್ಕೆ ಆಗಮಿಸುವಂತೆ ಒತ್ತಾಯಿಸಿದರು. ಶೀಘ್ರ ರಸ್ತೆ ದುರಸ್ತಿ ಪಡಿಸದಿದ್ದರೆ ಮುಂದಿನ ವಿಧಾನಸಭಾ ಚುನಾವಣೆಯನ್ನು ಬಹಿಷ್ಕರಿಸುವುದಾಗಿ ಎಚ್ಚರಿಸಿದರು.

ಗ್ರಾಮಸ್ಥ ಚೇನಂಡ ಗಿರೀಶ್ ಮಾತನಾಡಿ, ನಾಪೋಕ್ಲು ಗ್ರಾಮಪಂಚಾಯಿತಿಗೊಳಪಡುವ ಕೊಳಕೇರಿ ಹಾಗೂ ಕಕ್ಕಬ್ಬೆ ಸಂಪರ್ಕ ರಸ್ತೆಯ ಕೋಕೇರಿ ಗ್ರಾಮದಲ್ಲಿ ರಸ್ತೆ ಸಂಪೂರ್ಣ ಹದಗೆಟ್ಟಿದೆ. 6ಕಿ.ಮೀ. ಉದ್ದದ ರಸ್ತೆ ಕಳೆದ 20 ವರ್ಷಗಳಿಂದ ಸಂಪೂರ್ಣ ಹದಗೆಟ್ಟು ಹೋಗಿದೆ. ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಭರವಸೆ ನೀಡುತ್ತಾರೆ ಹೊರತು ದುರಸ್ತಿ ಪಡಿಸಲು ಕ್ರಮಕೈಗೊಂಡಿಲ್ಲ.ಹಾಗಾಗಿ ಈ ಬಾರಿಯ ಚುನಾವಣೆಯನ್ನು ಬಹಿಷ್ಕರಿಸಲು ಗ್ರಾಮಸ್ಥರು ಒಗ್ಗಟ್ಟಾಗಿ ನಿರ್ಧರಿಸಿದ್ದೇವೆ ಎಂದರು.

ಪ್ರತಿಭಟನೆಯಲ್ಲಿ ಗ್ರಾಮ ಪಂಚಾಯಿತಿ ಸದಸ್ಯ ಕೆ.ವೈ ಅಶ್ರಫ್, ಮಾಜಿ ಸದಸ್ಯ ಕೆ.ಎ.ಹ್ಯಾರೀಸ್, ಅಬ್ದುಲ್ ರಜಾಕ್, ಗ್ರಾಮಸ್ಥರಾದ ಕೆ.ಎ.ಅಶ್ರಫ್, ಮಹಮದ್ ಚೆಮ್ಮಾನಿ, ಕೆ.ಎ. ಮೊಯ್ದು, ಕೆ.ಎ. ಜುಬೇರ್, ಮೊಹಮದ್ ಮುಸ್ಲಿಯಾರ್, ಚೇನಂಡ ಚೆನಂಡ ನಂದ, ಚೆನಂಡ ಕಾರ್ಯಪ್ಪ, ಚೇನಂಡ ಬೋಪಣ್ಣ, ಚೇನಂಡ ಸಂಪತ್, ಪೊನ್ನಚಂಡ ಅರುಣ್, ಪೊನ್ನಚಂಡ ಮನೋಹರ್, ಪೊನ್ನಚಂಡ ಸನ್ನಿ, ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಜಿಪಂ ಎಂಜಿನಿಯರ್ ಜವರೇಗೌಡ ಮಾತನಾಡಿ, 5 ಲಕ್ಷ ರೂ. ವೆಚ್ಚದಲ್ಲಿ ರಸ್ತೆ ಕಾಮಗಾರಿ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಇದಕ್ಕೆ ಒಪ್ಪದ ಪ್ರತಿಭಟನಾಕಾರರು ಸಂಪೂರ್ಣ ರಸ್ತೆಯನ್ನು ದುರಸ್ತಿಪಡಿಸಬೇಕು ತಪ್ಪಿದಲ್ಲಿ ಚುನಾವಣೆ ಬಹಿಷ್ಕರಿಸುವುದಾಗಿ ಹೇಳಿದರು. ನಾಪೋಕ್ಲು ಠಾಣಾಧಿಕಾರಿ ಮಂಜುನಾಥ್ ಇ,. ಎಎಸ್‌ಐ ಗೋಪಾಲಕೃಷ್ಣ, ಮಧುಸೂದನ್, ಸಂಪತ್ತ ರಾಜ್ ಹಾಗೂ ಸಿಬ್ಬಂದಿಗಳು ಇದ್ದರು.

ವೈಭವದ ಶ್ರೀ ಮುತ್ತಪ್ಪ ದೇವರ ತೆರೆ ಮಹೋತ್ಸವ



ವಿರಾಜಪೇಟೆ, ಮಾ.26– ಪಟ್ಟಣದ ಅರಸು ನಗರದ ಶ್ರೀ ಮುತ್ತಪ್ಪ ದೇವರ [ಕೋಲ] ತೆರೆ ಮಹೋತ್ಸವವು ಎರಡು ದಿನಗಳ ಕಾಲ ಶ್ರದ್ಧಾಭಕ್ತಿ ಹಾಗೂ ವಿಜೃಂಭಣೆಯಿಂದ ನಡೆಯಿತು.

ಮಾ, 25 ರಂದು ಮುಂಜಾನೆ 5.30ಕ್ಕೆ ಗಣಪತಿ ಹೋಮ, ನಂತರ ದೇವರಿಗೆ ವಿಶೇಷ ಪೂಜೆಗಳು ನಡೆದು ಸಂಜೆ ಮುತ್ತಪ್ಪ ಹಾಗೂ ತಿರುವಪ್ಪನ ವೆಳ್ಳಾಟಂ ನಡೆಯಿತು. ರಾತ್ರಿ 9.30ಕ್ಕೆ ಚಲನಚಿತ್ರ ಪ್ರದರ್ಶನ ಏರ್ಪಡಿಸಲಾಗಿತ್ತು. ಮಾ.26 ಮುಂಜಾನೆ ಗುಳಿಗನ ತೆರೆ, ನಂತರ ಶ್ರೀ ಮುತ್ತಪ್ಪ ಹಾಗೂ ತಿರುವಪ್ಪನ ತೆರೆ ಮಹೋತ್ಸವ ನಡೆಯಿತು. ಭಕ್ತಾದಿಗಳಿಗೆ ಎರಡು ದಿನಗಳು ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ಈ ಸಂದರ್ಭ ಮುತ್ತಪ್ಪ ದೇವಸ್ಥಾನದ ಆಡಳಿತ ಮಂಡಳಿ ಸದಸ್ಯರು ಹಾಜರಿದ್ದರು. ಉತ್ಸವಕ್ಕೆ ದೂರದ ಊರುಗಳಿಂದಲೂ ಭಕ್ತಾದಿಗಳು ಆಗಮಿಸಿದ್ದರು.

ಆರ್ಥಿಕವಾಗಿ ಹಿಂದುಳಿದವರ ಕಲ್ಯಾಣಕ್ಕೆ ಸರ್ಕಾರ ಬದ್ಧ

ಫಲಾನುಭವಿಗಳ ಸಮಾವೇಶದಲ್ಲಿ ಉಸ್ತುವಾರಿ ಸಚಿವ ಸೋಮಣ್ಣ ಹೇಳಿಕೆ



ಗುಂಡ್ಲುಪೇಟೆ, ಮಾ.26– ಆರ್ಥಿಕವಾಗಿ ಹಿಂದುಳಿದವರನ್ನು ಮೇಲೆತ್ತಲು ನಮ್ಮ ರಾಜ್ಯ ಮತ್ತು ಕೇಂದ್ರ ಸರ್ಕಾರ ಪೂರಕವಾಗಿ ಶ್ರಮಿಸುತ್ತಿದೆ ಎಂದು ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಹೇಳಿದರು.

ಪಟ್ಟಣದ ಡಿ.ದೇವರಾಜ ಅರಸು ಕ್ರೀಡಾಂಗಣದಲ್ಲಿ ಜಿಲ್ಲಾಡಳಿತದ ವತಿಯಿಂದ ಏರ್ಪಡಿಸಿದ್ದ ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ಯೋಜನೆಗಳ ಫಲಾನುಭವಿಗಳ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಾಮಾನ್ಯ ಜನರಿಗೆ ನೆರವು ನೀಡುವುದು ಮತ್ತು ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದವರನ್ನು ಮೇಲ್ಪಂಕ್ತಿಗೆ ತರುವುದು ನಮ್ಮ ಸ್ಪಷ್ಟ ಗುರಿಯಾಗಿದೆ. ದೇಶದ ಅಭಿವೃದ್ಧಿಗೆ ಪ್ರಧಾನಿ ಅವಿರತವಾಗಿ ಶ್ರಮಿಸುತ್ತಿದ್ದಾರೆ. ಇದೇ ರೀತಿಯಾಗಿ ರಾಜ್ಯದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ರಾಜ್ಯದ ಅಭಿವೃದ್ಧಿಗೆ ಸದಾಸಿದ್ಧರಾಗಿದ್ದಾರೆಂದರು. ಚಾಮರಾಜನಗರ ಜಿಲ್ಲೆಯಲ್ಲಿ ವಿದ್ಯಾಸಿರಿ, ಕಿಸಾನ್ ಸಮ್ಮಾನ್ ಸೇರಿದಂತೆ ಹತ್ತು ಹಲವು ಯೋಜನೆಗಳಲ್ಲಿ 4 ಕೋಟಿ ರೂಪಾಯಿಗಳ ವಿದ್ಯಾರ್ಥಿ ವೇತನ, ರೇಷ್ಮೆ ಕೃಷಿ ಯೋಜನೆಯಡಿಯಲ್ಲಿ 127 ರೈತರಿಗೆ 1.2 ಕೋಟಿ ರೂಪಾಯಿಗಳ ಸಹಾಯಧನವನ್ನು ವಿತರಿಸಲಾಗಿದೆ. ಇದಲ್ಲದೇ ಜಿಲ್ಲೆಯಲ್ಲಿರುವ ಅರ್ಹ ಬಡವರನ್ನು ಗುರುತಿಸಿ ಸರಿ ಸುಮಾರು ಆರು ಸಾವಿರಕ್ಕೂ ಹೆಚ್ಚು ವಸತಿ ಮತ್ತು ನಿವೇಶನವನ್ನು ನೀಡಲಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಶಾಸಕ ಸಿ.ಎಸ್.ನಿರಂಜನಕುಮಾರ್ ಮಾತನಾಡಿ, ಪ್ರಧಾನ ಮಂತ್ರಿ ನರೇಂದ್ರಮೋದಿ ದೂರದೃಷ್ಠಿಯ ಫಲವಾಗಿ ಸ್ವಚ್ಛತಾ ಅಭಿಯಾನ ನಡೆದಿದೆ. ಈ ಮೂಲಕ ಪ್ರತಿಯೊಂದು ಮನೆಯಲ್ಲೂ ಶೌಚಾಲಯ ನಿರ್ಮಾಣಕ್ಕೆ ಆದ್ಯತೆ ನೀಡಲಾಗಿದೆ. ಹೆಣ್ಣು ಮಕ್ಕಳ ಹಿತದೃಷ್ಟಿಯಿಂದ ಬೇಟಿ ಬಚಾವೋ, ಬೇಟಿ ಪಡಾವೋ ಕಾರ್ಯಕ್ರಮ ಯಶಸ್ವಿಯಾಗಿದೆ. ಇದಲ್ಲದೆ ಅತಿ ಮುಖ್ಯವಾಗಿ ಹರ್ ಘರ್ ಜಲ್ ಮಿಷನ್ ಯೋಜನೆಯಡಿಯಲ್ಲಿ ಪ್ರತಿಯೊಂದು ಮನೆಗಳಿಗೂ ಕುಡಿಯುವ ನೀರಿನ ಸೌಕರ್ಯ ಲಭಿಸಿದೆ ಎಂದರು.

ಇದರೊಂದಿಗೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರು ಜಾರಿಗೆ ತಂದ ಭಾಗ್ಯಲಕ್ಷ್ಮೀ, ವಿದ್ಯಾರ್ಥಿಗಳಿಗೆ ಸೈಕಲ್ ವಿತರಣೆ ಇತರೆ ಕಾರ್ಯಕ್ರಮಗಳು ಶಿಕ್ಷಣ ಮಟ್ಟವನ್ನು ಹೆಚ್ಚಿಸಲು ಸಹಕಾರಿಯಾಯಿತು. ಕ್ಷೇತ್ರದಲ್ಲಿ ಬರಪೀಡಿತವಾಗಿದ್ದ ನೆಲದಲ್ಲಿ ಇಂದು ನದಿ ಮೂಲಗಳಿಂದ ಕೆರೆಗಳಿಗೆ ನೀರು ತುಂಬಿಸಿ ಫಲವತ್ತೆಯನ್ನು ಮತ್ತು ನೀರಿನ ಇಳುವರಿಯನ್ನು ಹೆಚ್ಚಿಸಲಾಗಿದೆ. ರಾಜ್ಯ ಮತ್ತು ಕೇಂದ್ರ ಸರ್ಕಾರವು ಸಾಮಾನ್ಯ ಜನರ ಪರವಾಗಿ ದೂರದೃಷ್ಟಿಯನ್ನು ಇಟ್ಟು ಕರ್ತವ್ಯ ನಿರ್ವಹಿಸುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಕೊಳ್ಳೇಗಾಲ ಶಾಸಕ ಎನ್.ಮಹೇಶ್, ಕಾಡಾ ಅಧ್ಯಕ್ಷ ನಿಜಗುಣರಾಜು, ಮಾಜಿ ಎಂಎಲ್‌ಸಿ ಪ್ರೊ.ಕೆ.ಆರ್. ಮಲ್ಲಿಕಾರ್ಜುನಪ್ಪ ಪುರಸಭೆ ಅಧ್ಯಕ್ಷ ಪಿ.ಗಿರೀಶ್, ಉಪಾಧ್ಯಕ್ಷೆ ಅಶ್ವಿನಿ, ಸದಸ್ಯ ಕಿರಣ್‌ಗೌಡ, ಮುಖಂಡರಾದ ಕೊಡಸೋಗೆ ಶಿವಬಸಪ್ಪ, ನಾಗರಾಜಪ್ಪ, ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಸೇರಿದಂತೆ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರು, ರಾಜಕೀಯ ಮುಖಂಡರು ಮತ್ತು ಫಲಾನುಭವಿಗಳು ಭಾಗವಹಿಸಿದ್ದರು.

ಒಂದು ಮತದಿಂದ ಸೋತ ಎಆರ್‌ಕೆಯನ್ನು ಲಕ್ಷ ಮತಗಳ ಅಂತರದಿಂದ ಗೆಲ್ಲಿಸಿ

ಬೃಹತ್ ಉದ್ಯೋಗ ಮೇಳದಲ್ಲಿ ವಾಟಾಳು ಮಠದ ಶ್ರೀಗಳ ಕರೆ



ಕೊಳ್ಳೇಗಾಲ, ಮಾ.26– ಸಂತೇಮರಹಳ್ಳಿ ಕ್ಷೇತ್ರದ ಚುನಾವಣೆಯಲ್ಲಿ ಒಂದೇ ಒಂದು ಮತದ ಅಂತರದಿಂದ ಸೋಲನುಭವಿಸಿ ನೊಂದಿರುವ ಮಾಜಿ ಶಾಸಕ ಕೃಷ್ಣಮೂರ್ತಿ ಅವರು ಉತ್ತಮ ವ್ಯಕ್ತಿತ್ವ ಹೊಂದಿರುವ ರಾಜಕಾರಣಿ, ಅವರನ್ನು ಈ ಬಾರಿ ಮತದಾರರು ಒಂದು ಲಕ್ಷ ಮತಗಳ ಅಂತರದಿಂದ ಗೆಲ್ಲಿಸಿ ಆ ನೋವನ್ನು ಮರೆಸುವ ಕೆಲಸವನ್ನು ಎಲ್ಲರೂ ಕೂಡಿ ಮಾಡಬೇಕಿದೆ ಎಂದು ವಾಟಾಳು ಮಠಾಧ್ಯಕ್ಷರಾದ ಡಾ. ಸಿದ್ದಲಿಂಗ ಶಿವಾಚಾರ್ಯಸ್ವಾಮೀಜಿ ಕರೆ ನೀಡಿದ್ದಾರೆ.

ಕೊಳ್ಳೇಗಾಲದ ನ್ಯಾಷನಲ್ ಶಾಲಾ ಆವರಣದಲ್ಲಿ ಬಿ.ರಾಚಯ್ಯ ಪ್ರತಿಷ್ಠಾನದ ವತಿಯಿಂದ ಆಯೋಜಿಸಲಾಗಿದ್ದ ಬೃಹತ್ ಉದ್ಯೋಗ ಮೇಳದ ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿ ಮಾತನಾಡಿದ ಅವರು, ಯಾರಿಗೂ ಸಹಾ ಒಂದು ಮತದ ಸೋಲಿನ ನೋವು ಉಂಟಾಗಬಾರದು. ಹಿಂದೊಮ್ಮೆ 1 ಮತದಿಂದ ಗೆಲುವು ಕಂಡಿದ್ದ ಧ್ರುವನಾರಾಯಣ್ ಅವರೇ ನಾನು 1 ಮತದಿಂದ ಗೆದ್ದಿದ್ದೇನೆ, ಆದರೆ ಕೃಷ್ಣಮೂರ್ತಿಯವರು 1 ಮತದಿಂದ ಸೋತು ಎಷ್ಟು ನೋವು ಅನುಭವಿಸಿರಬಹುದು ಎಂದು ತಾವೇ ನೊಂದು ನನ್ನ ಬಳಿ ಹೇಳಿಕೊಂಡಿದ್ದರು ಎಂದರು.

ಅವರಿಗೆ ಒಂದು ಮತ ಸೋಲಾಗಿದ್ದರೂ ಸಹಾ ಧೃತಿಗೆಡದೆ ಜನ ಸೇವೆಯಲ್ಲಿ ನಿರತರಾಗಿದ್ದಾರೆ. ಹಾಗಾಗಿ ಅವರಿಗೆ ಆ ಸೋಲಿನ ನೋವು ಮರೆಸುವ ನಿಟ್ಟಿನಲ್ಲಿ 1 ಲಕ್ಷದ ಮತದ ಅಂತರದಿಂದ ಗೆಲ್ಲಿಸಿ ಎಂದರು. ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿದ ಹನೂರು ಶಾಸಕ ಆರ್. ನರೇಂದ್ರ ಮಾತನಾಡಿ, ದೇಶಾದ್ಯಂತ ನಿರುದ್ಯೋಗ ಸಮಸ್ಯೆ ತಾಂಡವವಾಡುತ್ತಿದೆ. ನಾವು ಅಧಿಕಾರಕ್ಕೆ ಬಂದರೆ ನಿರುದ್ಯೋಗ ಸಮಸ್ಯೆ ಇಲ್ಲದಂತೆ ಮಾಡುವುದಾಗಿ ಭರವಸೆ ಇತ್ತವರು ಈಗ ಸದ್ದಿಲ್ಲದಂತಾಗಿದ್ದಾರೆ ಎಂದು ಟೀಕಿಸಿದರು.

ಮಾಜಿ ಶಾಸಕ ಕೃಷ್ಣಮೂರ್ತಿ ಮಾತನಾಡಿ, ರಾಚಯ್ಯ ಪ್ರತಿಷ್ಠಾನ ಕಳೆದ 22 ವರ್ಷಗಳಿಂದಲೂ ನಾನಾ ಜನಪರ ಸೇವಾ ಕೈಂಕರ್ಯಗಳನ್ನು ಹಮ್ಮಿಕೊಳ್ಳುತ್ತಾ ಬಂದಿದ್ದು, ಬೆಂಗಳೂರು, ಮೈಸೂರು, ಚಾ.ನಗರ ಜಿಲ್ಲಾದ್ಯಂತ ಉದ್ಯೋಗ ಮೇಳ, ಆರೋಗ್ಯ ತಪಾಸಣಾ ಶಿಬಿರ, ಪ್ರತಿಭಾ ಪುರಸ್ಕಾರ, ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ವಿತರಣೆ ಸೇರಿದಂತೆ ನಾನಾ ಕಾರ್ಯಕ್ರಮ ನಡೆಸುತ್ತಾ ಬಂದಿದ್ದು, ಇದೇ ಮೊದಲ ಬಾರಿಗೆ ಕೊಳ್ಳೇಗಾಲದಲ್ಲಿ ಉದ್ಯೋಗ ಮೇಳ ಆಯೋಜಿಸಲಾಗಿದೆ. ಸ್ವಾಭಿಮಾನದ ಬದುಕು ಕಲ್ಪಿಸಲು ಇಂತಹ ಉದ್ಯೋಗ ಮೇಳಗಳು ಮಹತ್ತರ ಪಾತ್ರ ವಹಿಸಲಿವೆ ಎಂದರು.

ಸರ್ಕಾರ ಉದ್ಯೋಗ ಸೃಷ್ಟಿಯಲ್ಲಿ ವಿಫಲವಾಗಿದೆ. ಬ್ಯಾಕ್‌ಲಾಗ್ ಇತರೆ ಖಾಲಿ ಉದ್ಯೋಗಗಳ ಭರ್ತಿ ಮಾಡಲು ಮೀನಾ–ಮೇಷ ಎಣಿಸುತ್ತಿದೆ ಎಂದು ಆರೋಪಿಸಿದರು. ಈ ಸಂದರ್ಭದಲ್ಲಿ ಶಾಸಕ ಎಸ್.ಜಯಣ್ಣ ಮಾತನಾಡಿದರು. ಕ್ರೂಸ್ ಕಾರ್ಪ್ ಕಂಪನಿಯ ಮುಖ್ಯಸ್ಥ ವೆಂಕಟೇಶಮೂರ್ತಿ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಮರಿಸ್ವಾಮಿ, ಜಿಪಂನ ಮಾಜಿ ಸದಸ್ಯರುಗಳಾದ ಶಿವಕುಮಾರ್, ಯೋಗೀಶ್, ಕೊಪ್ಪಾಳಿ ನಾಯಕ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಟೇಶ್, ನಗರಸಭಾಧ್ಯಕ್ಷೆ ರೇಖಾ ರಮೇಶ್, ಉಪಾಧ್ಯಕ್ಷೆ ಸುಶೀಲ, ಚಾಮುಲ್ ನಿರ್ದೇಶಕ ಮಧುವನಹಳ್ಳಿ ನಂಜುಂಡಸ್ವಾಮಿ, ಅಣಗಳ್ಳಿ ಬಸವರಾಜು, ಬಸ್ತಿಪುರ ರವಿಕುಮಾರ್, ಜಿ.ಎನ್. ಲೋಕೇಶ್, ಸಿಗ್ಬತ್ ಉಲ್ಲಾ, ಶ್ರೀವರ್ಧನ್, ಚಿನ್ನಸ್ವಾಮಿ ಮಾಳಿಗೆ, ಚೇತನ್, ಮಹದೇವಶೆಟ್ಟಿ, ಅನ್ವರ್, ಅಕ್ಮಲ್ ಪಾಶಾ, ಶಾಂತರಾಜು, ಸುಮ ಸುಬ್ಬಣ್ಣ, ರಾಘವೇಂದ್ರ, ಹೊಂಗನೂರು ಚೇತನ್, ಮಂಜುನಾಥ, ಮಹದೇವಪ್ಪ, ಗುರುಸ್ವಾಮಿ, ಮಹೇಶ ಇನ್ನಿತರು ಇದ್ದರು.

ಅಕ್ರಮ ಪಡಿತರ ಅಕ್ಕಿ ಸಾಗಣೆ: ಪೊಲೀಸ್ ದಾಳಿ

12,652 ಕೆ.ಜಿ ಪಡಿತರ ಅಕ್ಕಿ ವಶ, ಮೂರು ವಾಹನ ಜಪ್ತಿ

ಯಳಂದೂರು, ಮಾ.26– ಅಕ್ರಮವಾಗಿ ಪಡಿತರ ಅಕ್ಕಿ ಸಾಗಿಸುತ್ತಿದ್ದ ಸಂದರ್ಭದಲ್ಲಿ ಪೊಲೀಸರು ದಾಳಿ ನಡೆಸಿ 12,652 ಟನ್ ಅಕ್ಕಿಯನ್ನು ವಶಪಡಿಸಿಕೊಂಡಿದ್ದಾರೆ.



ಯಳಂದೂರು ಪಟ್ಟಣದ ಪೊಲೀಸ್ ಠಾಣೆ ಪಿಎಸ್‌ಐ ಚಂದ್ರಹಾಸ ನಾಯಕ್ ಮತ್ತು ಪೊಲೀಸ್ ತಂಡ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹೊ ಮತ್ತು ಕೊಳ್ಳೇಗಾಲ ಡಿವೈಎಸ್‌ಪಿ ಸೋಮೇಗೌಡ ಹಾಗೂ ಯಳಂದೂರು ಸಿಪಿಐ ಶಿವಕುಮಾರ್ ಮುಧೋಳ್ ಅವರ ಮಾರ್ಗದರ್ಶನದಲ್ಲಿ ಶನಿವಾರ ಬೆಳಿಗ್ಗೆ ನಾಲ್ಕು ಗಂಟೆ ಸಮಯದಲ್ಲಿ ಖಚಿತ ಮಾಹಿತಿ ಮೇರೆಗೆ ಪಡಿತರ ಅಕ್ಕಿ ಅಕ್ರಮವಾಗಿ ದಾಸ್ತಾನು ಮಾಡಲಾಗಿದ್ದ ಪಡಿತರ ಅಕ್ಕಿಯನ್ನು ಬೇರೆ ಕಡೆ ಸಾಗಿಸಲು ಮೂರು ಟೆಂಪೋಗಳಿಗೆ ತುಂಬುತ್ತಿದ್ದ ಸಂದರ್ಭದಲ್ಲಿ ದಾಳಿ ನಡೆಸಿ 12,652 ಸಾವಿರ ಕೆಜಿ ಅಕ್ಕಿ ವಶಪಡಿಸಿಕೊಂಡಿದೆ.

ಪೊಲೀಸರು ದಾಳಿ ಮಾಡುತ್ತಿದ್ದಂತೆ ಮೂರು ಜನ ವಾಹನ ಚಾಲಕರು ತಲೆಮರೆಸಿಕೊಂಡಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಅಕ್ಕಿ ದಾಸ್ತಾನು ಮಾಡಿದ್ದ ಮಾಲೀಕನ ಹುಡುಕಾಟದಲ್ಲಿ ಪೊಲೀಸರು ತನಿಖೆ ಮುಂದುವರಿಸಿದ್ದಾರೆ. ಅಕ್ಕಿ ಸಾಗಣೆ ಮಾಡಲು ಬಳಸಿಕೊಂಡಿದ್ದ ಈಚರ್, ಮಾರುತಿ ಓಮ್ನಿ, ಅಶೋಕ್ ಲೈಲ್ಯಾಂಡ್ ವಾಹನಗಳನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ. ದಾಳಿ ಸಂದರ್ಭ ದಲ್ಲಿ ದಫೇದಾರ್ ನಾಗೇಂದ್ರ, ಬಂಡಳ್ಳಿ ಮಹೇಶ್, ಶಂಕರಮೂರ್ತಿ, ರಂಗಸ್ವಾಮಿ, ದಾಳಿ ಸಂದರ್ಭದಲ್ಲಿ ಭಾಗವಹಿಸಿ ಕಾರ್ಯಾಚರಣೆ ಯಶಸ್ವಿಗೊಳಿಸಿದ್ದಾರೆ.

ಆನೆಮಡುವಿನ ಕೆರೆಗೆ ನೀರು ತುಂಬಿಸುವ ಕಾಮಗಾರಿಗೆ ಜಿಲ್ಲಾ ಉಸ್ತುವಾರಿ ಸಚಿವರಿಂದ ಚಾಲನೆ



ಚಾಮರಾಜನಗರ, ಮಾ.26– ತಾಲೂಕಿನ ಉಡಿಗಾಲ ಗ್ರಾಮದಲ್ಲಿ ಆನೆಮಡುವಿನ ಕೆರೆಗೆ ನೀರು ತುಂಬಿಸುವ ಕಾಮಗಾರಿಗೆ ವಸತಿ, ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ವಿ. ಸೋಮಣ್ಣ ಅವರು ಇಂದು ಭೂಮಿಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲೆ ಅಭಿವೃದ್ಧಿಗೆ ಮೂಲ ಸೌಲಭ್ಯಗಳು ಅಗತ್ಯವಾಗಿವೆ. ಈ ನಿಟ್ಟಿನಲ್ಲಿ ಕ್ರಮ ವಹಿಸಿದ್ದು, ಇಂದು ಈ ಭಾಗದ ಜನರ ಬೇಡಿಕೆಯಂತೆ ಆನೆಮಡುವಿನ ಕೆರೆಗೆ ನೀರು ಹರಿಸುವ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಇದು ಒಳ್ಳೆಯ ಕೆಲಸ. ಇದರ ಸದುಪಯೋಗ ಮಾಡಿಕೊಳ್ಳಿ ಎಂದರು.

ಮುಖ್ಯಮಂತ್ರಿಗಳು ಎಲ್ಲಾ ವರ್ಗದವರಿಗೂ ಸಮಾನತೆ ಕೊಟ್ಟು ಎಲ್ಲರ ಮೆಚ್ಚುಗೆ ಗಳಿಸಿದ್ದಾರೆ. ಜಿಲ್ಲೆಯ ವಿವಿಧ ಗ್ರಾಮಗಳ ಮೂಲ ಸೌಕರ್ಯ ಅಭಿವೃದ್ಧಿಗೆ 26.5 ಕೋಟಿ ರೂ. ವೆಚ್ಚದಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲಾಗುತ್ತಿದೆ. ಜಿಲ್ಲೆಯಲ್ಲಿ 100 ರಿಂದ 150 ಎಕರೆ ಜಮೀನು ಲಭ್ಯವಾದರೆ 10 ಸಾವಿರ ಎಕರೆಗೆ ನೀರಾವರಿ ಸೌಲಭ್ಯಕ್ಕೆ ಹೊಸದಾಗಿ ಕೆರೆ ನಿರ್ಮಾಣ ಮಾಡಲು ಸಾಧ್ಯವಾಗುತ್ತದೆ ಎಂದರು.

ಕಾವೇರಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜಿ. ನಿಜಗುಣರಾಜು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಎಸ್. ಪೂವಿತಾ, ವಿಧಾನಪರಿಷತ್ತಿನ ಮಾಜಿ ಸದಸ್ಯ ಪ್ರೊ. ಕೆ.ಆರ್. ಮಲ್ಲಿಕಾರ್ಜುನಪ್ಪ, ಮುಖಂಡರಾದ ಎ.ಆರ್. ಬಾಲರಾಜು, ಪ್ರಭುಸ್ವಾಮಿ, ಮಲ್ಲಿಕಾರ್ಜುನಸ್ವಾಮಿ, ನಾಗಣ್ಣ, ರಾಮಚಂದ್ರ, ಶಿವಬಸಪ್ಪ, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಯರಗನಹಳ್ಳಿ ಗ್ರಾಮ ಪಂಚಾಯತಿಗೆ 5ನೇ ಬಾರಿ ಗಾಂಧಿ ಗ್ರಾಮ ಪುರಸ್ಕಾರ



ಚಾಮರಾಜನಗರ, ಮಾ.26– ತಾಲೂಕಿನ ಯರಗನಹಳ್ಳಿ ಗ್ರಾಮ ಪಂಚಾಯತಿಗೆ ಐದನೇ ಬಾರಿ ಗಾಂಧಿ ಗ್ರಾಮ ಪುರಸ್ಕಾರ ಲಭಿಸಿದೆ.

ಶುಕ್ರವಾರ ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವ ಕೋಟಾ ಶ್ರೀನಿವಾಸ ಪೂಜಾರಿ, ವಿಧಾನಪರಿಷತ್ ಸದಸ್ಯ ಅರುಣ್ ಅವರ ನೇತೃತ್ವದಲ್ಲಿ ಯರಗನಹಳ್ಳಿಯ ಗ್ರಾಪಂ ಅಧ್ಯಕ್ಷೆ ಮೀನಾಕ್ಷಿ, ಉಪಾಧ್ಯಕ್ಷೆ ರತ್ನಮ್ಮ, ಸದಸ್ಯರಾದ ಮಹೇಂದ್ರಕುಮಾರ್, ನಾಗಮಲ್ಲಶೆಟ್ಟಿ, ಸೋಮಶೇಖರ್, ಮುಖಂಡ ಬಂಗಾರನಾಯಕ, ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಕೆ.ವಿ.ಉಮೇಶ್ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ.

ಭಾರತವನ್ನು ಮುನ್ನಡೆಸುವಲ್ಲಿ 'ನಾರಿ ಶಕ್ತಿ'ಯ ಪಾತ್ರ ಮಹತ್ತರವಾಗಿದೆ

ಮನ್ ಕಿ ಬಾತ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ



ನವದೆಹಲಿ, ಮಾ.26– ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಭಾನುವಾರ 99ನೇ ಆವೃತ್ತಿಯ 'ಮನ್ ಕಿ ಬಾತ್' ರೇಡಿಯೋ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು. ತಮ್ಮ ಮಾಸಿಕ ಕಾರ್ಯಕ್ರಮದ ಮೂಲಕ ರಾಷ್ಟ್ರವನ್ನು ಉದ್ದೇಶಿಸಿ ಭಾಷಣ ಮಾಡಿರುವ ಅವರು, ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಭಾರತದ ಯಶಸ್ಸು, ಮಹಿಳಾ ಸಬಲೀಕರಣ, ಅಂಗದಾನ ಜಾಗೃತಿ, ಕೋವಿಡ್ –19 ಸಾಂಕ್ರಾಮಿಕ ಮತ್ತು ಇತರ ಹಲವು ಪ್ರಮುಖ ವಿಷಯಗಳ ಕುರಿತು ಪ್ರಸ್ತಾಪಿಸಿದ್ದಾರೆ.

ದೇಶದ ಹೆಣ್ಣು ಮಕ್ಕಳು ಮೂರು ಸಶಸ್ತ್ರ ಪಡೆಗಳಲ್ಲಿ ತಮ್ಮ ಶೌರ್ಯದ ಪತಾಕೆಯನ್ನು ಹಾರಿಸುತ್ತಿದ್ದಾರೆ ಎಂದರು. ಗ್ರೂಪ್ ಕ್ಯಾಪ್ಟನ್ ಶಾಲಿಜಾ ಧಾಮಿ ಅವರು ಯುದ್ಧ ಘಟಕದಲ್ಲಿ ಕಮಾಂಡ್ ನೇಮಕಾತಿಯನ್ನು ಪಡೆದ ಮೊದಲ ಮಹಿಳಾ ವಾಯುಪಡೆ ಅಧಿಕಾರಿಯಾಗಿದ್ದಾರೆ. ಆಕೆಗೆ ಸುಮಾರು 3,000 ಗಂಟೆಗಳ ಹಾರಾಟದ ಅನುಭವವಿದೆ.


ಅದೇ ರೀತಿ ಭಾರತೀಯ ಸೇನೆಯ ಕೆಚ್ಚೆದೆಯ ಕ್ಯಾಪ್ಟನ್ ಶಿವ ಚೌಹಾಣ್ ಅವರು ಸಿಯಾಚಿನ್‌ನಲ್ಲಿ ನೇಮಕಗೊಂಡ ಮೊದಲ ಮಹಿಳಾ ಅಧಿಕಾರಿಯಾಗಿದ್ದಾರೆ. ತಾಪಮಾನವು ಮೈನಸ್ ಅರವತ್ತು (–60) ಡಿಗ್ರಿಗಳಿಗೆ ಇಳಿಯುವ ಸಿಯಾಚಿನ್‌ನಲ್ಲಿ ಶಿವ ಮೂರು ತಿಂಗಳ ಚೌಹಾಣ್ ಮೂರು ತಿಂಗಳ ಕಾಲ ನೆಲೆಸಿದ್ದರು ಎಂದರು.

ಅಂಗಾಂಗ ದಾನವು ಯಾರಿಗಾದರೂ ಜೀವ ನೀಡುವ ಅತ್ಯಂತ ಪ್ರಮುಖ ಸಾಧನವಾಗಿದೆ. ವ್ಯಕ್ತಿಯು ಮರಣದ ನಂತರ ಒಬ್ಬರ ದೇಹವನ್ನು ದಾನ ಮಾಡಿದಾಗ, ಅದು ಎಂಟರಿಂದ ಒಂಬತ್ತು ಜನರಿಗೆ ಹೊಸ ಜೀವನವನ್ನು ಪಡೆಯುವ ಸಾಧ್ಯತೆಯನ್ನು ಸೃಷ್ಟಿಸುತ್ತದೆ ಎಂದು ಹೇಳಲಾಗುತ್ತದೆ. ಇಂದು ದೇಶದಲ್ಲಿ ಅಂಗಾಂಗ ದಾನದ ಬಗ್ಗೆ ಜಾಗೃತಿ ಮೂಡುತ್ತಿರುವುದು ಸಂತಸದ ಸಂಗತಿ, 2013ರಲ್ಲಿ ನಮ್ಮ ದೇಶದಲ್ಲಿ ಅಂಗಾಂಗ ದಾನದ ಸಂಖ್ಯೆ ಐದು ಸಾವಿರಕ್ಕಿಂತ ಕಡಿಮೆಯಿತ್ತು. 2022ರಲ್ಲಿ ಈ ಸಂಖ್ಯೆ ಹದಿನೈದು ಸಾವಿರಕ್ಕೂ ಹೆಚ್ಚಾಗಿರುವುದು ಸಂತಸದ ಸಂಗತಿ ಎಂದು ಪ್ರಧಾನಿ ಹೇಳಿದ್ದಾರೆ.

ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಭಾರತದ ಅದ್ಭುತ ಯಶಸ್ಸಿನ ಬಗ್ಗೆ ಪ್ರಪಂಚದಾದ್ಯಂತ ಜನರು ಮಾತನಾಡುತ್ತಾರೆ ಎಂದು ಪ್ರಧಾನಿ ಹೇಳಿದರು. ಸೂರ್ಯನ ಶಕ್ತಿಯ ಬಗ್ಗೆ ನಮಗಿರುವ ವೈಜ್ಞಾನಿಕ ತಿಳುವಳಿಕೆ, ಸೂರ್ಯನನ್ನು ಆರಾಧಿಸುವ ಸಂಪ್ರದಾಯಗಳು ಇತರ ಸ್ಥಳಗಳಲ್ಲಿ ಅಪರೂಪವಾಗಿ ಕಂಡುಬರುತ್ತವೆ. 'ಸಬ್ಕಾ ಪ್ರಯಾಸ್'ನ ಈ ಮನೋಭಾವವು ಇಂದು ಭಾರತದ ಸೌರ ಮಿಷನ್ ನ್ನು ಮುಂದಕ್ಕೆ ಕೊಂಡೊಯ್ಯುತ್ತಿದೆ. ಮನೆಯಲ್ಲಿ ದಿನದ ಅಗತ್ಯಗಳಿಗಾಗಿ ನವೀಕರಣ ಇಂಧನವನ್ನು ಶೇಕಡಾ 100ರಷ್ಟು ಶುದ್ಧ ಇಂಧನವನ್ನು ಬಳಸುವ ಜಿಲ್ಲೆ ದಿಯು ಆಗಿದೆ ಎಂದರು.

ಮುಸ್ಲಿಮರಿಗೆ ಶೇ.4 ಮೀಸಲಾತಿ ರದ್ದತಿಗೆ ಅಮಿತ್ ಶಾ ಸಮರ್ಥನೆ

ಬೀದರ್, ಮಾ.26– ಮುಸ್ಲಿಮರಿಗೆ ಪ್ರವರ್ಗ 2ಬಿ ಅಡಿಯಲ್ಲಿದ್ದ ಶೇ 4ರಷ್ಟು ಮೀಸಲಾತಿಯನ್ನು ರದ್ದುಪಡಿಸುವ ಕರ್ನಾಟಕ ಸರ್ಕಾರದ ನಿರ್ಧಾರವನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಭಾನುವಾರ ಶ್ಲಾಘಿಸಿದ್ದು, ಧಾರ್ಮಿಕ ಮೀಸಲಾತಿಯು ಸಾಂವಿಧಾನಿಕವಾಗಿ ಅಮಾನ್ಯವಾಗಿದೆ ಎಂದು ಹೇಳಿದ್ದಾರೆ.



ಬೀದರ್ ಜಿಲ್ಲೆಯ ಗೋರಟಾ ಗ್ರಾಮ ಮತ್ತು ರಾಯಚೂರು ಜಿಲ್ಲೆಯ ಗಬ್ಬೂರಿನಲ್ಲಿ ಸಾರ್ವಜನಿಕ ಸಭೆಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ಕಾಂಗ್ರೆಸ್ ತನ್ನ ವೋಟ್ ಬ್ಯಾಂಕ್ ರಾಜಕಾರಣಕ್ಕಾಗಿ ಮುಸ್ಲಿಮರಿಗೆ ಶೇ.4ರಷ್ಟು ಮೀಸಲಾತಿಯನ್ನು ಜಾರಿಗೆ ತಂದಿದೆ ಎಂದು ಟೀಕಿಸಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರವೂ ಹೊಸ ಒಳ ಮೀಸಲಾತಿ ಜಾರಿಗೆ ತರುವ ಮೂಲಕ ಪರಿಶಿಷ್ಟ ಜಾತಿಗೆ ಆಗಿರುವ ಅನ್ಯಾಯವನ್ನು ದೂರ ಮಾಡಲು ಪ್ರಯತ್ನಿಸಿದೆ ಎಂದು ಗಮನ ಸೆಳೆದರು.

ಸಂಪೂರ್ಣ 2B ಪ್ರವರ್ಗವು ಮುಸ್ಲಿಮರಿಗೆ ಮಾತ್ರ ಇತ್ತು. ಸಂವಿಧಾನಾತ್ಮಕವಾಗಿ ಸಮರ್ಥನೀಯವಲ್ಲ ಎಂದು ಬಿಜೆಪಿ ಸರ್ಕಾರವು ಅದನ್ನು ರದ್ದುಗೊಳಿಸಿತು ಮತ್ತು ರಾಜ್ಯದ ಎರಡು ಪ್ರಬಲ ಸಮುದಾಯಗಳಾದ ಒಕ್ಕಲಿಗರಿಗೆ 2C ಮತ್ತು ವೀರಶೈವ ಲಿಂಗಾಯಿತರಿಗೆ 2ಡಿಯಲ್ಲಿ ಸಮಾನವಾಗಿ ಶೇ 4ರಷ್ಟು ಮೀಸಲಾತಿಯನ್ನು ಹಂಚಿತು ಎಂದರು.

ಇದರೊಂದಿಗೆ, 2B ಅನಗತ್ಯವಾಯಿತು. ಆದರೆ, ಒಕ್ಕಲಿಗರ ಮೀಸಲಾತಿ ಶೇ 4 ರಿಂದ 6ಕ್ಕೆ ಮತ್ತು ಲಿಂಗಾಯಿತರ ಮೀಸಲಾತಿ ಐದು ಪ್ರತಿಶತದಿಂದ ಏಳು ಪ್ರತಿಶತಕ್ಕೆ ಏರಿತು. ಬಿಜೆಪಿಗೆ ಎಂದಿಗೂ ತುಷ್ಟೀಕರಣದಲ್ಲಿ ನಂಬಿಕೆ ಇಲ್ಲ. ಹಾಗಾಗಿ, ಮೀಸಲಾತಿಯನ್ನು ಬದಲಾಯಿಸಲು ನಿರ್ಧರಿಸಿದೆ ಎಂದು ಶಾ ಈ ನಿರ್ಧಾರವನ್ನು ಬಲವಾಗಿ ಸಮರ್ಥಿಸಿಕೊಂಡರು.

ಬಿಜೆಪಿ ಅಲ್ಪಸಂಖ್ಯಾತರಿಗೆ ನೀಡಲಾಗಿದ್ದ ಶೇ 4ರಷ್ಟು ಮೀಸಲಾತಿಯನ್ನು ರದ್ದುಪಡಿಸಿತು ಮತ್ತು ಒಕ್ಕಲಿಗರಿಗೆ ಎರಡು ಪ್ರತಿಶತ ಮತ್ತು ಲಿಂಗಾಯತರಿಗೆ ಎರಡು ಪ್ರತಿಶತವನ್ನು ನೀಡಿದೆ. ಅಲ್ಪಸಂಖ್ಯಾತರ ಮೀಸಲಾತಿಯು ಸಾಂವಿಧಾನಿಕವಾಗಿ ಮಾನ್ಯವಾಗಿಲ್ಲ. ಧರ್ಮದ ಆಧಾರದ ಮೇಲೆ ಮೀಸಲಾತಿ ನೀಡಲು ಸಂವಿಧಾನದಲ್ಲಿ ಅವಕಾಶವಿಲ್ಲ. ಈ ಕಾಂಗ್ರೆಸ್ ಸರ್ಕಾರ ತನ್ನ ತುಷ್ಟೀಕರಣ ರಾಜಕಾರಣಕ್ಕಾಗಿ ಇದನ್ನು ಮಾಡಿದೆ ಮತ್ತು ಅಲ್ಪಸಂಖ್ಯಾತರಿಗೆ ಮೀಸಲಾತಿ ನೀಡಿದೆ ಎಂದು ಅವರು ಹೇಳಿದರು.



ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ಉಪಾಧ್ಯಕ್ಷ ಯೋಗೇಶ್ ಹುಟ್ಟುಹಬ್ಬದ ಅಂಗವಾಗಿ ಅವರನ್ನು ಬಡವರ ಬಂಧು ಕನ್ನಡ ಯುವಕರ ಸಂಘದಿಂದ ಅಭಿನಂದಿಸಿ, ಶುಭಾಷಂಯ ಕೋರಲಾಯಿತು. ಈ ವೇಳೆ ಕಾಂಗ್ರೆಸ್ ಮುಖಂಡ ಕೆ. ಹರೀಶ್‌ಗೌಡ, ನಗರಪಾಲಿಕೆ ಸದಸ್ಯ ಗೋಪಿ, ಗಿರೀಶ್, ಪಡುವಾರಹಳ್ಳಿ ಪಾಪಣ್ಣ, ಸುಣ್ಣದ ಕೇರಿ ರಮೇಶ್, ಕೃಷ್ಣ, ಅನಂತು, ಜಗ್ಗ, ಶಿವು, ಲಾಯರ್ ಲೋಕೇಶ್, ಸುರೇಂದ್ರ, ಮಾದೇವ್ ಸೇರಿದಂತೆ ಇನ್ನಿತರರಿದ್ದರು.

ಜಯಪುರದ ಬಳಿ ಮರಿಗಳೊಂದಿಗೆ ತಾಯಿ ಹುಲಿ ಪ್ರತ್ಯಕ್ಷ: ಗ್ರಾಮಸ್ಥರಲ್ಲಿ ಆತಂಕ

ಮೈಸೂರು, ಮಾ.26– ಮೈಸೂರು ತಾಲೂಕು ಜಯಪುರದ ಅರಸಿನಕೆರೆ ಗ್ರಾಮಕ್ಕೆ ಹೊಂದಿಕೊಂಡಂತಿರುವ ಮೀಸಲು ಅರಣ್ಯ ಪ್ರದೇಶದಲ್ಲಿ ತಾಯಿ ಹುಲಿ ಮರಿಯ ಜೊತೆಗೆ ಕಾಣಿಸಿಕೊಂಡಿದ್ದು, ಸುತ್ತಮುತ್ತಲ ಗ್ರಾಮಸ್ಥರಲ್ಲಿ ಆತಂಕ ಸೃಷ್ಟಿಸಿದೆ. ಅರಸಿನಕೆರೆ ಗ್ರಾಮದ ಸದಾಶಿವ ಅವರು ಭಾನುವಾರ ರಾತ್ರಿ 9.30ರ ವೇಳೆಯಲ್ಲಿ ಜಯಪುರದಿಂದ ತಮ್ಮ ಗ್ರಾಮಕ್ಕೆ ಕಾರಿನಲ್ಲಿ ಹೋಗುವಾಗ ಪೊದೆಯೊಳಗೆ ತಾಯಿ ಹುಲಿ ತನ್ನ ಮೂರು ಮರಿಯ ಜೊತೆಗೆ ಕಾಣಿಸಿಕೊಂಡಿದೆ ತಕ್ಷಣ ಅವರು ತಮ್ಮ ಮೊಬೈಲ್ ಮೂಲಕ ದೃಶ್ಯವನ್ನು ಕ್ಲಿಕಿಸಿಕೊಂಡಿದ್ದಾರೆ.

ವಿಶ್ವ ಮಹಿಳಾ ಬಾಕ್ಸಿಂಗ್‌ನಲ್ಲಿ ಭಾರತದ ನಿಖತ್, ಲವ್ಲಿನಾ ಚಿನ್ನದ ಪಂಚ್

ನವದೆಹಲಿ, ಮಾ.26– ಮಹಿಳೆಯರ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ





ನಿಖತ್ ಜರೀನ್, ಲವ್ಲಿನಾ ಬೊರ್ಗೊಹೈನ್ ಭಾರತಕ್ಕೆ ಚಿನ್ನದ ಪದಕ ತಂದು ಕೊಟ್ಟಿದ್ದಾರೆ. ನವದೆಹಲಿಯಲ್ಲಿ ನಡೆದ ಮಹಿಳೆಯರ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ 52 ಕೆ.ಜಿ. ವಿಭಾಗದಲ್ಲಿ ವಿಯೆಟ್ನಾಂನ ಗುಯೆನ್ ಥಿ ಟಾಮ್ ವಿರುದ್ಧ ಭಾರತದ ನಿಖತ್ ಜರೀನ್ 0–5 ಅಂತರದ ಜಯ ಸಾಧಿಸಿದರು. ಆ ಮೂಲಕ ಎರಡನೇ ಬಾರಿಗೆ ಚಾಂಪಿಯನ್ ಎನಿಸಿದರು.

75 ಕೆಜಿ ವಿಭಾಗದಲ್ಲಿ ಲವ್ಲಿನಾ ಅವರು ಆಸ್ಟ್ರೇಲಿಯಾದ ಕೈಟ್ಲಿನ್ ಪಾರ್ಕರ್ ವಿರುದ್ಧ 5–2 ಅಂತರದಲ್ಲಿ ಗೆದ್ದು ಬೀಗಿದರು. ಮೇರಿ ಕೋಮ್‌ಅವರನ್ನು ಹೊರತುಪಡಿಸಿ ಒಂದಕ್ಕಿಂತ ಹೆಚ್ಚು ಸಲ ಚಾಂಪಿಯನ್‌ಆದ ಬಾಕ್ಸರ್‌ಎಂಬ ಖ್ಯಾತಿಯನ್ನು ನಿಖತ್‌ಗಳಿಸಿದ್ದಾರೆ. ಈ ಹಿಂದೆ ಮೇರಿ ಕೋಮ್‌ಅವರು ಆರು ಬಾರಿ ವಿಶ್ವ ಚಾಂಪಿಯನ್‌ಆಗಿದ್ದರು. ಸರಿತಾ ದೇವಿ (2006), ಜೆನ್ನಿ ಆರ್.ಎಲ್. (2006) ಹಾಗೂ ಲೇಖಾ ಕೆ.ಸಿ. (2006) ಅವರು ಒಂದೊಂದು ಬಾರಿ ಚಾಂಪಿಯನ್‌ಆಗಿದ್ದರು.


ನಾನು 2ನೇ ಬಾರಿಗೆ ವಿಶ್ವ ಚಾಂಪಿಯನ್ ಆದದ್ದು ಖುಷಿ ತಂದಿದೆ. ನನಗೆ ಬೆಂಬಲ ನೀಡಿದ ಎಲ್ಲರಿಗೂ ನಾನು ಆಭಾರಿಯಾಗಿದ್ದೇನೆ. ಈ ಪದಕ ನನ್ನ ದೇಶ ಭಾರತಕ್ಕೆ. ಇದು ಕಠಿಣ ಸ್ಪರ್ಧೆಯಾಗಿತ್ತು. ಆದರೆ ಕೊನೆಯಲ್ಲಿ ನಾನು ಚಿನ್ನದ ಪದಕವನ್ನು ಗೆದ್ದೆ ಎಂದು ನಿಖತ್‌ಖುಷಿ ಹಂಚಿಕೊಂಡಿದ್ದಾರೆ.

ಲೇಖಕಿ ಡಾ.ಲತಾ ಮುತ್ತಣ್ಣ ಅವರ 'ದಿ ಜೈಲ್ ಅಂಡ್ ಅದರ್ ಟೇಲ್ಸ್' ಪುಸ್ತಕ ಬಿಡುಗಡೆ

ಮೈಸೂರು,ಮಾ.26(ಪಿಎಂ)– ಮೈಸೂರು ಲಿಟರರಿ ಅಸೋಸಿಯೇಷನ್ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಖ್ಯಾತ ವೈದ್ಯೆ ಹಾಗೂ ಲೇಖಕಿ ಡಾ.ಲತಾ ಮುತ್ತಣ್ಣ ಅವರ 'ದಿ ಜೈಲ್ ಅಂಡ್ ಅದರ್ ಟೇಲ್ಸ್' ಪುಸ್ತಕ ಬಿಡುಗಡೆ ಮಾಡಲಾಯಿತು.

ಮೈಸೂರಿನ ವಿಜಯನಗರ 4ನೇ ಹಂತದ ಕಲ್ಪಕ್ಷೇತ್ರ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮೈಸೂರು ಲಿಟರರಿ ಅಸೋಸಿಯೇಷನ್ ಅಧ್ಯಕ್ಷ ಪ್ರೊ.ಕೆ.ಸಿ. ಬೆಳ್ಳಿಯಪ್ಪ ಪುಸ್ತಕ ಬಿಡುಗಡೆ ಮಾಡಿದರು.

ಬಳಿಕ ಮಾತನಾಡಿದ ಅವರು, ಡಾ.ಲತಾ ಮುತ್ತಣ್ಣ ಉತ್ತಮ ವೈದ್ಯರು. ಸಾಮಾನ್ಯವಾಗಿ ವೈದ್ಯರು ಸೃಜನಶೀಲ ಬರವಣಿಗೆಯಲ್ಲಿ ತೊಡಗಿಸಿಕೊಳ್ಳುವುದು ಅಪರೂಪ. ವೈದ್ಯರಾದ ಡಾ.ಲತಾ ಮುತ್ತಣ್ಣ ಅವರ ಎರಡು ಪುಸ್ತಕಗಳು ಈ ಹಿಂದೆಯೇ ಬಿಡುಗಡೆಗೊಂಡಿವೆ. 'ಲೋಪಮುದ್ರಾಸ್ ಡಾಟರ್–ಮೆಮೊರಿಸ್ ಆಫ್ ಎ ಕೊಡವ



ಮೈಸೂರಿನ ವಿಜಯನಗರ 4ನೇ ಹಂತದ ಕಲ್ಪಕ್ಷೇತ್ರ ಸಭಾಂಗಣದಲ್ಲಿ ಭಾನುವಾರ ಲೇಖಕಿ ಮತ್ತು ವೈದ್ಯೆ ಡಾ.ಲತಾ ಮುತ್ತಣ್ಣ ಅವರ 'ದಿ ಜೈಲ್ ಅಂಡ್ ಅದರ್ ಟೇಲ್ಸ್' ಪುಸ್ತಕವನ್ನು ಮೈಸೂರು ಲಿಟರರಿ ಅಸೋಸಿಯೇಷನ್ ಅಧ್ಯಕ್ಷ ಪ್ರೊ.ಕೆ.ಸಿ.ಬೆಳ್ಳಿಯಪ್ಪ ಬಿಡುಗಡೆ ಮಾಡಿದರು. ಕೃತಿ ಕರ್ತೃ ಡಾ.ಲತಾ ಮುತ್ತಣ್ಣ ಚಿತ್ರದಲ್ಲಿದ್ದಾರೆ.

ಲೇಡಿ (2012ರಲ್ಲಿ ಪ್ರಕಟಣೆಗೊಂಡ ಕೃತಿ)' ಮತ್ತು 'ವಾರ್–ದಿ ಅಗ್ಲಿ ಮಿಸ್ಟ್ರೆಸ್' ಎಂಬ ಅವರ ಎರಡು ಕೃತಿಗಳು ಈಗಾಗಲೇ ಹೊರಬಂದಿವೆ. ಇದೀಗ ಬಿಡುಗಡೆಗೊಂಡ 'ದಿ ಜೈಲ್ ಅಂಡ್ ಅದರ್ ಟೇಲ್ಸ್' ಅವರ ಮೂರನೇ ಕೃತಿಯಾಗಿದೆ ಎಂದು ಹೇಳಿದರು.

ನಾನು ಡಾ.ಲತಾ ಮುತ್ತಣ್ಣ ಅವರ ಮೂರು ಕೃತಿಗಳನ್ನೂ ಓದಿದ್ದೇನೆ. ಯುದ್ಧದ ಕುರಿತಾದ ಅವರ ಪುಸ್ತಕವು ಸೇನಾ ವ್ಯವಸ್ಥೆಯ ಪರಿಭಾಷೆ ಮತ್ತು ಚಟುವಟಿಕೆಗಳ ಕುರಿತು ಅತ್ಯುತ್ತಮ ನಿರೂಪಣೆ ಒಳಗೊಂಡಿದ್ದು, ವಿಭಿನ್ನತೆಯಿಂದ ಕೂಡಿದೆ. 'ದಿ ಜೈನ್ ಅಂಡ್ ಅದರ್ ಟೇಲ್ಸ್' ಪುಸ್ತಕದಲ್ಲಿ ಮೂರು ವಿಭಾಗಗಳನ್ನು ಕಾಣಬಹುದು. ಜೈಲು ಕೈದಿಗಳಿಗೆ ಚಿಕಿತ್ಸೆ ನೀಡುವ ವೈದ್ಯೆಯಾದ ಡಾ.ಲತಾ ಮುತ್ತಣ್ಣ ತಮ್ಮ ಅನುಭವಗಳನ್ನು ಇಲ್ಲಿ ಕಟ್ಟಿಕೊಟ್ಟಿದ್ದಾರೆ. ಜೊತೆಗೆ ಮಹಿಳಾ ಕೇಂದ್ರಿತ ಕಥೆಗಳು ಹಾಗೂ ಪ್ರಾಣಿಗಳ ಮೇಲಿನ ಅವರ ಪ್ರೀತಿಯ ವೈಶಿಷ್ಟ್ಯಗಳನ್ನು ಕೃತಿಯಲ್ಲಿ ಅನಾವರಣ ಮಾಡಿದ್ದಾರೆ ಎಂದು ತಿಳಿಸಿದರು.

ಅವರ ಬರವಣಿಗೆಯು ಅವರ ಅನುಭವವನ್ನು ಪ್ರತಿಬಿಂಬಿಸಿದ್ದು, ಜೈಲು ಕೈದಿಗಳು, ಪುರುಷ ಮತ್ತು ಮಹಿಳೆಯರಿಗೆ ಚಿಕಿತ್ಸೆ ನೀಡುವ ವೈದ್ಯರಾಗಿ ಮಾನವ ಸ್ವಭಾವದ ಅವರ ಅವಲೋಕನ ಅರಿವಿಗೆ ಬರಲಿದೆ. ಡಾ.ಲತಾ ಮುತ್ತಣ್ಣ ಅವರ ಬರವಣಿಗೆ ಶೈಲಿಯು ಓದುವ ಆಸಕ್ತಿ ಮೂಡಿಸುತ್ತದೆ. ಕೃತಿಯಲ್ಲಿ ಸಾಹಿತ್ಯಕ ಶೈಲಿ ಹೆಚ್ಚಿದ್ದು, ಸಾಕಷ್ಟು ರೂಪಕಗಳ ಮೂಲಕ ಸನ್ನಿವೇಶಗಳನ್ನು ಕಟ್ಟಿಕೊಟ್ಟಿದ್ದಾರೆ. ಅಲ್ಲದೆ, ಸಾದೃಶ್ಯದ ಮೂಲಕ ಪ್ರಸಂಗಗಳನ್ನು ಅನಾವರಣಗೊಳಿಸಿದ್ದಾರೆ. ಸರ್ಕಾರ ಮತ್ತು ಕಾರಾಗೃಹಗಳ ಪರಿಸ್ಥಿತಿಗಳನ್ನು ಟೀಕಿಸಲು ಸೂಕ್ಷ್ಮವಾದ ಹಾಸ್ಯವನ್ನು ಬಳಸಿರುವುದು ಸ್ಪಷ್ಟವಾಗುತ್ತದೆ ಎಂದು ಹೇಳಿದರು.

ಮೈಸೂರು ಲಿಟರರಿ ಅಸೋಸಿಯೇಷನ್ ಕಾರ್ಯದರ್ಶಿ ರೆಜಿನಾಲ್ಡ್ ವೆಸ್ಲಿ ಸೇರಿದಂತೆ ಮತ್ತಿತರರು ಹಾಜರಿದ್ದರು. ಡಾ.ಲತಾ ಮುತ್ತಣ್ಣ ಅವರ ಪುತ್ರ ಪವನ್‌ಮುತ್ತಣ್ಣ ಸ್ವಾಗತಿಸಿದರು. ಡಾ.ಲತಾ ಮುತ್ತಣ್ಣ ಅವರ ಕಿರಿಯ ಸಹೋದರ ಗಣೇಶ್ ವಂದಿಸಿದರು. ಮುಕ್ತಾ ಗುಪ್ತಾ ಪ್ರಾರ್ಥನೆ ಸಲ್ಲಿಸಿದರು. ಶಾಲಿನಿ ಕಾರ್ಯಕ್ರಮ ನಿರೂಪಿಸಿದರು.

ರಾಹುಲ್ ಗಾಂಧಿ ಸಂಸದ ಸ್ಥಾನ ಅನರ್ಹತೆ ವಿರುದ್ಧ ಮಹಿಳಾ ಕಾಂಗ್ರೆಸ್ ಪ್ರತಿಭಟನೆ



ಮೈಸೂರು, ಮಾ.26(ಎಂಟಿವೈ)– ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಅವರ ಲೋಕಸಭಾ ಸದಸ್ಯತ್ವವನ್ನು ರದ್ದುಗೊಳಿಸಿರುವ ಕ್ರಮವನ್ನು ಖಂಡಿಸಿ ಕೆಪಿಸಿಸಿ ಮಹಿಳಾ ಕಾಂಗ್ರೆಸ್ ಘಟಕ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಲ್ಲಿ ನಡೆದ ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿ ಪಾಲ್ಗೊಳ್ಳಲು ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಮಹಿಳಾ ಘಟಕದ ಪದಾಧಿಕಾರಿಗಳು ಮೈಸೂರಿನ ಕಾಂಗ್ರೆಸ್ ಭವನದ ಮುಂದೆ ಪ್ರತಿಭಟನೆ ನಡೆಸಿ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ, ಆಕ್ರೋಶ ವ್ಯಕ್ತಪಡಿಸಿದರು.

ಕೇಂದ್ರ ಸರ್ಕಾರ ವಿರೋಧ ಪಕ್ಷದ ಮುಖಂಡರನ್ನು ಹತ್ತಿಕ್ಕುವ ಸಂಚು ನಡೆಸುತ್ತಿದೆ. ಭಾರತ್ ಜೋಡೋ ಯಾತ್ರೆ ನಡೆಸಿ ದೇಶದ ಜನರ ವಿಶ್ವಾಸ ಗಳಿಸಿ, ಜನಪ್ರಿಯತೆಯನ್ನು ಹೆಚ್ಚಿಸಿಕೊಂಡಿರುವ ರಾಹುಲ್ ಗಾಂಧಿ ಅವರ ಏಳಿಗೆ ಸಹಿಸದೇ ದುರುದ್ದೇಶದಿಂದ ಲೋಕಸಭಾ ಸದಸ್ಯತ್ವವನ್ನು ರದ್ದು ಮಾಡಿದೆ. ದ್ವೇಷದ ರಾಜಕಾರಣ ಮಾಡುತ್ತಿದೆ. ಪ್ರಜಾಪ್ರಭುತ್ವದ ಆಶಯಕ್ಕೆ ಧಕ್ಕೆಯುಂಟು ಮಾಡಲಾಗುತ್ತಿದೆ ಎಂದು ಕಿಡಿಕಾರಿದರು.

ಇದೇ ವೇಳೆ ಕೆಪಿಸಿಸಿ ಮಹಿಳಾ ಘಟಕದ ರಾಜ್ಯಾಧ್ಯಕ್ಷೆ ಡಾ.ಪುಷ್ಪಾ ಅಮರ್‌ನಾಥ್ ಮಾತನಾಡಿ, ಮೋದಿ ಎಂಬ ಉಪನಾಮ ಇರುವವರೆಲ್ಲಾ ಕಳ್ಳರು, ಸುಳ್ಳರು, ಲೂಟಿಕೋರರು. ರಾಹುಲ್ ಗಾಂಧಿ ಈ ದೇಶದ ಹೆಮ್ಮೆಯ ನಾಯಕ. ಭಾರತ್ ಜೋಡೋ ಯಾತ್ರೆ ಸಹಿಸಿಕೊಳ್ಳಲಾಗದ ಬಿಜೆಪಿಯವರು ರಾಹುಲ್ ಗಾಂಧಿಯನ್ನು ಹತ್ತಿಕ್ಕುವ ಕೆಲಸವನ್ನು ಮಾಡುತ್ತಿದ್ದಾರೆ. ಉದ್ಯಮಿ ಅದಾನಿಗೂ, ಕೇಂದ್ರ ಸರ್ಕಾರಕ್ಕೂ ಏನು ಸಂಬಂಧ ಎಂಬುದನ್ನು ಬಹಿರಂಗಪಡಿಸಬೇಕು ಎಂಬ ರಾಹುಲ್ ಗಾಂಧಿ ಒತ್ತಾಯಕ್ಕೆ ಹೆದರಿ ಅವರನ್ನು ಹತ್ತಿಕ್ಕುವ ಕೆಲಸವನ್ನು ಮಾಡಿ ಸದಸ್ಯತ್ವವನ್ನು ರದ್ದುಗೊಳಿಸುವ ಮೂಲಕ ಪ್ರಜಾಪ್ರಭುತ್ವದ ಕಗ್ಗೊಲೆಯನ್ನು ಬಿಜೆಪಿ ಸರ್ಕಾರ ಮಾಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಾಹುಲ್ ಬೆಂಬಲಕ್ಕೆ ಇಡೀ ಮಹಿಳಾ ಸಮುದಾಯವೇ ನಿಲ್ಲುತ್ತದೆ. ನೀವು ಏನೂ ಮಾಡಲು ಸಾಧ್ಯವಿಲ್ಲ. ಇಂತಹ ಕೆಟ್ಟ ಮತ್ತು ಭ್ರಷ್ಟ ಸರ್ಕಾರವನ್ನು ಎಂದೂ ನೋಡಿರಲಿಲ್ಲ. ರಾಜ್ಯದಲ್ಲೂ ಶೇ.40 ರಷ್ಟು ಭ್ರಷ್ಟಾಚಾರ, ಪಿಎಸ್‌ಐ ಹಗರಣ ಸೇರಿದಂತೆ ಹಲವಾರು ಹಗರಣಗಳನ್ನು ಮಾಡಲಾಗುತ್ತಿದೆ ಎಂದು ಕಿಡಿಕಾರಿದರು.

ಪ್ರತಿಭಟನೆಯಲ್ಲಿ ರಾಜ್ಯ ಮಹಿಳಾ ಕಾಂಗ್ರೆಸ್ ಉಪಾಧ್ಯಕ್ಷೆ ಪುಷ್ಪವಲ್ಲಿ, ಮೈಸೂರು ನಗರ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪುಷ್ಪಲತಾ ಟಿ.ಬಿ.ಚಿಕ್ಕಣ್ಣ, ಮೈಸೂರು ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಲತಾ ಸಿದ್ಧಶೆಟ್ಟಿ, ಕೆಪಿಸಿಸಿ ಮಹಿಳಾ ಪ್ರಧಾನ ಕಾರ್ಯದರ್ಶಿ ರಾಧ, ಸುಶ್ಮಿತಾ, ಮಂಜುಳಾ, ಬೆಂಗಳೂರಿನ ಮಂಜುಳಾ ಎನ್.ವಿ.ಜಯಲಕ್ಷ್ಮಿ ಪುತ್ರನ್, ಶೈಲಜಾ ಅಮರ್‌ನಾಥ್, ಮಂಜುಳಾ ಮಂಜುನಾಥ್ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆ ಅನಾವರಣ



ಮೈಸೂರು, ಮಾ.26– ಮೈಸೂರು ಪೇಯಿಂಟ್ಸ್ ಮತ್ತು ವಾರ್ನಿಷ್ ಲಿಮಿಟೆಡ್(ಮೈಲ್ಯಾಕ್)ನ ಅಮೃತ ಮಹೋತ್ಸವ ಹಿನ್ನಲೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮೈಲ್ಯಾಕ್ ಆವರಣದಲ್ಲಿ ನಿರ್ಮಿಸಿದ್ದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕಂಚಿನ ಪ್ರತಿಮೆಯನ್ನು ಮೈಲ್ಯಾಕ್ ಅಧ್ಯಕ್ಷ ರಘು ಕೌಟಿಲ್ಯ ಅನಾವರಣಗೊಳಿಸಿದರು.

ನಂತರ ಮಾತನಾಡಿದ ಅವರು, ಈ ಹಿಂದೆ ಇದ್ದಂತಹ ಪ್ರತಿಮೆ ಹಳೆಯದಾಗಿತ್ತು. ಹಾಗಾಗಿ ಇಂದು ನೂತನ ಕಂಚಿನ ಪ್ರತಿಮೆ ಅನಾವರಣ ಮಾಡಿದ್ದೇವೆ. ಮೈಸೂರು ಮಹಾರಾಜರ ಕುಟುಂಬದ ಮೇಲೆ ನಮಗೆ ಅಪಾರವಾದ ಗೌರವವಿದೆ. ಮೈಸೂರು ಮಹಾರಾಜರು ನಿರ್ಮಿಸಿರುವ ಈ ಸಂಸ್ಥೆಯನ್ನು ಉಳಿಸಬೇಕಿದೆ ಎಂದು ಹೇಳಿದರು.

ಶಿಕ್ಷಣ, ದಾಸೋಹದಲ್ಲಿ ಮಠಗಳ ಕೊಡುಗೆ ಅಪಾರ: ಎಂಎಲ್‌ಸಿ ಮಂಜೇಗೌಡ



ಹೆಚ್.ಡಿ. ಕೋಟೆ, ಮಾ. 26– ದೇಶದಲ್ಲಿ ಶಿಕ್ಷಣ ಮತ್ತು ದಾಸೋಹ ಕ್ಷೇತ್ರದಲ್ಲಿ ಮಠಮಾನ್ಯಗಳ ಕೊಡುಗೆ ಅಪಾರ ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ತಿಳಿಸಿದರು.

ಹೆಚ್.ಡಿ.ಕೋಟೆ ತಾಲೂಕಿನ ಪುರ ಗ್ರಾಮದ ಶ್ರೀ ಬಸವೇಶ್ವರ ಪಟ್ಟದ ಮಠದಲ್ಲಿ ನಡೆದ 12ನೇ ವರ್ಷದ ಆರಾಧನಾ ಮಹೋತ್ಸವ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಈ ಮಠವು 1986ರಲ್ಲಿ ಪ್ರಾರಂಭವಾಗಿ ಶ್ರೀ ಮಠದ ಪೀಠಾಧ್ಯಕ್ಷರಾದ ಶ್ರೀ ಚಂದ್ರಶೇಖರ ಸ್ವಾಮಿಗಳ ಆಶೀರ್ವಾದದಿಂದ ಈ ಭಾಗದ ಭಕ್ತರೊಡನೆ ಸೇರಿ ಶ್ರೀ ಮಠದಿಂದ ಅನೇಕ ಧಾರ್ಮಿಕ, ಸಾಮಾಜಿಕ ಕಾರ್ಯಕ್ರಮಗಳು ನಿರಂತರವಾಗಿ ನಡೆದುಕೊಂಡು ಬರುತ್ತಿವೆ. ಸರ್ಕಾರ ದೇಶದ ಎಲ್ಲಾ ಜನರಿಗೆ ಶಿಕ್ಷಣ, ಆರೋಗ್ಯ ದಾಸೋಹವನ್ನು ನೀಡಲು ಸಾಧ್ಯವಾಗದಿದ್ದಾಗ ಮಠಮಾನ್ಯಗಳು ಶಿಕ್ಷಣಸಂಸ್ಥೆಗಳು, ಆಸ್ಪತ್ರೆಗಳನ್ನು ತೆರೆದು ಜನರ ಆರೋಗ್ಯವನ್ನು ಕಾಪಾಡುವುದರ ಜೊತೆಗೆ ನಿರಂತರವಾಗಿ ಮಠಕ್ಕೆ ಬರುವ ಭಕ್ತರುಗಳಿಗೆ ದಾಸೋಹವನ್ನು ಮಾಡುವುದರ ಮೂಲಕ ಜನರ ಹಸಿವನ್ನು ಇಂಗಿಸುತ್ತ, ದೇಶದ ಕಲೆ, ಸಂಸ್ಕೃತಿಯನ್ನು ಉಳಿಸುವ ಪ್ರಯತ್ನವನ್ನು ಮಾಡುತ್ತಿವೆ ಎಂದರು.

ಈ ಸಂದರ್ಭದಲ್ಲಿ ಶ್ರೀ ಚಂದ್ರಶೇಖರ ಸ್ವಾಮೀಜಿ, ಶ್ರೀ ಚನ್ನಬಸವಸ್ವಾಮೀಜಿ. ಶ್ರೀ ಸಾಂಬ ಸದಾಶಿವಸ್ವಾಮೀಜಿ, ಗುರುಶಾಂತಸ್ವಾಮೀಜಿ, ಶ್ರೀ ಮಹಾದೇವಸ್ವಾಮೀಜಿ, ಗುರುಶಾಂಕಸ್ವಾಮೀಜಿ, ಶ್ರೀ ಮಹಾದೇವಸ್ಥಾಮೀಜಿ, ಪರಶಿವಮೂರ್ತಿಸ್ವಾಮೀಜಿ, ಶ್ರೀ ನಾಗೇಂದ್ರಸ್ವಾಮೀಜಿ, ಶ್ರೀ ಮಹೇಶ್ವರಸ್ವಾಮೀಜಿ, ಮೈಮುಲ್ ಮಾಜಿ ಅಧ್ಯಕ್ಷ ಸಿದ್ದೇಗೌಡ, ಬೀರಿಹುಂಡಿ ಬಸವಣ್ಣ ಬಿಜೆಪಿ ಮುಖಂಡ, ಎಂ. ಅಪ್ಪಾ, ಪ್ರಕಾಶ, ದಿನೇಶ್‌ಗೌಡ ಉಪಸ್ಥಿತರಿದ್ದರು.

ರಾಹುಲ್ ಗಾಂಧಿ ಅನರ್ಹಗೊಳಿಸಿದ ಕ್ರಮ ಖಂಡಿಸಿ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಪ್ರತಿಭಟನೆ

ಮೈಸೂರು, ಮಾ.26– ರಾಹುಲ್ ಗಾಂಧಿ ಅವರ ಲೋಕಸಭಾ ಸದಸ್ಯತ್ವವನ್ನು ಅನರ್ಹಗೊಳಿಸಿರುವ ಕ್ರಮವನ್ನು ಖಂಡಿಸಿ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಶನಿವಾರ ಪ್ರತಿಭಟಿಸಿತು.



ಮೈಸೂರಿನ ಪುರಭವನ ಆವರಣದ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಮುಂಭಾಗ ಜಮಾಯಿಸಿದ ವೇದಿಕೆ ಕಾರ್ಯಕರ್ತರು, ರಾಹುಲ್ ಗಾಂಧಿಯವರ ಸಂಸತ್ ಸದಸ್ಯತ್ವವನ್ನು ಅನರ್ಹಗೊಳಿಸಿದ್ದು ಅಸಂವಿಧಾನಿಕ ನಡೆ. ಇದು ಭಾರತದ ಪ್ರಜಾಪ್ರಭುತ್ವಕ್ಕೆ ಶೋಭೆ ತರುವುದಿಲ್ಲ. ಬದಲಾಗಿ ಅಪಾಯದಲ್ಲಿರುವ ಮುನ್ಸೂಚನೆಯಾಗಿದೆ ಎಂದು ಕಿಡಿಕಾರಿದರು.

ಮಾನನಷ್ಟ ಪ್ರಕರಣವೊಂದರಲ್ಲಿ ನ್ಯಾಯಾಲಯ ರಾಹುಲ್ ಗಾಂಧಿ ಅವರಿಗೆ 2 ವರ್ಷಗಳ ಜೈಲು ಶಿಕ್ಷೆ ವಿಧಿಸಿ, ಮೇಲ್ಮನವಿಗೆ 30 ದಿನ ಕಾಲಾವಕಾಶ ನೀಡಿದೆ. ಈ ಮಧ್ಯೆ ಏಕಾಏಕಿ ಸಂಸತ್ ಕಾರ್ಯದರ್ಶಿ, ನ್ಯಾಯಾಲಯದ ಆದೇಶದ ಪ್ರತಿಯನ್ನು ಪಡೆಯದೆ, ಮೇಲ್ಮನವಿಗೆ ಕಾಲಾವಕಾಶ ನೀಡಿರುವುದನ್ನೂ ಲೆಕ್ಕಿಸದೆ ಏಕಾಏಕಿ ರಾಹುಲ್ ಗಾಂಧಿ ಸದಸ್ಯತ್ವವನ್ನು ಅನರ್ಹಗೊಳಿಸಿರುವ ನಡೆ ಖಂಡನಾರ್ಹ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅನರ್ಹಗೊಳಿಸಿದ ಪ್ರಕ್ರಿಯೆಯೇ ಪ್ರಶ್ನಾರ್ಹವಾಗಿದೆ. ಪ್ರತಿಪಕ್ಷಗಳ ನಾಯಕರು, ಟೀಕಾಕಾರರ ಧ್ವನಿ ಅಡಗಿಸುವ ವಿಫಲ ಯತ್ನ. ತಮ್ಮನ್ನು ವಿರೋಧಿಸುವವರು ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸದಂತೆ ತಡೆಯಲು ಕಾನೂನು ಮತ್ತು ಇತರ ಎಲ್ಲ ರೀತಿಯ ವ್ಯವಸ್ಥೆ ಬಳಸಿಕೊಳ್ಳುವ ನಿರಂಕುಶಾಧಿಕಾರವನ್ನು ಬಿಜೆಪಿ ಅನುಸರಿಸಿದೆ. ಹಲವು ವರ್ಷಗಳಿಂದ ಬಿಜೆಪಿಯವರು ರಾಹುಲ್ ಗಾಂಧಿ ಮತ್ತಿತರರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡುತ್ತಿದ್ದಾರೆ. ಅಪರಾಧ ಎಸಗಿದವರೂ ಶಿಕ್ಷೆಯಿಂದ ತಪ್ಪಿಸಿಕೊಂಡಿದ್ದಾರೆ. ಬಿಜೆಪಿ, ಆರ್‌ಎಸ್‌ಎಸ್‌ನ ನಾಯಕರು ಧಾರ್ಮಿಕ ವಿಚಾರಕ್ಕೆ ನರಮೇಧಕ್ಕೆ ಕರೆ ನೀಡಿದ್ದರೂ ಅಂತಹವರ ವಿರುದ್ಧ ಯಾವ ಕ್ರಮವೂ ಆಗಿಲ್ಲ ಅವರೆಲ್ಲಾ ನಿರಾತಂಕವಾಗಿ ಬೀದಿಯಲ್ಲಿ ತಿರುಗಾಡಿಕೊಂಡಿದ್ದಾರೆ ಎಂದು ದೂರಿದರು.

ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ, ವೇದಿಕೆಯ ಅಧ್ಯಕ್ಷ ಕೆ.ಎಸ್.ಶಿವರಾಮು, ಜಿಲ್ಲಾ ಸವಿತಾ ಸಮಾಜದ ಅಧ್ಯಕ್ಷ ಎನ್.ಆರ್. ನಾಗೇಶ್, ಮುಖಂಡರಾದ ಲೋಕೇಶ್‌ಕುಮಾರ್ ಮಾದಾಪುರ, ಜಯ್‌ಕುಮಾರ್, ವಿವೇಕ್, ಶಿವಣ್ಣ, ಯೂತ್ ಕಾಂಗ್ರೆಸ್‌ನ ಕುಮಾರ್, ಕಾಂಗ್ರೆಸ್ ಎಸ್‌ಟಿ ಘಟಕದ ರೋಹಿತ್, ಜಿಲ್ಲಾ ಉಪ್ಪಾರ ಸಂಘದ ಯೋಗೇಶ್ ಉಪ್ಪಾರ್, ಅಸಂಘಟಿತ ಕಾರ್ಮಿಕ ಒಕ್ಕೂಟದ ಸುನಿಲ್, ಶೋಭಾ, ಶಾಂತಮ್ಮ ಆರ್.ಕೆರವಿ, ಮೈಸೂರು ಬಸವಣ್ಣ, ಮೋಹನ್, ಹರೀಶ್ ಮೊಗಣ್ಣ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.



ಮೈಸೂರು ತಾಲೂಕಿನ ಮೂಡಲಹುಂಡಿ ಗ್ರಾಮದಲ್ಲಿ ಯುಗಾದಿ ಹಬ್ಬದ ಹಿನ್ನೆಲೆಯಲ್ಲಿ ಶ್ರೀ ಬೀರೇಶ್ವರ, ಬಸವೇಶ್ವರರ ಉತ್ಸವ ಮೂರ್ತಿ ಮೆರವಣಿಗೆ ಭಕ್ತಿಪೂರ್ವಕ ವಿಜೃಂಭಣೆಯಿಂದ ನೆರವೇರಿತು.

ದಾಖಲೆಯಲ್ಲಿ ಉರಿಗೌಡ, ನಂಜೇಗೌಡ ಹೆಸರಿಲ್ಲ ; ಟಿಪ್ಪು ಕೊಂದಿದ್ದು ಬ್ರಿಟಿಷ್ ಸೈನಿಕ

ಡಾ.ಹಾ.ತಿ.ಕೃಷ್ಣೇಗೌಡ ಪ್ರತಿಪಾದನೆ

ಮೈಸೂರು,ಮಾ.26(ಪಿಎಂ)– ಯಾವುದೇ ಅಧಿಕೃತ ದಾಖಲೆಗಳಲ್ಲಿ ಉರಿಗೌಡ, ನಂಜೇಗೌಡ ಎನ್ನುವ ಹೆಸರು ಖಂಡಿತ ಇಲ್ಲ. ಇದನ್ನು ನಾವು ಮನಗಾಣಬೇಕು. ಟಿಪ್ಪು ಕೊಂದಿದ್ದು ಬ್ರಿಟಿಷ್ ಸೈನಿಕ ಎಂಬುದು ಸತ್ಯಕ್ಕೆ ಹತ್ತಿರವಾದದ್ದು ಎಂದು ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ವಿಶ್ವಕೋಶ ಯೋಜನೆಯ ಗೌರವ ಸಂಪಾದಕರೂ ಆದ ಸಾಹಿತಿ ಡಾ.ಹಾ.ತಿ.ಕೃಷ್ಣೇಗೌಡ ಹೇಳಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಾನು ಯಾವುದೇ ಪಕ್ಷದ ಪರವಾಗಿ ಬಂದಿಲ್ಲ ಎಂದು ಮೊದಲಿಗೆ ತಿಳಿಸಿದರು. ಚರಿತ್ರೆಯನ್ನು ಚರಿತ್ರೆಯಾಗಿಯೇ ನೋಡಬೇಕು. ಚರಿತ್ರೆಗೆ ಅಧಿಕೃತವಾದ ಆಧಾರ ಇರಬೇಕು ಎಂದರು.

ಹಲವು ದಿನಗಳಿಂದ ಟಿಪ್ಪು ಮರಣ ಹೊಂದಿದ ವಿಚಾರವಾಗಿ ಅನೇಕರು ಮಾತನಾಡುತ್ತಿದ್ದಾರೆ. ನಾನು ಅದಕ್ಕೆಲ್ಲಾ ಪ್ರತಿಕ್ರಿಯೆ ಕೊಡುತ್ತಿಲ್ಲ. ಆದರೆ ಸತ್ಯಸಂಗತಿಯನ್ನು ಈ ಸಂದರ್ಭದಲ್ಲಿ ಹೇಳಬೇಕು. ಬರೆಯದೇ ಇರುವ ಚರಿತ್ರೆಯೂ ಜಾನಪದ ಸೇರಿದಂತೆ ಮೊದಲಾದವುಗಳಲ್ಲಿ ತುಂಬ ಇವೆ. ಆದರೆ ಅವುಗಳನ್ನು ಸಂಪೂರ್ಣವಾಗಿ ಸತ್ಯ ಎಂದು ಪರಿಗಣಿಸಲು ಸಾಧ್ಯವಿಲ್ಲ. ಆದರೆ ಯಾವುದೇ



ಒಂದನ್ನು ಹೇಳಬೇಕಾದರೂ ಸತ್ಯಸಂಗತಿ ಇದೆಯೇ ಎಂದು ಮನಗಾಣಬೇಕು ಎಂದು ತಿಳಿಸಿದರು.

ಕೃಷ್ಣಮೂರ್ತಿ ಹನೂರು ಅವರ ಕಾದಂಬರಿ 'ಅಜ್ಞಾತನೊಬ್ಬನ ಆತ್ಮಚರಿತ್ರೆ'ಯಲ್ಲಿ ಟಿಪ್ಪುವಿನ ಕಾಲದಲ್ಲಿ ದಳವಾಯಿಯೊಬ್ಬ ಮಾಡಿದ ಕೆಲಸ ಕಾರ್ಯಗಳನ್ನು ಚಿತ್ರಿಸಿದ್ದಾರೆ. ಐತಿಹಾಸಿಕ ಕಾದಂಬರಿಯಾದ ಕಾರಣ ಅನೇಕ ಸಾಹಿತ್ಯಕ, ಐತಿಹಾಸಿಕ ವಿಚಾರಗಳನ್ನು ಲೇಖಕರು ಅಧ್ಯಯನ ಮಾಡಿದ್ದಾರೆ. ಇಲ್ಲಿ ಟಿಪ್ಪು ಯಾವ ರೀತಿ ಮರಣ ಹೊಂದಿದ ಎಂಬ ಘಟನೆ ಕೂಡ ಚಿತ್ರಿಸಿದ್ದಾರೆ. ವಾಸ್ತವವಾಗಿ ಚರಿತ್ರೆಯಲ್ಲಿ ದಾಖಲಾಗಿರುವ ಅಂಶ ಆಧರಿಸಿ ಈ ಘಟನೆ ಬರೆಯಲಾಗಿದೆ. ಆ ಪ್ರಕಾರ ಒಬ್ಬ ಬ್ರಿಟಿಷ್ ಸೈನಿಕನಿಂದ ಟಿಪ್ಪು ಹತ್ಯೆಯಾಗುತ್ತಾನೆ ಎಂದು ಹೇಳಿದರು.

ಉರಿಗೌಡ, ನಂಜೇಗೌಡ ಟಿಪ್ಪು ಕೊಂದರು ಎಂಬುದು ಕಾಲ್ಪನಿಕ. ಸದರಿ ಕಾದಂಬರಿಯಲ್ಲಿ ಟಿಪ್ಪು ಹತ್ಯೆ ಮಾಡಿದ್ದು ಬ್ರಿಟಿಷ್ ಸೈನಿಕ ಎಂಬುದನ್ನು ಉಲ್ಲೇಖಿಸಲಾಗಿದೆ. ಗಾಯಗೊಂಡು ಬಿದ್ದಿದ್ದ ಒಬ್ಬ ಬ್ರಿಟಿಷ್ ಸೈನಿಕನನ್ನು ದಳವಾಯಿ ಉಪಚರಿಸುವ ಪ್ರಸಂಗವು ಕಾದಂಬರಿಯಲ್ಲಿದ್ದು, ಇಲ್ಲಿ ಟಿಪ್ಪುವಿನ ಹತ್ಯೆಗೈದ ಘಟನಾವಳಿ ತೆರೆದುಕೊಳ್ಳುತ್ತದೆ ಎಂದು ತಿಳಿಸಿ, ಕಾದಂಬರಿಯಲ್ಲಿರುವ ಟಿಪ್ಪು ಹತ್ಯೆ ಬಗ್ಗೆ ಚಿತ್ರಿಸಿರುವುದನ್ನು ವಾಚಿಸಿದರು.

'ಟಿಪ್ಪು ಸುಸ್ತಾಗಿ, ಬಳಲಿ ಇದೇ ಉತ್ತರ ಭಾಗದ ಕೋಟೆಯ ಮರದ ಕೆಳಗೆ ಒರಗಿದ್ದ. ನನಗೆ ಅವನು ಟಿಪ್ಪು ಎಂದು ಗೊತ್ತಿರಲಿಲ್ಲ. ಆದರೆ ಅವನು ತೊಟ್ಟಿದ್ದ ವಸ್ತ್ರದ ನಡುಮಧ್ಯೆ ಚಿನ್ನದ ನಡುಪಟ್ಟಿ ಹೊಳೆಯುತ್ತಿತ್ತು. ಅವನ ಕತ್ತಿಯ ಹಿಡಿಕೆಯೂ ಫಳಫಳ ಅನ್ನುತ್ತಿತ್ತು. ಸತ್ತೇ ಹೋಗಿರಬೇಕು ಅಂದುಕೊಂಡು ಅವನ ಬಳಿ ಮೆಲ್ಲ ಮೆಲ್ಲನೆ ಸರಿದೆ ಮೊದಲು ಚಿನ್ನದ ನಡುಪಟ್ಟಿ ಕಿತ್ತುಕೊಳ್ಳುವ ಆಸೆಯಾಯಿತು. ಹತ್ತಿರ ಹೋದಂತೆ ಆತ ಎಚ್ಚರವಾಗಿಬಿಟ್ಟ ಎದ್ದು ಹುಲಿಯಂತೆ ನೋಡಿದ ಅವನು ಬಳಲಿ ಬೆಂಡಾಗಿ ಕೂತಿದ್ದಾನೆಂದುಕೊಂಡರೆ ನನ್ನತ್ತ ಕತ್ತಿ ಬೀಸಿಯೇಬಿಟ್ಟ ನನ್ನ ಹೊಟ್ಟೆ, ನಡು ಕತ್ತರಿಸಬೇಕಾದದ್ದು ತೊಡೆಗೆ ಬಲವಾದ ಏಟು ಬಿದ್ದು ರಕ್ತ ಸುರಿಯುವಲ್ಲೇ ನಾನು ಬಂದೂಕಿನಿಂದ ಗುಂಡು ಹಾರಿಸಿಬಿಟ್ಟೆ. ಟಿಪ್ಪು ಸನಿಹದಲ್ಲೇ ನಾನಿದ್ದುದರಿಂದ ಗುಂಡು ಎದೆಗೇ ನಾಟಿಬಿಟ್ಟಿತು. ರಕ್ತಕಾರಿ ಒರಗಿದ. ಎಷ್ಟೋ ಹೊತ್ತಿನ ಮೇಲೆ ನಾನು ಟಿಪ್ಪುವನ್ನೇ ಕೊಂದಿದ್ದೇನೆಂದು ಗೊತ್ತಾಯಿತು. ಜನ ಸೇರಿದ ಮೇಲೆ ಭಯವಾಯಿತು. ನಾನು ತೆವಳಿ ತಪ್ಪಿಸಿಕೊಂಡು ಇತ್ತ ಹೊಳೆಯ ದಡದಲ್ಲಿ ಬಿದ್ದೆ. ತೊಡೆಯ ನೋವಿಂದ ಏಳುವುದಕ್ಕೆ ಆಗಲಿಲ್ಲ. ಈಗ ಸಿಕ್ಕಿದ ನೀನೇ ದೇವರು ಎಂದ ಎಂದು ಕಾದಂಬರಿಯಲ್ಲಿ ಬ್ರಿಟಿಷ್ ಸೈನಿಕ ಹೇಳಿಕೊಳ್ಳುವ ಸಂಗತಿಯನ್ನು ವಾಚಿಸಿದರು.

ಕಾದಂಬರಿಯಲ್ಲಿರುವ ಈ ಸಂಗತಿ ಸತ್ಯಕ್ಕೆ ತುಂಬ ಹತ್ತಿರವಾದುದು. ಉರಿಗೌಡ, ನಂಜೇಗೌಡ ಎಂಬ ಹೆಸರು ಕೇವಲ ಜನಪದ ಲಾವಣಿಯಲ್ಲಿ ಮಾತ್ರ ಇದೆ. 'ಮೈಸೂರು ಹುಲಿ' ಎಂಬುದು ಎಲ್ಲಿಯೂ ದಾಖಲಾಗಿಲ್ಲ. ಟಿಪ್ಪುಗೆ ಈ ಬಿರುದು ನೀಡಿದ್ದೂ ಜನಪದರು. ಟಿಪ್ಪುವಿಗೆ ಸಂಬಂಧಿಸಿದಂತೆ ಲಂಡನ್ ಬ್ರಿಟಿಷ್ ಲೈಬ್ರರಿಯಲ್ಲಿ ಅನೇಕ ದಾಖಲೆಗಳು ಇವೆ ಆದರೆ ಅದನ್ನೆಲ್ಲಾ ನಾವು ಇಲ್ಲಿ ತಂದಿಲ್ಲ. ಚರಿತ್ರೆ ಬರೆಯುವುದನ್ನು ಭಾರತೀಯರಿಗೆ ಕಲಿಸಿದವರೇ ಬ್ರಿಟಿಷರು ಎಂದು ಹೇಳಿದರು. ಮೈಸೂರು ನಗರ ಕಾಂಗ್ರೆಸ್ ಮಾಧ್ಯಮ ವಕ್ತಾರ ಟಿ.ಶ್ರೀನಿವಾಸ್ ಗೋಷ್ಠಿಯಲ್ಲಿದ್ದರು.

ವಿಧಾನಸೌಧದ ಎದುರು ಅಶ್ವಾರೋಹಿ ಬಸವಣ್ಣ, ಕೆಂಪೇಗೌಡರ ಪ್ರತಿಮೆ ಅನಾವರಣಗೊಳಿಸಿದ ಅಮಿತ್ ಶಾ




ಬೆಂಗಳೂರು, ಮಾ.26– ವಿಧಾನ ಸೌಧ ಮುಂದೆ ಸ್ಥಾಪಿಸಿರುವ ಸಮಾಜ ಪರಿವರ್ತಕ, ಜಗಜ್ಯೋತಿ ಬಸವೇಶ್ವರ ಹಾಗೂ ಬೆಂಗಳೂರು ನಿರ್ಮಾತೃ, ನಾಡ ಪ್ರಭು ಕೆಂಪೇಗೌಡ ಅವರ ಪ್ರತಿಮೆಗಳನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಇಂದು ರಿಮೋಟ್ ಅನಾವರಣಗೊಳಿಸಿದರು.

ವಿಧಾನಸೌಧದ ಆವರಣದಲ್ಲಿರುವ ದೇಶದ ಮೊದಲ ಪ್ರಧಾನಿ ಜವಾಹರ್ ಲಾಲ್ ನೆಹರು ಹಾಗೂ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿ ಮಧ್ಯಭಾಗದಲ್ಲಿ ಈ ಇಬ್ಬರೂ ಮಹಾನೀಯರ ನಾಲ್ಕು ಮೀಟರ್ ಎತ್ತರದ ಅಶ್ವಾರೂಢ ಪ್ರತಿಮೆಗಳು ಸ್ಥಾಪನೆಯಾಗಿವೆ.

ಸುಮಾರು ರೂ.8 ಕೋಟಿ ವೆಚ್ಚದಲ್ಲಿ ಪ್ರತಿಮೆ ಸಿದ್ಧಗೊಂಡಿದ್ದು, ಕಳೆದ ಜನವರಿಯಲ್ಲಿ ಪ್ರತಿಮೆ ಸ್ಥಾಪನೆ ಸಂಬಂಧ ಶಂಕುಸ್ಥಾಪನೆ ನೆರವೇರಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಾರ್ಯಕ್ರಮದಲ್ಲಿ ಸಿಎಂ ಬೊಮ್ಮಾಯಿ, ಕಂದಾಯ ಸಚಿವ ಅಶೋಕ್, ಸುತ್ತೂರು ಶ್ರೀಗಳು, ಸಿದ್ದಗಂಗಾ ಶ್ರೀಗಳು, ಪೇಜಾವರ ಶ್ರೀಗಳು, ನಿರ್ಮಲಾನಂದನಾಥ ಶ್ರೀಗಳು ಸೇರಿದಂತೆ ಅನೇಕ ಸ್ವಾಮೀಜಿಗಳು, ಗಣ್ಯರು ಭಾಗಿಯಾಗಿದ್ದರು. ಇನ್ನು ರಾಜ್ಯ ಪ್ರವಾಸ ಕೈಗೊಂಡಿರುವ ಅಮಿತ್ ಶಾ, ರಾತ್ರಿ ಬಿಜೆಪಿಯ ಪ್ರಮುಖ ಮುಖಂಡರೊಂದಿಗೆ ಸಭೆ ನಡೆಸಲಿದ್ದಾರೆ. ಈ ಸಭೆಯಲ್ಲಿ ಅಭ್ಯರ್ಥಿಗಳ ಆಯ್ಕೆ ಸಂಬಂಧ ಚರ್ಚೆ ನಡೆಯಲಿದೆ.

ರಾಹುಲ್ ಗಾಂಧಿಗೆ ಪ್ರತ್ಯೇಕ ಕಾನೂನು ಇಲ್ಲ



ಬೆಂಗಳೂರು, ಮಾ.26– ಕಾನೂನು ಎಲ್ಲರಿಗೂ ಒಂದೇ, ಎಐಸಿಸಿ ಮಾಜಿ ಅಧ್ಯಕ್ಷ ರಾಹುಲ್ ಗಾಂಧಿ ಹಾಗೂ ಇತರರಿಗೆ ಪ್ರತ್ಯೇಕ ಕಾನೂನು ಇಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಹುಲ್ ಗಾಂಧಿಯವರನ್ನು ಲೋಕಸಭೆಯಿಂದ ಅನರ್ಹಗೊಳಿಸಿರುವ ಕುರಿತ ಪ್ರಶ್ನೆಗೆ ಉತ್ತರಿಸಿ, ದೇಶದಲ್ಲಿ ಕಾನೂನು ವ್ಯವಸ್ಥೆ ಅಸ್ತಿತ್ವದಲ್ಲಿದೆ. ಎಲ್ಲವೂ ಕಾನೂನಿನಂತೆ ನಡೆಯುತ್ತದೆ. ಕಾನೂನು ಎಲ್ಲರಿಗೂ ಒಂದೇ ಎಂದು ಹೇಳಿದರು.

ಏನು ಬೇಕಾದರೂ ಮಾತನಾಡಬಹುದು ಎಂಬ ಭಾವನೆ ಕಾಂಗ್ರೆಸ್ ನಾಯಕರಲ್ಲಿತ್ತು. ಆದರೆ, ಸಾರ್ವಜನಿಕವಾಗಿ ಯಾರನ್ನಾದರೂ ಅವಮಾನಿಸಿದರೆ ಅದನ್ನು ಎದುರಿಸಲು ಕಾನೂನು ಇದೆ ಎಂಬುದು ಇದೀಗ ಅರ್ಥವಾಗಿದೆ ಎಂದು ತಿಳಿಸಿದರು.

ರಾಹುಲ್ ಒಬ್ಬ ವ್ಯಕ್ತಿಯ ವಿರುದ್ಧ ಮಾತ್ರವಲ್ಲದೆ ಸಮುದಾಯದ ವಿರುದ್ಧವೂ ಮಾತನಾಡಿದ್ದಾರೆ. ಇದರಿಂದ ಜನರಿಗೆ ನೋವುಂಟಾಗಿದೆ. ಹೀಗಾಗಿ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದರು. ಏಪ್ರಿಲ್/ಮೇ ತಿಂಗಳಿನಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಗೆಲ್ಲುವುದರಲ್ಲಿ ಯಾವುದೇ ಅನುಮಾನವಿಲ್ಲ ಮತ್ತು ಮೇನಲ್ಲಿ ನಡೆಯಲಿರುವ ವಿಜಯೋತ್ಸವದಲ್ಲಿ ಭಾಗವಹಿಸುವಂತೆ ಪ್ರಧಾನಿಗೆ ಆಹ್ವಾನ ನೀಡಲಾಗುವುದು ಎಂದು ಹೇಳಿದರು.

ಭಾರತೀಯ ಮೂಲದ ಮಗುವಿನ ಹತ್ಯೆ

ಅಮೇರಿಕ ವ್ಯಕ್ತಿಗೆ 100 ವರ್ಷ ಜೈಲು

ವಾಷಿಂಗ್‌ಟನ್, ಮಾ.26– ಭಾರತೀಯ ಮೂಲದ ಮಗುವಿನ ಸಾವಿಗೆ ಕಾರಣವಾದ ವ್ಯಕ್ತಿಯೋರ್ವನಿಗೆ ಅಮೇರಿಕಾದ ನ್ಯಾಯಾಲಯ 100 ವರ್ಷಗಳ ಶಿಕ್ಷೆಯನ್ನು ವಿಧಿಸಿದೆ.

2021 ರಲ್ಲಿ 5 ವರ್ಷದ ಭಾರತೀಯ ಮೂಲದ ಹೆಣ್ಣುಮಗುವಿನ ಸಾವಿಗೆ 35 ವರ್ಷದ ಜೋಸೆಫ್ ಲೀ ಸ್ಮಿತ್ ಕಾರಣವಾಗಿದ್ದ ಆರೋಪ ಸಾಬೀತಾಗಿದ್ದು, ಆತನ ಶಿಕ್ಷೆಯ ಪ್ರಮಾಣವನ್ನು ಕೋರ್ಟ್ ಈಗ ಪ್ರಕಟಿಸಿದೆ.

ಮಾಯಾ ಪಟೇಲ್ ಎಂಬ 5 ವರ್ಷದ ಮಗು ಹೋಟೆಲ್ ರೂಮಿನೊಳಗೆ ಆಡುತ್ತಿತ್ತು, ಏಕಾ ಏಕಿ ಬುಲೆಟ್ ಆ ಮಗುವಿನ ತಲೆಗೆ ಹೊಕ್ಕಿತ್ತು. ತಕ್ಷಣವೇ ಮಗುವನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ, 3 ದಿನಗಳ ನಂತರ ಜೀವನ್ಮರಣದ ನಡುವೆ ಹೋರಾಡಿ ಮಾ.23, 2021 ರಂದು ಮೃತಪಟ್ಟಿತ್ತು.

ಸ್ಮಿತ್‌ನ ವಿಚಾರಣೆಯ ಸಮಯದಲ್ಲಿ, ಸೂಪರ್ 8 ಮೋಟೆಲ್‌ನ ಪಾರ್ಕಿಂಗ್ ಸ್ಥಳದಲ್ಲಿ ಸ್ಮಿತ್ ಇನ್ನೊಬ್ಬ ವ್ಯಕ್ತಿಯೊಂದಿಗೆ ವಾಗ್ವಾದಕ್ಕೆ ಇಳಿದದ್ದು ತೀರ್ಪುಗಾರರಿಗೆ ತಿಳಿದುಬಂದಿದೆ. ಆ ಸಮಯದಲ್ಲಿ ವಿಮಲ್ ಮತ್ತು ಸ್ನೇಹಲ್ ಪಟೇಲ್ ಅವರು ಮಾಯಾ ಮತ್ತು ಕಿರಿಯ ಸಹೋದರನೊಂದಿಗೆ ನೆಲ ಅಂತಸ್ತಿನಲ್ಲಿ ಇದ್ದರು.

ವಾಗ್ವಾದದ ಸಮಯದಲ್ಲಿ ಸ್ಮಿತ್ ಓರ್ವ ವ್ಯಕ್ತಿಗೆ 9–ಎಂಎಂ ಬಂದೂಕಿನಿಂದ ಹೊಡೆದನು, ಆ ವ್ಯಕ್ತಿಗೆ ತಗುಲಬೇಕಿದ್ದ ಗುಂಡು ತಪ್ಪಿ ಹೋಟೆಲ್ ಕೋಣೆಗೆ ಹೋಯಿತು ಮತ್ತು ಮೊದಲು ಪಟೇಲ್ ತಲೆಗೆ ಹೊಡೆದಿದ್ದು, ಆತನ ತಾಯಿಗೂ ತಗುಲಿದೆ.

ಜಿಲ್ಲಾ ನ್ಯಾಯಾಧೀಶ ಜಾನ್ ಡಿ ಮಾರ್ಚ್ 2021 ರಲ್ಲಿ ಮಾಯಾ ಪಟೇಲ್ ಅವರ ಹತ್ಯೆಗೆ ಸಂಬಂಧಿಸಿದಂತೆ ಪರೀಕ್ಷೆ, ಪೆರೋಲ್ ಅಥವಾ ಶಿಕ್ಷೆಯ ಕಡಿತದ ಪ್ರಯೋಜನವಿಲ್ಲದೆ ಮೊಸ್ಲಿ ಸ್ಮಿತ್‌ಗೆ 60 ವರ್ಷಗಳ ಕಠಿಣ ಕಾರ್ಮಿಕರ ಶಿಕ್ಷೆ ವಿಧಿಸಿದ್ದಾರೆ ಎಂದು ವರದಿಗಳು ತಿಳಿಸಿವೆ. ನ್ಯಾಯದಾನದ ಪ್ರಕ್ರಿಯೆಗೆ ಅಡಚಣೆಯಾಗಿದ್ದಕ್ಕಾಗಿ ಸ್ಮಿತ್‌ಗೆ 20 ವರ್ಷಗಳು ಮತ್ತು ಪಟೇಲ್ ಅವರ ಹತ್ಯೆಗೆ ಸಂಬಂಧಿಸಿದ ಪ್ರತ್ಯೇಕ ಅಪರಾಧಗಳಿಗಾಗಿ 20 ವರ್ಷಗಳ ಶಿಕ್ಷೆ ವಿಧಿಸಲಾಗಿದೆ.

ಕಾರ್ಮಿಕ ನಾಪತ್ತೆ



ಶ್ರೀರಂಗಪಟ್ಟಣ, ಮಾ.26–ಕೂಲಿ ಕೆಲಸಕ್ಕಾಗಿ ಮೈಸೂರಿಗೆ ತೆರಳಿದ್ದ ಕಾರ್ಮಿಕ ನಾಪತ್ತೆಯಾಗಿರುವ ಬಗ್ಗೆ ಶ್ರೀರಂಗಪಟ್ಟಣ ತಾಲೂಕು ಮಹದೇವಪುರ ಗ್ರಾಮದಿಂದ ವರದಿಯಾಗಿದೆ. ಗ್ರಾಮದ ಯಳವಯ್ಯ(63) ನಾಪತ್ತೆಯಾದವರಾಗಿದ್ದು, ಫೆ.14ರಂದು ಎಂದಿನಂತೆ ಕೂಲಿ ಕೆಲಸಕ್ಕಾಗಿ ಮೈಸೂರಿಗೆ ತೆರಳಿದ್ದ ಇವರು, ಮತ್ತೆ ವಾಪಸ್ಸಾಗಿಲ್ಲ ಎಂದು ಅವರ ಪುತ್ರ ಸಿದ್ದರಾಜು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಇವರ ಬಗ್ಗೆ ಮಾಹಿತಿ ಇರುವವರು ಅರಕೆರೆ ಠಾಣೆ ದೂರವಾಣಿ ಸಂಖ್ಯೆ 08236–259235 ಅಥವಾ ಮಂಡ್ಯ ಜಿಲ್ಲಾ ಪೊಲೀಸ್ ಕಂಟ್ರೋಲ್ ರೂಂ ಸಂಖ್ಯೆ 08232–224888 ಅನ್ನು ಸಂಪರ್ಕಿಸುವಂತೆ ಪೊಲೀಸ್ ಪ್ರಕಟಣೆ ತಿಳಿಸಿದೆ.

ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ಅರ್ಜಿ ಆಹ್ವಾನ

ಮೈಸೂರು,ಮಾ.26–ಬಿಳಿಗೆರೆ ಶಿಶು ಅಭಿವೃದ್ಧಿ ಯೋಜನೆ ವ್ಯಾಪ್ತಿಯ ಖಾಲಿ ಇರುವ ಅಂಗನವಾಡಿ ಕಾರ್ಯಕರ್ತೆ, ಸಹಾಯಕಿಯರ ಗೌರವ ಧನ ಸೇವೆಯ ಹುದ್ದೆಗಳ ಭರ್ತಿಗಾಗಿ ಆಫ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹ ಅಭ್ಯರ್ಥಿಗಳು ಏ.17(ಸಂಜೆ 5:30)ರೊಳಗೆ ಅರ್ಜಿ ಸಲ್ಲಿಸಬಹುದು. ಮಾಹಿತಿಗೆ ನಂಜನಗೂಡಿನಲ್ಲಿರುವ ಮಿನಿ ವಿಧಾನಸೌಧದ ಬಿಳಿಗೆರೆ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಗಳ ಕಚೇರಿ (ಕಟ್ಟಡ ರೂಂ ನಂ:50) ಅಥವಾ ದೂ.ಸಂ.08221–297171 ಸಂಪರ್ಕಿಸಿ.

ರಾಹುಲ್ ಗಾಂಧಿ ಅನರ್ಹತೆಗೆ ಖಂಡನೆ



ಮೈಸೂರು, ಮಾ.26–ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಸಂಸದ ಸ್ಥಾನದಿಂದ ಅನರ್ಹಗೊಳಿಸಿದ ಕ್ರಮವನ್ನು ಕೆಪಿಸಿಸಿ ಅಲ್ಪಸಂಖ್ಯಾತ ವಿಭಾಗದ ಸಂಘಟನಾ ಕಾರ್ಯದರ್ಶಿ ಸಯ್ಯದ್ ಫಾರೂಖ್ ಖಂಡಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಭಾರತ್ ಜೋಡೋ ಯಾತ್ರೆ ಮೂಲಕ ರಾಹುಲ್ ಗಾಂಧಿಯವರು ಗಳಿಸಿರುವ ಜನ ಮನ್ನಣೆ ಕಂಡು 2024ರ ಲೋಕಸಭಾ ಚುನಾವಣೆಯಲ್ಲಿ ಅಧಿಕಾರ ತಪ್ಪುತ್ತದೆ ಎಂಬ ಹೆದರಿಕೆಯಿಂದ ರಾಹುಲ್ ಗಾಂಧಿಯವರ ಸಂಸದ ಸ್ಥಾನವನ್ನು ಅನರ್ಹಗೊಳಿಸಲಾಗಿದೆ. ಲೋಕಸಭೆಯಲ್ಲಿ ರಾಹುಲ್ ಗಾಂಧಿಯವರ ಪ್ರಶ್ನೆಗಳಿಗೆ ಉತ್ತರಿಸಲಾಗದೇ ಅವರು ಲೋಕಸಭೆಯಲ್ಲಿ ಧ್ವನಿ ಎತ್ತದಂತೆ ಮಾಡಲು ಕೇಂದ್ರದ ಬಿಜೆಪಿ ಸರ್ಕಾರ ಪಿತೂರಿ ನಡೆಸಿದೆ ಎಂದು ಅವರು ಆರೋಪಿಸಿದ್ದಾರೆ.

ಕ್ಷೇತ್ರದ ಜನತೆ ಬೆಂಬಲದಿಂದ ರಾಜ್ಯದ ಅಭಿವೃದ್ಧಿ ಮಾಡಿದ್ದೇನೆ

ತಿ.ನರಸೀಪುರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಹೆಚ್.ಸಿ. ಮಹದೇವಪ್ಪ



ತಿ.ನರಸೀಪುರ, ಮಾ.26– ಕ್ಷೇತ್ರದ ಜನತೆಯ ಬೆಂಬಲ, ವಿಶ್ವಾಸದಿಂದ ಯಾರಿಗೂ ದ್ರೋಹ ಮಾಡದೇ ಕ್ಷೇತ್ರ ಹಾಗೂ ರಾಜ್ಯದ ಅಭಿವೃದ್ಧಿ ಮಾಡಿದ್ದೇನೆ ಎಂದು ತಿ.ನರಸೀಪುರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದರು.

ತಾಲೂಕಿನ ಕಲಿಯೂರು ಗ್ರಾಮದ ನಾಯಕರ ಕಾಲೋನಿಯಲ್ಲಿ ಆಯೋಜಿಸಿದ್ದ ಪಕ್ಷ ಸೇರ್ಪಡೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನಾನು ಆರೋಗ್ಯ ಸಚಿವನಾಗಿದ್ದ ವೇಳೆ ಪ್ರತಿ ಜಿಲ್ಲೆ, ತಾಲೂಕುಗಳಲ್ಲಿ ಬಡವರು, ಮಧ್ಯಮ ವರ್ಗ, ಪ.ಜಾತಿ ಮತ್ತು ಪಂಗಡ ಸೇರಿದಂತೆ ಎಲ್ಲಾ ವರ್ಗದ ಜನರ ಅನುಕೂಲಕ್ಕಾಗಿ ಉತ್ತಮ ಆಸ್ಪತ್ರೆ ನಿರ್ಮಿಸಿ, ಗುಣಮಟ್ಟದ ಚಿಕಿತ್ಸೆ ಜೊತೆಗೆ ಔಷಧ ದೊರೆಯುವಂತೆ ಮಾಡಿದೆ. ಇದನ್ನು ಗಮನಿಸಿದ ವಿಶ್ವಸಂಸ್ಥೆ ಮೆಚ್ಚುಗೆ ವ್ಯಕ್ತಪಡಿಸಿತ್ತು ಎಂದರು.

ಗ್ರಾಮೀಣಾಭಿವೃದ್ಧಿ ಸಚಿವನಾಗಿದ್ದ ವೇಳೆ ಯುವಕರಲ್ಲಿ ನಾಯಕತ್ವ ಗುಣ ಬೆಳೆಸಲು ಗ್ರಾಪಂ ಮೂಲಕ ಅಧಿಕಾರ ವಿಕೇಂದ್ರಿಕರಣ ಮಾಡಿದ್ದೆ. ಲೋಕೋಪಯೋಗಿ ಸಚಿವನಾಗಿದ್ದ ವೇಳೆ ಮಹದೇಶ್ವರ ಬೆಟ್ಟದಿಂದ ಬಸವ ಕಲ್ಯಾಣದವರೆಗೆ ಯಾವುದೇ ತಾರತಮ್ಯ ಮಾಡದೇ 40 ಸಾವಿರ ಕಿಮೀ ಉದ್ದದ ಗುಣಮಟ್ಟದ ರಸ್ತೆ ಅಭಿವೃದ್ಧಿಪಡಿಸಿದೆ. ರಾಜ್ಯದ ಪ.ಜಾತಿ, ವರ್ಗಗಳ ಕಾಲೋನಿಗಳನ್ನು ಸಾವಿರಾರು ಕೋಟಿ ಅನುದಾನ ನೀಡಿ ರಸ್ತೆ, ಚರಂಡಿ ಅಭಿವೃದ್ಧಿ ಪಡಿಸಿದೆ ಎಂದರು.

ಸಾರ್ವಜನಿಕ ಕ್ಷೇತ್ರ ಸೇವೆಗೋಸ್ಕರ ಇರುವ ಕ್ಷೇತ್ರವಾಗಿದ್ದು, ಲಾಭದಾಯಕ ಹುದ್ದೆಗಲ್ಲ ಎಂದ ಅವರು ನಾನು ಮತ್ತು ಸಿದ್ದರಾಮಯ್ಯ ಮನೆ ಮಠ ಬಿಟ್ಟು ಕಳೆದ 40 ವರ್ಷಗಳ ಕಾಲ ಎಲ್ಲಾ ಸಮುದಾಯದ ಅಭಿವೃದ್ಧಿಗಾಗಿ ಶ್ರಮಿಸಿದ್ದೇವೆ. ಇಷ್ಟೆಲ್ಲಾ ಮಾಡಿದರೂ ನನ್ನನ್ನು ಯಾರೂ ಒಳ್ಳೆಯವನು ಎನ್ನದಿದ್ದರೂ, ಕೆಟ್ಟವನು ಎಂದು ಹೇಳಿಸಿಕೊಳ್ಳದೇ ನಿಮ್ಮೆಲ್ಲರ ಆಶೀರ್ವಾದದಿಂದ ಸಾರ್ವಜನಿಕ ಜೀವನದಲ್ಲಿದ್ದೇನೆ. ಕಳೆದ ಚುನಾವಣೆಯಲ್ಲಿ ಸೋಲಾದರೂ ಅಭಿವೃದ್ಧಿ ಮಾಡಿದ ಆತ್ಮತೃಪ್ತಿ ಇದೆ. ನನ್ನ ಅಧಿಕಾರವಧಿಯಲ್ಲಿ ಕ್ಷೇತ್ರದ ಪ್ರತಿ ಹಳ್ಳಿಗಳ ಅಭಿವೃದ್ಧಿಗೆ ಶ್ರಮಿಸಿದ್ದೇನೆ. ಎಲ್ಲರನ್ನು ಪ್ರೀತಿ ವಿಶ್ವಾಸದಿಂದ ಕಂಡಿದ್ದೇನೆ ಅಲ್ಲದೇ ಜನರು ಶಾಂತಿ ನೆಮ್ಮದಿಯಿಂದ ಸಂತೋಷದಿಂದ ಇರುವ ವಾತಾವರಣ ಕಲ್ಪಿಸಿಕೊಟ್ಟಿದೆ ಎಂದರು.

ಚುನಾವಣೆಗೆ ಸ್ಪರ್ಧಿಸದಿರಲು ನಿರ್ಧರಿಸಿದ್ದೆ: ಈ ಬಾರಿ ನನಗೆ ಚುನಾವಣೆಯಲ್ಲಿ ಸ್ಪರ್ಧಿಸಬೇಕೆಂಬ ಮನಸ್ಸಿರಲಿಲ್ಲ ಹೀಗಾಗಿ ನನ್ನ ಮಗನನ್ನು ಕ್ಷೇತ್ರದಿಂದ ಕಣಕ್ಕಿಳಿಸಲು ನಿರ್ಧರಿಸಿ, ಟಿಕೆಟ್‌ಗಾಗಿ ಅರ್ಜಿ ಹಾಕಿರಲಿಲ್ಲ. ಆದರೆ ನಂಜನಗೂಡು ಕ್ಷೇತ್ರದ ಜನರು ನನ್ನ ಅಭಿವೃದ್ಧಿ ಕಾರ್ಯ ನೋಡಿ ನಂ.ಗೂಡಿನಿಂದ ಸ್ಪರ್ಧಿಸುವಂತೆ ಒತ್ತಾಯ ಮಾಡಿ ಅರ್ಜಿ ಹಾಕಿಸಿದ್ದರು. ದುರದೃಷ್ಟವಶಾತ್ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ವಿಧಿವಶರಾದರು. ಅಂತಹ ಸಂದರ್ಭ ಕಿಡಿಗೇಡಿಗಳು ಅವರ ಸಾವಿನಲ್ಲೂ ಕೀಳು ಮಟ್ಟದ ರಾಜಕೀಯ ಮಾಡಿದ್ದನ್ನು ನೋಡಿ ನನ್ನ ಮನಸ್ಸಿಗೆ ನೋವುಂಟಾಯಿತು. ಹೀಗಾಗಿ ನಾನು ನನ್ನ ಮಗನ ರಾಜಕೀಯ ಭವಿಷ್ಯ ಮೂಲೆಗುಂಪು ಮಾಡಿ ಧ್ರುವನಾರಾಯಣ್ ಪುತ್ರನಿಗೆ ಬೆಂಬಲ ನೀಡಿದೆ. ಇದೀಗ ಅವರೇ ಅಭ್ಯರ್ಥಿಯಾಗಿದ್ದಾರೆ ಎಂದ ಅವರು ಅಧಿಕಾರ ಬೇಡ ಎನ್ನುವ ಯಾವುದಾದರೂ ರಾಜಕಾರಣಿ ನೋಡಿದ್ದೀರಾ ಎಂದು ಮಹದೇವಪ್ಪ ನೊಂದುಕೊಂಡರು.

ಸುನೀಲ್‌ಗೆ 3ನೇ ಬಾರಿ ಟಿಕೆಟ್ ಮಿಸ್: ನನ್ನ ಮಗ ಸುನೀಲ್ ಬೋಸ್ 2008, ನಂ.ಗೂಡು ಉಪ ಚುನಾವಣೆ ಹಾಗೂ ಈ ಬಾರಿಯ ಚುನಾವಣೆಯಲ್ಲಿ ಸ್ಪರ್ಧಿಸಲು ಪ್ರಯತ್ನಿಸಿದ್ದ. ಆದರೆ ಪಕ್ಷದ ಹೈಕಮಾಂಡ್ ನಿರ್ಧಾರದಿಂದ 3 ಬಾರಿ ಟಿಕೆಟ್ ಮಿಸ್ ಆಗಿದೆ. ಸ್ವತಃ ರಾಹುಲ್ ಗಾಂಧಿ ಅವರೇ ಅವನನ್ನು ಎಂಎಲ್‌ಸಿ ಮಾಡುತ್ತೇನೆಂದರೂ, ಅದಕ್ಕೆ ತಲೆಕೆಡಿಸಿಕೊಳ್ಳದೇ ನನಗೆ ಕ್ಷೇತ್ರದ ಅಭಿವೃದ್ಧಿ ಮುಖ್ಯ, ಜನ ಮುಖ್ಯ, ಜನ ಮನಗೆ ಅಧಿಕಾರ ನೀಡಿದ್ದಾರೆ. ಅವರ ಸೇವೆ ಮುಖ್ಯ ಎಂದು ಪಕ್ಷದ ತೀರ್ಮಾನಕ್ಕೆ ಬದ್ಧವಾಗಿ ಕೆಲಸ ಮಾಡುತ್ತೇನೆ ಎಂದು ಹೇಳಿದ್ದಾರೆ ಎಂದರು.

ಬಿಜೆಪಿ ಎಸ್ಟಿ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಲಿಯೂರು ವೆಂಕಟೇಶ್, ಹೊಸಪುರ ಕೆ.ಮಲ್ಲು, ಗ್ರಾಪಂ ಉಪಾಧ್ಯಕ್ಷ ಎನ್.ರಾಜೇಶ್, ಸದಸ್ಯರಾದ ತಲಕಾಡು ಸುಂದರ ನಾಯಕ, ಬೂದಹಳ್ಳಿ ಸಿದ್ದರಾಜು, ಗುತ್ತಿಗೆದಾರ ಮಲ್ಲಿಕಾರ್ಜುನ ಸೇರಿದಂತೆ ನೂರಾರು ಮಂದಿ ಕಾಂಗ್ರೆಸ್‌ಗೆ ಸೇರ್ಪಡೆಯಾದರು. ಇದಕ್ಕೂ ಮುನ್ನಾ, ಗ್ರಾಮಕ್ಕೆ ಆಗಮಿಸಿದ ಡಾ.ಹೆಚ್.ಸಿ.ಮಹದೇವಪ್ಪನವರಿಗೆ ಗ್ರಾಮಸ್ಥರು ಭರ್ಜರಿ ಸ್ವಾಗತ ಕೋರಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು ಮಾತನಾಡಿದರು. ನಿವೃತ್ತ ಲೆಕ್ಕಾಧಿಕಾರಿ ಮಾಲಂಗಿ ಜೆ.ಶಿವಸ್ವಾಮಿ, ಕೆಪಿಸಿಸಿ ಹಿಂ.ವರ್ಗಗಳ ವಿಭಾಗದ ಪ್ರಧಾನ ಕಾರ್ಯದರ್ಶಿ ಉಕ್ಕಲಗೆರೆ ಬಸವಣ್ಣ, ಕಾರ್ಯದರ್ಶಿ ಎಂ.ಬಿ.ಚಂದ್ರಶೇಖರ್, ಗ್ರಾಪಂ ಅಧ್ಯಕ್ಷೆ ಗಾಯಿತ್ರಿ, ಕನ್ನಹಳ್ಳಿ ಲಕ್ಷ್ಮಣ, ಸದಸ್ಯರಾದ ಸಿ.ಸೋಮಣ್ಣ, ಆರ್.ಮಾದೇಶ್, ಎಂ.ಎಸ್.ನಟರಾಜಮೂರ್ತಿ, ಮಾಜಿ ಅಧ್ಯಕ್ಷ ಎಸ್.ರಾಜೇಶ್, ಮಾಜಿ ಸದಸ್ಯ ಶಿವಣ್ಣ, ತಾಪಂ ಮಾಜಿ ಸದಸ್ಯರಾದ ನರಸಿಂಹಮಾದನಾಯಕ, ಚಿನ್ನಮ್ಮ ಸಿದ್ದರಾಜು, ಮುಖಂಡರಾದ ಶಿವಮಲ್ಲನಾಯಕ, ವಿಜಯ ಕುಮಾರ್, ಗೋವಿಂದ, ಹಂಸರಾಜು, ಪ್ರದೀಪ್ ಕುಮಾರ್, ಬಸವರಾಜು, ಸತ್ಯ, ಎಸ್.ಪ್ರದೀಪ, ಲಕ್ಷಣ ನಾಯಕ, ಶಿವಣ್ಣ, ಕೃಷ್ಣಮೂರ್ತಿ, ಮಹದೇವ, ಕೆ.ಎಂ.ಬಸವರಾಜು, ಶಿವು, ಸಿ.ಪ್ರದೀಪ್, ಸಿದ್ದರಾಜು, ರಾಜೇಶ್, ರಾಜೀವ್, ನಂಜಯ್ಯ ಇನ್ನಿತರರಿದ್ದರು.

ಸಿದ್ದು ಒತ್ತಾಯಕ್ಕೆ ಮಣಿದು ಮತ್ತೆ ಸ್ಪರ್ಧೆ

ನಮ್ಮ ನಾಯಕರಾದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯರ ಬಳಿ ಚುನಾವಣೆಗೆ ನಿಲ್ಲದಿರುವ ಬಗ್ಗೆ ನನ್ನ ನಿರ್ಧಾರ ತಿಳಿಸಿ, ನಾನು ಸಾಮಾನ್ಯ ಕಾರ್ಯಕರ್ತನಾಗಿ ಕೆಲಸ ಮಾಡುತ್ತೇನೆ. ಸುನೀಲ್ ಬೋಸ್ ಅರ್ಜಿ ಹಾಕಿದ್ದಾನೆ. ಅವನಿಗೆ ಸರಿ ಎಂದರೆ ಟಿಕೆಟ್ ಕೊಡಿ ಇಲ್ಲದಿದ್ದರೆ ಯಾರಿಗಾದ್ರು ಕೊಡಿ ಎಂದಿದ್ದೆ. ಇದಕ್ಕೆ ಒಪ್ಪದ ಸಿದ್ದರಾಮಯ್ಯ ಇದು ಪ್ರಮುಖ ಚುನಾವಣೆಯಾದ್ದರಿಂದ ನೀನು ಸ್ಪರ್ಧೆ ಮಾಡಲೇಬೇಕು. ನೀನು ನಿಲ್ಲದಿದ್ದರೆ ರಾಜ್ಯದಲ್ಲಿ ಬೇರೆಯದೇ ಪರಿಣಾಮ ಬೀರುತ್ತದೆ ಎಂದು ಹೇಳಿ ಒತ್ತಾಯಿಸಿದ್ದರಿಂದ ಮತ್ತೆ ಚುನಾವಣೆಗೆ ಸ್ಪರ್ಧಿಸಿದ್ದೇನೆ.

– **ಡಾ.ಹೆಚ್.ಸಿ.ಮಹದೇವಪ್ಪ, ಮಾಜಿ ಸಚಿವ.**



ತಿ.ನರಸೀಪುರದಲ್ಲಿ ನಡೆದ ಬಿಜೆಪಿ ಯುವ ಮೋರ್ಚಾ ಚೈತನ್ಯ ಸಮಾವೇಶದಲ್ಲಿ ಬಿಜೆಪಿ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಸಮ್ಮುಖದಲ್ಲಿ ಯುವ ಉದ್ಯಮಿ ಎಸ್‌ಎಂಆರ್ ಪ್ರಕಾಶ್ ಬಿಜೆಪಿಗೆ ಸೇರ್ಪಡೆಯಾದರು. ಚಿತ್ರದಲ್ಲಿ ಕ್ಷೇತ್ರಾಧ್ಯಕ್ಷ ಲೋಕೇಶ್ ನಾಯಕ್, ಪುರಸಭಾ ಸದಸ್ಯ ಎಸ್.ಕೆ..ಕಿರಣ್ ಮತ್ತಿತರರಿದ್ದಾರೆ.

ಕೋಟೆಯಲ್ಲಿ ದಿ.ಆರ್.ಧ್ರುವನಾರಾಯಣ್‌ಗೆ ನುಡಿನಮನ



ಹೆಚ್.ಡಿ.ಕೋಟೆ, ಮಾ.26– ತಾಲೂಕಿನ ಬಗ್ಗೆ ಅಪಾರ ಅಭಿಮಾನವಿಟ್ಟುಕೊಂಡಿದ್ದ ದಿ.ಆರ್.ಧ್ರುವನಾರಾಯಣ್ ಕ್ಷೇತ್ರವನ್ನು ಸಾಕಷ್ಟು ಅಭಿವೃದ್ಧಿಪಡಿಸಿ ಮನೆ ಮಗನಾಗಿದ್ದರು ಎಂದು ತಾಲೂಕು ಆದಿ ಕರ್ನಾಟಕ ಮಹಾಸಭಾ ಅಧ್ಯಕ್ಷ ಹೆಚ್.ಸಿ. ನರಸಿಂಹಮೂರ್ತಿ ತಿಳಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ಆದಿ ಕರ್ನಾಟಕ ಮಹಾಸಭಾದಿಂದ ಆಯೋಜಿಸಿದ್ದ ದಿ.ಆರ್. ಧ್ರುವನಾರಾಯಣ್ ನುಡಿನಮನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಜಕೀಯದ ಹಲವು ದಾರಿಗಳನ್ನು ಹೇಳಿಕೊಟ್ಟು ಕಿರಿಯ ರಾಜಕಾರಣಿಗಳನ್ನು ಹುಟ್ಟು ಹಾಕಿದ ಜನನಾಯಕ ಧ್ರುವನಾರಾಯಣ್. ಅವರ ಹೆಸರಿನಲ್ಲಿ ಅಭಿಮಾನಿ ಬಳಗ ಕಟ್ಟುತ್ತೇವೆ ಎಂದಾಗ ಅದನ್ನು ತಿರಸ್ಕರಿಸಿದ ಸರಳ ಸಜ್ಜನಿಕೆಯ ನಾಯಕ. ಇಂದು ಅವರನ್ನು ಕಳೆದುಕೊಂಡು ತಬ್ಬಲಿಯಾಗಿದ್ದೇವೆ ಎಂದ ಅವರು, ಮುಂಬರುವ ಚುನಾವಣೆಯಲ್ಲಿ ಅವರ ಪುತ್ರ ದರ್ಶನ್‌ಗೆ ಸಹಾಯ ಮಾಡುವ ಮೂಲಕ ತಾಲೂಕಿನ ಋಣ ತೀರಿಸಿ. ಆ ಕುಟುಂಬಕ್ಕೆ ಆಶ್ರಯವಾಗಿರೋಣ ಎಂದರು.

ಮಾಜಿ ಜಿಪಂ ಸದಸ್ಯ ಹೆಚ್.ಸಿ.ಲಕ್ಷ್ಮಣ್ ಮಾತನಾಡಿ, ಧ್ರುವನಾರಾಯಣ್ ಹಾಗೂ ನಾನು ಜೊತೆಯಲ್ಲೇ ವಿದ್ಯಾಭ್ಯಾಸ ಮಾಡಿದೆವು. ಕಾಲೇಜು ಶಿಕ್ಷಣ ಮುಗಿಸಿ ರಾಜ್ಯಸಭೆ ಮಾಜಿ ಸದಸ್ಯ ರಾಜಶೇಖರಮೂರ್ತಿ ಅವರ ಬಳಿ ಹೋಗುವವರೆಗೂ ನಾನು ಅವರ ಜೊತೆಯಲ್ಲೆ ಇದ್ದೆ. ಇಂದಿನ ರಾಜಕೀಯ ವ್ಯವಸ್ಥೆಯಲ್ಲಿ ಎಲ್ಲರ ಮನಗೆದ್ದಿದ್ದ ಧ್ರುವನಾರಾಯಣ್ ಸಾಕಷ್ಟು ಅಭಿವೃದ್ಧಿ ಕಾರ್ಯ ಮಾಡಿ ಮನೆ ಮಾತಾಗಿದ್ದರು. ವ್ಯಕ್ತಿ ಜೀವನವನ್ನು ಅವನ ಮರಣದಲ್ಲಿ ನೋಡು ಎನ್ನುವ ಗಾದೆ ಮಾತಿನಂತೆ ಧ್ರುವನಾರಾಯಣ್ ಅವರು ಸಾವನ್ನಪ್ಪಿದ ದಿನ ಇಡೀ ರಾಜ್ಯವೇ ಕಂಬನಿ ಮಿಡಿಯಿತು ಎಂದರು.

ನಾಯಕ ಸಮಾಜದ ತಾಲೂಕು ಅಧ್ಯಕ್ಷ ಎಂ.ಸಿ.ದೊಡ್ಡನಾಯಕ, ದಿ.ಆರ್.ಧ್ರುವನಾರಾಯಣ್ ಹಾಗೂ ದಿ.ಚಿಕ್ಕಮಾದು ಅವರ ಒಡನಾಟವನ್ನು ಸ್ಮರಿಸಿದರು. ಮುಖಂಡ ಎಂ.ಡಿ.ಮಂಚಯ್ಯ ಮಾತನಾಡಿದರು.

ಕಾರ್ಯಕ್ರಮದಲ್ಲಿ ಆದಿ ಕರ್ನಾಟಕ ಮಹಾಸಭೆ ಮಾಜಿ ಅಧ್ಯಕ್ಷ ಶಿವಣ್ಣ ಮುದ್ದಮಲ್ಲಯ್ಯ, ಮಲಾರ ಪುಟ್ಟಯ್ಯ, ಮರಿದೇವಯ್ಯ, ಶಿವಯ್ಯ, ಬಸವರಾಜು, ಜಿಪಂ ಮಾಜಿ ಸದಸ್ಯ ವೆಂಕಟಸ್ವಾಮಿ, ಏಜಾಜ್ ಪಾಷ, ಮಾಲಾರ ಚಂದ್ರಶೇಖರ್, ನಾಗರಾಜು, ಸಣ್ಣಕುಮಾರ್, ವಕೀಲರಾದ ಸಿದ್ದಪ್ಪಾಜಿ, ಸೋಮಶೇಖರ, ಶಿವರಾಜು, ರಮೇಶ್, ಕೆ.ಎಂ.ನಾಗರಾಜು, ದೇವರಾಜು, ಪುಟ್ಟಮಾದು, ಪ್ರಕಾಶ್ ಬುದ್ದ, ಉಯ್ಯಂಬಳ್ಳಿ ಸ್ವಾಮಿ, ಶಂಕರ, ನೆನಪು ರವಿ, ಚನ್ನ ಕೋಟೆ, ಜವರಯ್ಯ, ಪರಶಿವ ಮೂರ್ತಿ, ಮಹದೇವು, ಚಾ.ಶಿವ ಕುಮಾರ್, ಶಿವರಾಜು, ಮಲ್ಲೇಶ್, ಸುರೇಶ್, ಸೋಮಣ್ಣ ಇತರರಿದ್ದರು.

ಯುವಕರು ಕಲೆ, ಸಂಸ್ಕೃತಿ ಉಳಿಸಬೇಕಿದೆ



ಹಿರೀಕ್ಯಾತನಹಳ್ಳಿ, ಮಾ.26– ಯುವಕರು ಕಲೆ, ಸಂಸ್ಕೃತಿ ಹಾಗೂ ಕಲಾವಿದರನ್ನು ಉಳಿಸುವ ಕೆಲಸ ಮಾಡಬೇಕಾಗಿದೆ ಎಂದು ಹುಣಸೂರು ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ಹುಣಸೂರು ತಾಲೂಕಿನ ಹಿರೀಕ್ಯಾತನ ಹಳ್ಳಿಯಲ್ಲಿ ಶ್ರೀಮಲ್ಲಿಕಾರ್ಜುನಸ್ವಾಮಿ ಕೃಪಾಪೋಷಿತ ನಾಟಕ ಮಂಡಳಿ ಏರ್ಪಡಿಸಿದ್ದ ಪೌರಾಣಿಕ ನಾಟಕದಲ್ಲಿ ಇಬ್ಬರು ನಿವೃತ್ತ ಯೋಧರು ಹಾಗೂ ಮುಂಬಡ್ತಿ ಪಡೆದ ಡಿವೈಎಸ್ಪಿ ಅವರನ್ನು ಸನ್ಮಾನಿಸಿ ಮಾತನಾಡಿದ ಅವರು, ಯುವಕರು ಕಲೆ ಉಳಿಸಲು ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದ ಅವರು, ವೇದಿಕೆಯಲ್ಲಿ ವಿಶೇಷವಾಗಿ ಮಾಜಿ ಸೈನಿಕರನ್ನು ಗೌರವಿಸುವ ಜೊತೆಗೆ ಪೊಲೀಸ್ ಇಲಾಖೆಯಲ್ಲಿ ಡಿವೈಎಸ್ಪಿಯಾಗಿ ಮುಂಬಡ್ತಿ ಹೊಂದಿರುವ ಅಧಿಕಾರಿಯನ್ನು ಸನ್ಮಾನಿಸುವ ಮೂಲಕ ಕಲೆ ಜೊತೆಗೆ ದೇಶ ಮತ್ತು ನಾಡು ಕಟ್ಟುವವರನ್ನು ಗುರುತಿಸಿರುವುದು ಹೆಮ್ಮೆ ತಂದಿದೆ ಎಂದರು.

2023ರ ಚುನಾವಣೆಯಲ್ಲಿ ರೈತಪರ ಸರ್ಕಾರವನ್ನು ಅಧಿಕಾರಕ್ಕೆ ತಂದು ತಮ್ಮ ಸೇವೆ ಮಾಡಲು ಅವಕಾಶ ಮಾಡಿಕೊಡುವಂತೆ ಮನವಿ ಮಾಡಿದರು. ಈ ವೇಳೆ ನಿವೃತ್ತ ಸೈನಿಕರಾದ ಮಂಜುನಾಥ್, ಶಶಿಕಿರಣ್, ಡಿವೈಎಸ್ಪಿ ಸುಹೇಲ್ ಅಹಮದ್, ಜಿಪಂ ಮಾಜಿ ಸದಸ್ಯ ಸಿ.ಟಿ. ರಾಜಣ್ಣ, ತಾಲೂಕು ಜೆಡಿಎಸ್ ಮುಖಂಡ ಹಾಗೂ ಸಮಾಜ ಸೇವಕ ಶ್ರೀಧರ್, ಮುಖಂಡರಾದ ದಿವಾಕರ, ರಾಜೇಗೌಡ, ಶ್ರೀಧರ್, ಕೃಷ್ಣೇಗೌಡ ನಾಗಮಂಗಲ ಸತೀಶ್ ಇತರರಿದ್ದರು.

ಹದಿನಾರಲ್ಲಿ ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರ



ನಂಜನಗೂಡು, ಮಾ.26– ತಾಲೂಕಿನ ಹದಿನಾರು ಗ್ರಾಮದ ಶ್ರೀಗುರು ವಿದ್ಯಾ ವಿಕಾಸ ಕೇಂದ್ರ(ರಿ.) ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕೆ.ಎನ್.ಪುಟ್ಟಬುದ್ಧಿ ಫೌಂಡೇಶನ್, ನಾರಾಯಣ ಹೃದಯಾಲಯ, ಬಡನಾಡು ಸಂಘ, ಡಾ.ಚಂದ್ರಶೇಖರ್ ಮತ್ತು ತಂಡ, ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ, ಬಾಲಾಜಿ ಐ ಕೇರ್ ಮತ್ತು ಅಪ್ಟಿಕಲ್ಸ್, ಗ್ರಾಮ ಒನ್ ವರುಣಾ ಇವರ ಸಂಯುಕ್ತಾಶ್ರಯದಲ್ಲಿ ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಿತು.

ಶಿಬಿರ ಉದ್ಘಾಟಿಸಿ ಮಾತನಾಡಿದ ಮಲ್ಲನಮೂಲೆ ಶ್ರೀಗುರು ಕಂಬಳೀಶ್ವರ ಮಠದ ಶ್ರೀಚನ್ನಬಸವ ಸ್ವಾಮೀಜಿ, ಕೆ.ಎನ್.ಪುಟ್ಟಬುದ್ಧಿ ಫೌಂಡೇಶನ್ ಜನಪರ ಕಾರ್ಯಗಳನ್ನು ಮಾಡುತ್ತಿದ್ದು, ಗ್ರಾಮೀಣ ಜನರ ಆರೋಗ್ಯದ ದೃಷ್ಟಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಿರುವುದು ಶ್ಲಾಘನೀಯ ಎಂದರು.

ವರುಣಾ ಕ್ಷೇತ್ರದ ಮುಖಂಡ ಶರತ್ ಪುಟ್ಟಬುದ್ಧಿ ಮಾತನಾಡಿ, ಗ್ರಾಮೀಣ ಜನರು ತಮ್ಮ ಆರೋಗ್ಯದ ಬಗ್ಗೆ ಗಮನ ಹರಿಸಬೇಕು. ಆಗಾಗ್ಗೆ ತಪಾಸಣೆಗೆ ಒಳಗಾಗುವುದರಿಂದ ಬರಬಹುದಾದ ಖಾಯಿಲೆಗಳನ್ನು ತಡೆಗಟ್ಟಲು ಹಾಗೂ ಅದನ್ನು ಬೇಗ ಪತ್ತೆ ಹಚ್ಚಿ ಚಿಕಿತ್ಸೆ ಪಡೆಯಲು ಸಾಧ್ಯವಾಗುತ್ತದೆ ಎಂದರು.

ಶಿಬಿರದಲ್ಲಿ 300ಕ್ಕೂ ಹೆಚ್ಚು ಮಂದಿ ಬಿಪಿ, ಶುಗರ್, ತಪಾಸಣೆ, ಇಸಿಜಿ, ಎಕೋ ಸೇರಿದಂತೆ ಇನ್ನಿತರ ತಪಾಸಣೆಗೆ ಒಳಗಾದರು. ಇದೇ ಸಂದರ್ಭ ಆಯುಷ್ಮಾನ್ ಭಾರತ ನೋಂದಣಿ ಮಾಡಿಕೊಡಲಾಯಿತು.

ಈ ವೇಳೆ ಜಿಲ್ಲಾ ಪರಿಷತ್ ಅಧ್ಯಕ್ಷ ಕೆ.ಎನ್.ಪುಟ್ಟಬುದ್ಧಿ, ಶ್ರೀಗುರುಮಲ್ಲೇಶ್ವರ ದಾಸೋಹ ಮಠದ ಗುರುಮಲ್ಲೇದೇವ ಸ್ವಾಮೀಜಿ, ಮೈಸೆಮ್ ಕಾಲೇಜಿನ ಶಿವಪ್ಪ, ಬಿಜೆಪಿ ಮುಖಂಡರಾದ ಸತೀಶ್, ತಾಪಂ ಮಾಜಿ ಸದಸ್ಯರಾದ ರೇವಣ್ಣ, ನಂಜುಂಡ ಸ್ವಾಮಿ, ಗುರುಮಲ್ಲಮ್ಮ, ಡಾ.ಚಂದ್ರಶೇಖರ್, ಡಾ.ಅಚ್ಯುತ್‌ರಾವ್, ಕೃಷ್ಣ ವೈದ್ಯರು, ಆಸ್ಪತ್ರೆ ಸಿಬ್ಬಂದಿ ಹಾಗೂ ಗ್ರಾಮಸ್ಥರಿದ್ದರು.

ಕೋಟೆಯಲ್ಲಿ ಬಿಜೆಪಿ ಅಭ್ಯರ್ಥಿ ಗೆಲುವಿಗೆ ಶ್ರಮಿಸಿ



ಹೆಚ್.ಡಿ.ಕೋಟೆ, ಮಾ.25– ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಗೆಲುವಿಗೆ ಶ್ರಮಿಸುವಂತೆ ಕಾರ್ಯಕರ್ತರಿಗೆ ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿ ಡಾ.ಹೆಚ್.ವಿ. ಕೃಷ್ಣಸ್ವಾಮಿ ಕರೆ ನೀಡಿದರು.

ತಾಲೂಕಿನ ಹಳ್ಳದಮನುಗನಹಳ್ಳ ಗ್ರಾಮದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಮತ್ತೊಮ್ಮೆ ಬಿಜೆಪಿ ಸ್ಪಷ್ಟ ಬಹುಮತದೊಂದಿಗೆ ಅಧಿಕಾರಕ್ಕೆ ಬರಲಿದೆ. ಹೀಗಾಗಿ ಕಾರ್ಯಕರ್ತರು ಕ್ಷೇತ್ರದ ಮನೆ ಮನೆಗೆ ತೆರಳಿ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಜನಪರ ಅಭಿವೃದ್ಧಿ ಕಾರ್ಯಗಳ ಬಗ್ಗೆ ತಿಳಿಸುವ ಮೂಲಕ ಪಕ್ಷ ಸಂಘಟಿಸಬೇಕು ಎಂದ ಅವರು, ಮುಂಬರುವ ಚುನಾವಣೆಯಲ್ಲಿ ಕ್ಷೇತ್ರದಲ್ಲಿ ಕಮಲ ಅರಳಿಸಲು ಶ್ರಮಿಸುವಂತೆ ಮನವಿ ಮಾಡಿದರು.

ಇದೇ ವೇಳೆ ಕೃಷ್ಣಸ್ವಾಮಿ ನೇತೃತ್ವದಲ್ಲಿ ನೂರಾರು ಜೆಡಿಎಸ್ ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಬಿಜೆಪಿಗೆ ಸೇರ್ಪಡೆಗೊಂಡರು. ಈ ವೇಳೆ ಜಿಲ್ಲಾ ಸಹ ವಕ್ತಾರ ಸಿ.ಕೆ.ಗಿರೀಶ್, ಗ್ರಾಪಂ ಸದಸ್ಯೆ ಮಂಗಳಾ, ಮುಖಂಡ ಮಹೇಶ್, ಚಂದ್ರಪ್ಪ ಕೃಷ್ಣಸ್ವಾಮಿ ಅವರ ಆಪ್ತ ಕಾರ್ಯದರ್ಶಿ ಶಿವಕುಮಾರ್, ಶಿವು, ರಾಜು, ನೂರಾರು ಕಾರ್ಯಕರ್ತರು, ಮುಖಂಡರು ಹಾಜರಿದ್ದರು.

ಗೋಳೂರಲ್ಲಿ ಶ್ರೀಭಗೀರಥ ಯುವ ವೇದಿಕೆ ಉದ್ಘಾಟನೆ



ನಂಜನಗೂಡು, ಮಾ.26– ಸಂಘ ಮಾಡಿದ ಮೇಲೆ ಅದರ ಉದ್ದೇಶ ತಿಳಿದು ಜನಾಂಗದ ಅಭಿವೃದ್ಧಿ, ನೊಂದ ಜನರಿಗೆ ಸಹಾಯ ಮಾಡುವಂತೆ ಸಂಘದ ಸದಸ್ಯರಿಗೆ ಶಾಸಕ ಬಿ.ಹರ್ಷವರ್ಧನ್ ಕಿವಿಮಾತು ಹೇಳಿದರು.

ತಾಲೂಕಿನ ಗೋಳೂರು ಗ್ರಾಮದಲ್ಲಿ ಶ್ರೀಭಗೀರಥ ಯುವ ವೇದಿಕೆ(ರಿ) ಉದ್ಘಾಟಿಸಿ ಮಾತನಾಡಿದ ಅವರು, ಎಲ್ಲಾ ಸಂಘಗಳು ಹಣಕಾಸು ವ್ಯವಹಾರದಿಂದಲೇ ವಿಭಜನೆಯಾಗುತ್ತದೆ. ಆದ್ದರಿಂದ ಹಣಕಾಸು ವಿಚಾರದಲ್ಲಿ ಅನುಮಾನ ಬಾರದಂತೆ ಎಚ್ಚರಿಕೆ ವಹಿಸಿ ಸಭೆಗಳನ್ನು ನಡೆಸಿ, ಚರ್ಚಿಸಿ ಆನಂತರ ನಿರ್ಧಾರ ತೆಗೆದುಕೊಂಡು ಉತ್ತಮ ಕೆಲಸ ಕಾರ್ಯ ಮಾಡಬೇಕೆಂದು ಸಲಹೆ ನೀಡಿದರು.

ಅತ್ಯಂತ ಹಿಂದುಳಿದಿರುವ ನೀವು ಆರ್ಥಿಕವಾಗಿ ಬೆಳೆಯುವ ಮೂಲಕ ಮೇಲೆ ಬರಬೇಕು. ಈಗಾಗಲೇ ಉಪ್ಪಾರ ಸಮುದಾಯವಿರುವ ತಾಲೂಕಿನ ಹೆಮ್ಮರಗಾಲ, ನೇರಳೆ ಸೇರಿದಂತೆ ಹಲವು ಗ್ರಾಮಗಳಿಗೆ 7 ಕೋಟಿಗೂ ಹೆಚ್ಚು ಅನುದಾನವನ್ನು ಸಿಸಿ ರಸ್ತೆ, ಚರಂಡಿ, ಸಮುದಾಯ ಭವನಗಳಿಗೆ ನೀಡಿದ್ದು, ನಂಜನಗೂಡು ನಗರದ ಬೈಪಾಸ್ ರಸ್ತೆಯ ಉಪ್ಪಾರ ಸಮುದಾಯ ಭವನಕ್ಕೆ 8 ಕುಂಟೆ ಜಾಗ 2 ಕೋಟಿ ಅನುದಾನ ನೀಡಲಾಗಿದೆ. ತಾಲೂಕಿನಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯ ಮಾಡುತ್ತಿದ್ದೇನೆ. ಮುಂದೆಯೂ ಮಾಡುತ್ತೇನೆ. ನಿಮ್ಮಗಳ ಸಹಕಾರ ಬಹಳ ಮುಖ್ಯ ಎಂದರು.

ಮುಖಂಡ ಸೋಮಣ್ಣ ಮಾತನಾಡಿ, ನಮ್ಮ ಉಪ್ಪಾರ ಸಮಾಜ ಶೈಕ್ಷಣಿಕ ಮತ್ತು ಆರ್ಥಿಕವಾಗಿ ಹಿಂದುಳಿದಿದೆ. ವಿದ್ಯಾವಂತರ ಸಹಕಾರದೊಂದಿಗೆ ಅವಿದ್ಯಾವಂತರನ್ನು ಸೇರಿಸಿಕೊಂಡು ಸಂಘ ಸಮಾಜದ ಜನರಿಗೆ ಅನುಕೂಲವಾಗುವಂತಹ ಕೆಲಸ ಕಾರ್ಯ ಮಾಡುವ ಮೂಲಕ ಉತ್ತಮ ಹೆಸರನ್ನು ಗಳಿಸಬೇಕು ಎಂದರು.

ಸಭೆಯಲ್ಲಿ ಎಸ್‌ಟಿ ಮೋರ್ಚಾ ರಾಜ್ಯ ಕಾರ್ಯದರ್ಶಿ ಚಿಕ್ಕರಂಗನಾಯಕ, ತಾಲೂಕು ಬಿಜೆಪಿ ಅಧ್ಯಕ್ಷ ಪಿ.ಮಹೇಶ್ ಮಾತನಾಡಿದರು. ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಶಿವಣ್ಣ, ನಗರಸಭಾ ಸದಸ್ಯ ಗಿರೀಶ್, ಗ್ರಾಪಂ ಸದಸ್ಯ ಮುದ್ದುಮಾದಶೆಟ್ಟಿ, ಯಜಮಾನರಾದ ಕೃಷ್ಣ, ಕಿಟ್ಟಪ್ಪ, ಶಿವಸ್ವಾಮಿ, ನಂಜಪ್ಪ, ಮಹದೇವು, ಸಂಘದ ಅಧ್ಯಕ್ಷ ಚಂದನ್‌ಕುಮಾರ್ ಸೇರಿದಂತೆ ಪದಾಧಿಕಾರಿಗಳಾದ ಶ್ಯಾಮ್, ಜೀವನ್ ಕುಮಾರ್, ರಾಜೇಶ್, ಮಹದೇವಸ್ವಾಮಿ, ಮಹೇಶ್, ರಾಜೇಶ್ ಇದ್ದರು.

ಪ್ರಧಾನಿ ಮೋದಿಗೆ ರಾಹುಲ್ ಗಾಂಧಿ ಎದುರಿಸುವ ಧೈರ್ಯವಿಲ್ಲ

ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ



ಹುಣಸೂರು, ಮಾ.26– ರಾಹುಲ್ ಗಾಂಧಿ ಅವರು ಲೋಕಸಭೆಯಲ್ಲಿ ಪ್ರಧಾನಿ ಮೋದಿಯವರ ಬಂಡವಾಳ ಬಯಲು ಮಾಡುತ್ತಾರೆ ಎಂಬ ಕಾರಣಕ್ಕೆ ರಾಹುಲ್ ಗಾಂಧಿಯವರಿಗೆ ಶಿಕ್ಷೆಯಾಗುವಂತೆ ಮಾಡಿ ಅವರ ಲೋಕಸಭಾ ಸದಸ್ಯತ್ವ ಅನರ್ಹಗೊಳಿಸಿದ್ದಾರೆ. ಮೋದಿ ಅವರಿಗೆ ರಾಹುಲ್ ಗಾಂಧಿ ಎದುರಿಸುವ ಧೈರ್ಯ ಮತ್ತು ಶಕ್ತಿ ಇಲ್ಲ ಎಂದು ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.

ನಗರದ ಕಲ್ಕುಣಿಕೆ ಬಡಾವಣೆಯಲ್ಲಿ ನಡೆದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಮೋದಿ ಅವರು ಅಧಿಕಾರಕ್ಕೆ ಬರುವ ಮೊದಲು ಸ್ವಿಸ್ ಬ್ಯಾಂಕ್‌ನಿಂದ ಕಪ್ಪು ಹಣ ತಂದು ಪ್ರತಿಯೊಬ್ಬರ ಖಾತೆಗೆ ಹಾಕುವುದಾಗಿ ತಿಳಿಸಿದ್ದರು. ಅಲ್ಲದೇ ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿಸುವುದಾಗಿ ಭರವಸೆ ನೀಡಿದ್ದರು. ಆದರೆ ಅಧಿಕಾರಕ್ಕೆ ಬಂದ ಮೇಲೆ ಅವುಗಳನ್ನು ಈಡೇರಿಸುವಲ್ಲಿ ವಿಫಲರಾಗಿದ್ದಾರೆ. ಪ್ರಸ್ತುತ ಕೇಂದ್ರ ಮತ್ತು ರಾಜ್ಯದಲ್ಲಿ ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ನಿರುದ್ಯೋಗ, ಉದ್ಯೋಗಕ್ಕೆ ಲಂಚ, ಕಮಿಷನ್ ಹಾವಳಿ ತಾಂಡವಾಡುತ್ತಿದೆ ಎಂದರು.

ಬಿಜೆಪಿಯವರು ಸುಳ್ಳು ಭರವಸೆಗಳನ್ನು ನೀಡಿ, ಧರ್ಮ ಧರ್ಮಗಳ ನಡುವೆ ವಿಷಬೀಜ ಬಿತ್ತುತ್ತಿದ್ದಾರೆ. ರಾಜ್ಯ ಬಿಜೆಪಿ ಸರ್ಕಾರ ಶೇ.40 ಕಮಿಷನ್ ಪಡೆಯುವ ಮೂಲಕ ಭ್ರಷ್ಟಾಚಾರದಲ್ಲಿ ತೊಡಗಿದೆ. ಮಾಡಾಳು ವಿರೂಪಾಕ್ಷಪ್ಪನ ಮಗ ಲಂಚ ಸ್ವೀಕರಿಸುವಾಗ ಲೋಕಾಯುಕ್ತರಿಗೆ ರೆಡ್‌ಹ್ಯಾಂಡ್ ಆಗಿ ಸಿಕ್ಕಿಬಿದ್ದ. ಶಾಸಕರ ಮನೆಯಲ್ಲಿ ಕೋಟಿ ಕೋಟಿ ಹಣ ಸಿಕ್ಕಿತ್ತು. ಆದರೂ ಅವರ ಮೇಲೆ ಕ್ರಮ ಕೈಗೊಳ್ಳಲಿಲ್ಲ. ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಮೋದಿ ಅವರಿಗೆ 40% ಭ್ರಷ್ಟಾಚಾರದ ಬಗ್ಗೆ ಮಾಹಿತಿ ನೀಡಿದರೂ ಯಾವುದೇ ಕ್ರಮ ಆಗಲಿಲ್ಲ ಎಂದರು.

ಮಾಜಿ ಸಿಎಂ ಸಿದ್ದರಾಮಯ್ಯ ಸರ್ಕಾರದಲ್ಲಿ ಕೊಟ್ಟ ನೂರಾರು ಭಾಗ್ಯಗಳನ್ನು ಬಿಜೆಪಿ ಸರ್ಕಾರ ರದ್ದು ಮಾಡಿದೆ. ರಾಜ್ಯದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಒಂದೇ ನಾಣ್ಯದ 2 ಮುಖ. ಮುಂಬರುವ ಚುನಾವಣೆಯಲ್ಲಿ ಜೆಡಿಎಸ್ 25 ಸ್ಥಾನಗಳನ್ನು ಗೆಲ್ಲುವುದಿಲ್ಲ. ಹೀಗಿರುವಾಗ ಜೆಡಿಎಸ್‌ಗೆ ನೀವು ಮತ ನೀಡಿದರೆ ಅವರು ಮತ್ತೊಮ್ಮೆ ಬಿಜೆಪಿ ಸರ್ಕಾರದ ಜೊತೆ ಸೇರಿ ಸರ್ಕಾರ ಮಾಡುತ್ತಾರೆ. ಹೀಗಾಗಿ ನೀವು ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಹೆಚ್.ಪಿ.ಮಂಜುನಾಥ್ ಬೆಂಬಲಿಸುವಂತೆ ಮನವಿ ಮಾಡಿದರು.

ಶಾಸಕ ಅನಿಲ್ ಮಾತನಾಡಿ, ನಮ್ಮ ತಂದೆಯವರನ್ನು ಕಾಂಗ್ರೆಸ್ ಪಕ್ಷ ರಾಜಕೀಯವಾಗಿ ಬೆಳೆಸಿತು. ಬಳಿಕ ನಮ್ಮ ತಂದೆ ಜೆಡಿಎಸ್ ಪಕ್ಷಕ್ಕೆ ಹೋಗಿ ಹೆಚ್.ಡಿ.ಕೋಟೆ ಶಾಸಕರಾದರು. ಅವರ ನಿಧನದ ಬಳಿಕ ನಾನು ಮತ್ತು ನನ್ನ ತಾಯಂದಿರು ಬೆಂಗಳೂರಿನಲ್ಲಿ ಜೆಡಿಎಸ್ ವರಿಷ್ಠರನ್ನು ಭೇಟಿ ಮಾಡಲು ಹೋದಾಗ ಅವರು ಗೇಟಿನ ಬಾಗಿಲು ಹಾಕಿಕೊಂಡರು. ನಾವು ಅವರನ್ನು ಭೇಟಿಯಾಗಲು ಅವಕಾಶ ಕೊಡಲಿಲ್ಲ. ಏಕೆಂದರೆ ನಮ್ಮ ಬಳಿ ಹಣವಿಲ್ಲವೆಂದು ನಮಗೆ ಟಿಕೆಟ್ ನಿರಾಕರಿಸಿದರು. ಅಂದು ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯನವರನ್ನು ಭೇಟಿ ಮಾಡಿದಾಗ ಅವರು ನನ್ನ ಬೆನ್ನು ತಟ್ಟಿ ನಿಮ್ಮ ಕುಟುಂಬದ ಜೊತೆ ನಾವಿದ್ದೇವೆ ಎಂದು ತಿಳಿಸಿ ಟಿಕೆಟ್ ನೀಡಿದರು. ಅಂದು ನಮಗೆ ಧ್ರುವನಾರಾಯಣ್ ಸಾಹೇಬರು ಮತ್ತು ಮಂಜಣ್ಣ ನಮಗೆ ಸಹಾಯ ಮಾಡಿದರು ಎಂದರು.

ಅಮಿತ್ ವಿ.ದೇವರಹಟ್ಟಿ, ವಕೀಲ ಚನ್ನಬಸಪ್ಪ ಮಾತನಾಡಿದರು. ಇದೇ ವೇಳೆ ಜೆಡಿಎಸ್‌ನ ಕೆಲವು ಮುಖಂಡರು ಕಾಂಗ್ರೆಸ್‌ಗೆ ಸೇರ್ಪಡೆಗೊಂಡರು. ಇದಕ್ಕೂ ಮುನ್ನಾ, ಶಾಸಕರಾದ ಮಂಜುನಾಥ್, ಡಾ.ಯತೀಂದ್ರ, ಅನಿಲ್ ಸೇರಿದಂತೆ ಇನ್ನಿತರರನ್ನು ಪಟ್ಟಣದ ಕಲ್ಕುಣಿಕೆ ಸರ್ಕಲ್‌ನಿಂದ ತೆರೆದ ವಾಹನದಲ್ಲಿ ಮೆರವಣಿಗೆ ಮಾಡಲಾಯಿತು. ಈ ವೇಳೆ ಪುಷ್ಪವೃಷ್ಟಿಗೈದು, ಜೆಸಿಬಿ ಮೂಲಕ ಬೃಹತ್ ಸೇಬಿನ ಹಾರ ಹಾಕಿ ಸಂಭ್ರಮಿಸಿದರು. ಇದೇ ವೇಳೆ ಆರ್.ಧ್ರುವನಾರಾಯಣ್‌ಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಕಾರ್ಯಕ್ರಮದಲ್ಲಿ ಬ್ಲಾಕ್ ಅಧ್ಯಕ್ಷ ಟಿ.ವಿ.ನಾರಾಯಣ್, ನಗರಾಧ್ಯಕ್ಷ ರಮೇಶ್, ಬಿಳಿಕೆರೆ ಬ್ಲಾಕ್ ಅಧ್ಯಕ್ಷ ದೇವರಾಜ್ ಹಾಗೂ ಕಾರ್ಯಾಧ್ಯಕ್ಷ ಪುಟ್ಟರಾಜು ಸೇರಿದಂತೆ ಇನ್ನಿತರರಿದ್ದರು.

“ನಾನು ಇಲ್ಲೆ ಹುಟ್ಟಿ ಬೆಳೆದವನು, ಇಲ್ಲೇ ಮಣ್ಣಾಗುವವನು, ಕಲ್ಕುಣಿಕೆ ನನ್ನೂರು. 15 ವರ್ಷಗಳಿಂದ ತಾಲೂಕಿನ ಜನರ ಕಷ್ಟ ಸುಖಕ್ಕೆ ನಾನು ಇದ್ದೇನೆ. ನಾನು ಕಾಮಧೇನು ರೀತಿಯಲ್ಲಿ ಈ ತಾಲೂಕಿನ ಜನತೆಯ ಸೇವೆ ಮಾಡಿದ್ದೇನೆ. ಸಿದ್ದರಾಮಯ್ಯರ ಗರಡಿಯಲ್ಲಿ ಬೆಳೆದವನು, 15 ವರ್ಷಗಳಿಂದ ತಾಲೂಕಿಗೆ ಬರದವರು ಕಳೆದ 15 ದಿನಗಳ ಹಿಂದೆ ಬಂದು ಶಾಂತಿಯನ್ನು ಹಾಳು ಮಾಡುತ್ತಿದ್ದೀರಿ. ಎಲ್ಲಿಂದಲೋ ಬಂದು ಶೆಟ್ಟಿಯನ್ನು 15ದಿನಗಳ ಒಳಗಾಗಿ ಇಲ್ಲಿಂದ ಖಾಲಿ ಮಾಡಿಸುತ್ತೇನೆ ಎಂದು ಹೇಳಿದ್ದಾರೆ. ಚುನಾವಣೆ ನಂತರ ಗಂಟು ಮೂಟೆ ಕಟ್ಟಿಕೊಂಡು ಅವರೇ ಹೋಗ್ತಾರೆ. ಕೋವಿಡ್, ಅತಿವೃಷ್ಟಿ ವೇಳೆ ಬರಲಿಲ್ಲಾ. ನಿಮಗೆ ಜನರು ತಕ್ಕಪಾಠ ಕಲಿಸುತ್ತಾರೆ. ನನ್ನನ್ನು ಮೂರು ಬಾರಿ ಶಾಸಕ ಆಗಿದ್ದಾನೆ. ಅವನ ಸೇವೆ ಸಾಕು ಎಂದು ಹೇಳುವ ನೀವು ನಾಲ್ಕು ಬಾರಿ ಶಾಸಕ, ಎರಡು ಬಾರಿ ಮಂತ್ರಿ ಆಗಿಲ್ಲವೇ ಎಂದು ಜಿಟಿಡಿಯವರ ಹೆಸರೇಳದೆ ಕುಟುಕಿದರು. ಇವರ ಅಪಪ್ರಚಾರಕ್ಕೆ ಮರುಳಾಗಬೇಡಿ.

– **ಹೆಚ್.ಪಿ.ಮಂಜುನಾಥ್, ಶಾಸಕ.**

ಪರಿಶಿಷ್ಟ ಜಾತಿ, ಹಿಂದುಳಿದ ವರ್ಗದವರ ಶ್ರೇಯೋಭಿವೃದ್ಧಿಗಾಗಿ ಮೀಸಲಾತಿ ವರ್ಗಾವಣೆ

ಸಂಸದ ಪ್ರತಾಪ್ ಸಿಂಹ ಪ್ರತಿಪಾದನೆ



ಮೈಸೂರು, ಮಾ.26(ಎಂಟಿವೈ)– ರಾಜ್ಯ ಸರ್ಕಾರ ಮೀಸಲಾತಿ ಪ್ರಮಾಣ ಹೆಚ್ಚಳ ಮಾಡುವ ಮೂಲಕ ಹಿಂದುಳಿದವರ ಮತ್ತು ಪರಿಶಿಷ್ಟ ಜಾತಿಯ ಮೀಸಲಾತಿಯನ್ನು ವರ್ಗೀಕರಿಸುವ ಎಲ್ಲರ ಶ್ರೇಯೋಭಿವೃದ್ಧಿಗೆ ಕೊಡುಗೆ ನೀಡಿದೆ ಎಂದು ಸಂಸದ ಪ್ರತಾಪ ಸಿಂಹ ತಿಳಿಸಿದರು.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದುಳಿದ ಜಾತಿ ಮತ್ತು ವರ್ಗಗಳ ಭವಿಷ್ಯದ ದೃಷ್ಟಿಯಿಂದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಿಜೆಪಿ ನೇತೃತ್ವದ ಬಿಜೆಪಿ ಸರ್ಕಾರ ತೆಗೆದುಕೊಂಡಿರುವ ನಿರ್ಧಾರ ಮೈಲಿಗಲ್ಲಾಗಿ ಪರಿಣಮಿಸಿದೆ. ಮೀಸಲಾತಿ ಸಂಬಂಧಪಟ್ಟ ಈ ಐತಿಹಾಸಿಕ ನಿರ್ಧಾರದಿಂದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಮತ್ತು ಉದ್ಯೋಗಾಕಾಂಕ್ಷಿಗಳಿಗೆ ಅನುಕೂಲವಾಗಲಿದೆ. ಕಾಂಗ್ರೆಸ್ ಮತ್ತು ಜೆಡಿಎಸ್ ನಾಯಕರು ಹಿಂದುಳಿದ ವರ್ಗದ ಉದ್ಧಾರಕರು ಎಂದು ಬಿಂಬಿಸಿಕೊಳ್ಳುತ್ತಿದ್ದಾರೆ. ಜಾತಿ–ಜಾತಿಗಳನ್ನು ಎತ್ತಿಕಟ್ಟಿ, ಬಿಜೆಪಿ ಸರ್ಕಾರ ಮೀಸಲಾತಿಯನ್ನು ತೆಗಿಯುತ್ತಾರೆ ಎಂದು ವದಂತಿ ಹಬ್ಬಿಸುತ್ತಿದ್ದಾರೆ. ಆದರೆ, ಪ್ರಧಾನಿ ನರೇಂದ್ರ ಮೋದಿ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹಿಂದುಳಿದ ಜಾತಿ ಮತ್ತು ವರ್ಗಗಳಿಗೆ ನ್ಯಾಯ ಒದಗಿಸಿದ್ದಾರೆ. ಹಿಂದುಳಿದ ವರ್ಗಗಳ ಬಗ್ಗೆ ಮಾತನಾಡುವ ಮಾಜಿ ಮುಖ್ಯಮಂತ್ರಿಗಳಾದ ಹೆಚ್.ಡಿ.ಕುಮಾರಸ್ವಾಮಿ ಹಾಗೂ ಸಿದ್ದರಾಮಯ್ಯ ಸೇರಿದಂತೆ ಇತರೇ ಯಾವುದೇ ನಾಯಕರ ಕೊಡುಗೆ ಶೂನ್ಯ ಎಂದರು.

ಡಾ.ಅಂಬೇಡ್ಕರ್ ಅವರು ನೀಡಿದ ಸಂವಿಧಾನದಲ್ಲಿ ಧರ್ಮಾಧಾರಿತವಾದ ಮೀಸಲಾತಿ ಇರಲಿಲ್ಲ. ತುಳಿತಕ್ಕೆ ಒಳಪಟ್ಟ ಜಾತಿಗಳನ್ನು ಮೇಲೆತ್ತಲು ಸಂವಿಧಾನದಲ್ಲಿ ಮೀಸಲಾತಿಯನ್ನು ಕಲ್ಪಿಸಿದ್ದರು. ಆದರೆ, 1990ರ ದಶಕದಲ್ಲಿ ಅಂಬೇಡ್ಕರ್ ಅವರ ಮತ್ತು ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ಮುಸ್ಲಿಂರಿಗೆ ಶೇ.4 ಮೀಸಲಾತಿಯನ್ನು ನೀಡಲಾಗಿತ್ತು. ಈಗ ಅದನ್ನು ತೆಗೆದು ಮೀಸಲಾತಿ ಹೆಚ್ಚಳಕ್ಕೆ ಆಗ್ರಹಿಸಿದ್ದ ಒಕ್ಕಲಿಗರಿಗೆ ಮತ್ತು ವೀರಶೈವ ಲಿಂಗಾಯಿತರಿಗೆ ತಲಾ ಶೇ.2ರಷ್ಟು ಹಂಚಿಕೆ ಮಾಡಿ, ಮೀಸಲಾತಿ ಹೆಚ್ಚಳ ಮಾಡಿರುವುದು ಮತ್ತು ಪರಿಶಿಷ್ಟ ಜಾತಿಯ ಎಡಗೈ ಸಮುದಾಯಕ್ಕೆ ಶೇ.6 ಮತ್ತು ಬಲಗೈ ಪಂಗಡಕ್ಕೆ ಶೇ.5.5ರಷ್ಟು ಹೆಚ್ಚಳ ಮಾಡಲಾಗಿದೆ. ನ್ಯಾ.ಸದಾಶಿವ ಆಯೋಗದ ವರದಿಯ ಆಶಯದಂತೆ ವರ್ಗೀಕರಿಸುವುದು ನ್ಯಾಯ ಸಮ್ಮತವಾಗಿದೆ ಎಂದು ಅಭಿಪ್ರಾಯಪಟ್ಟದರು.

> ‘ಮುಂದಿನ ಮುಖ್ಯಮಂತ್ರಿ ಎಂದು ಬಿಂಬಿಸಿಕೊಂಡಿದ್ದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಂಜಿಕೆಯಿಂದ ವರುಣಾ ಕ್ಷೇತ್ರಕ್ಕೆ ವಾಪಸ್ಸಾಗಿದ್ದಾರೆ. ಹಳೇ ಗಂಡನ ಪಾದವೇ ಗತಿ ಎಂಬಂತೆ ಮಗನ ನೆಲೆಯನ್ನು ಕಸಿದುಕೊಂಡು ಸಿದ್ದರಾಮಯ್ಯ ವರುಣಾದಲ್ಲಿ ಸ್ಪರ್ಧಿಸುತ್ತಿದ್ದಾರೆ. 30–40 ಶಾಸಕರನ್ನು ಗೆಲ್ಲಿಸಿಕೊಂಡು ಬರಬೇಕಾದ ನಾಯಕನಿಗೆ ಬೇರೆ ಯಾವುದೇ ಕ್ಷೇತ್ರದಲ್ಲಿ ನಿಂತರೂ ಸೋಲುವ ಭಯವಿದೆ. ಅವರ ರಾಜಕೀಯ 2018ರ ಚುನಾವಣೆಯಲ್ಲಿ ಮುಗಿದಿದೆ. ಈ ಬಾರಿ ಕೊನೆಯಾಗುತ್ತದೆ. ವರುಣಾ ಕ್ಷೇತ್ರದ ಹೊರತಾಗಿ ಬೇರೆ ಯಾವ ಕ್ಷೇತ್ರದಲ್ಲೂ ಅವರು ಸ್ಪರ್ಧಿಸುವುದಿಲ್ಲ. - ಪ್ರತಾಪ್ ಸಿಂಹ, ಸಂಸದರು

ಹಳೇ ಮೈಸೂರು ಭಾಗದಲ್ಲಿ ಒಕ್ಕಲಿಗರ ಹೆಸರು ಹೇಳಿಕೊಂಡು ಮತ್ತು ವೀರಶೈವರ ಒಡೆದು ರಾಜಕೀಯ ಮಾಡುತ್ತಾ, ಕೇವಲ ಭರವಸೆಗಳನ್ನು ನೀಡುತ್ತಿರುವ ಜೆಡಿಎಸ್ ಮತ್ತು ಕಾಂಗ್ರೆಸ್‌ಗೆ ಈ ಸಮುದಾಯಗಳ ಬಗ್ಗೆ ಹೊಂದಿರುವ ನೈಜ ಕಾಳಜಿಯನ್ನು ಬಿಜೆಪಿ ಸಾಬೀತು ಪಡಿಸಿದೆ. ಒಕ್ಕಲಿಗರ ಹೆಸರು ಹೇಳಿಕೊಂಡು ರಾಜಕಾರಣ ಮಾಡುವ ಜೆಡಿಎಸ್ ಮಕ್ಕಳ ಮತ್ತು ಮನೆ ಮಂದಿಯ ಬಗ್ಗೆ ಮಾತ್ರ ಯೋಚನೆ ಮಾಡುವ ಪಕ್ಷ ಎಂದು ಲೇವಡಿ ಮಾಡಿದರು.

49 ಕೆರೆಗೆ ನೀರು : ಹುಣಸೂರು ತಾಲೂಕಿನ ಮರದೂರು ಗ್ರಾಮದದ ಬಳಿ ಲಕ್ಷ್ಮಣತೀರ್ಥ ನದಿಯಿಂದ ಹುಣಸೂರು ತಾಲ್ಲೂಕು ವ್ಯಾಪ್ತಿಯಯಲ್ಲಿ ಬತ್ತಿದ್ದ 49 ಕೆರೆಗಳಿಗೆ ನೀರು ತುಂಬಿಸುವ 85 ಕೋಟಿ ರೂ. ವೆಚ್ಚದ ಕಾಮಗಾರಿಗೆ ಕ್ಯಾಬಿನೆಟ್ ಸಭೆಯಲ್ಲಿ ಅನುಮೋದನೆ ದೊರತಿದೆ. 18 ತಿಂಗಳಲ್ಲಿ ಚಾಮುಂಡೇಶ್ವರಿ, ಹುಣಸೂರು, ಪಿರಿಯಾಪಟ್ಟಣ ತಾಲ್ಲೂಕಿನ ಎಲ್ಲ ಮನೆಗಳಿಗೂ ಟ್ಯಾಪ್ ಮೂಲಕ ಕುಡಿಯುವ ನೀರು ಸರಬರಾಜಾಗಲು ಕ್ರಮ ಕೈಗೊಳ್ಳಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ನಗರಾಧ್ಯಕ್ಷ ಶ್ರೀವತ್ಸ, ಪ್ರಧಾನ ಕಾರ್ಯದರ್ಶಿ ಸೋಮಸುಂದರ, ಮುಖಂಡರಾದ ಎಚ್.ಜಿ. ಗಿರಿಧರ್, ಮಹೇಶ್ ರಾಜೇ ಅರಸ್, ಕೇಬಲ್ ಮಹೇಶ್ ಇತರರು ಹಾಜರಿದ್ದರು.



ಮಾಜಿ ಶಾಸಕ ವಾಸು ಅವರು ತಮ್ಮ ಹುಟ್ಟುಹಬ್ಬದ ಅಂಗವಾಗಿ ಮೈಸೂರಿನ ಅಶೋಕ ರಸ್ತೆಯಲ್ಲಿರುವ ಮಸೀದಿ ಮುಂಭಾಗ ಮುಸ್ಲಿಂ ಬಾಂಧವರಿಗೆ ಸಮೋಸ ಮತ್ತು ತಂಪು ಪಾನೀಯ ನೀಡಿದರು. ಈ ವೇಳೆ ಮಾಜಿ ಕಾರ್ಪೋರೇಟರ್ ಸುಹೇಲ್ ಬೇಗ್ ಇನ್ನಿತರರಿದ್ದರು.

ನಟ ಸಲ್ಮಾನ್ ಖಾನ್‌ಗೆ ಜೀವಬೆದರಿಕೆ ಇ–ಮೇಲ್; ಶಂಕಿತ ಆರೋಪಿ ಬಂಧನ

ಮುಂಬೈ, ಮಾ.26– ನಟ ಸಲ್ಮಾನ್ ಖಾನ್‌ಗೆ ಜೀವಬೆದರಿಕೆ ಇ–ಮೇಲ್ ಕಳುಹಿಸಿದ ಆರೋಪದ ಮೇಲೆ ಮುಂಬೈ ಪೊಲೀಸರು ರಾಜಸ್ಥಾನ ಮೂಲದ ವ್ಯಕ್ತಿಯೊಬ್ಬರನ್ನು ಬಂಧಿಸಿದ್ದಾರೆ. ರಾಜಸ್ಥಾನದ ನಿವಾಸಿಯಾಗಿರುವ ಶಂಕಿತ ವ್ಯಕ್ತಿಯನ್ನು ಬಾಂದ್ರಾ ಪೊಲೀಸ್ ಠಾಣೆಯ ತಂಡ ಬಂಧಿಸಿದ್ದು, ಮುಂಬೈಗೆ ಕರೆತರಲಾಗುತ್ತಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬೆದರಿಕೆ ಇ–ಮೇಲ್ ಕುರಿತು ಇತ್ತೀಚೆಗೆ ಬಾಂದ್ರಾ ಪೊಲೀಸ್ ಠಾಣೆಯಲ್ಲಿ ಪ್ರಶಾಂತ್ ಗುಂಜಾಲ್ಕರ್ ಎಂಬವರು ದೂರು ದಾಖಲಿಸಿದ್ದರು. ಪೊಲೀಸರ ಪ್ರಕಾರ, ದೂರುದಾರರು ಸಲ್ಮಾನ್ ಖಾನ್ ಅವರ ಬಾಂದ್ರಾ ಮೂಲದ ನಿವಾಸಕ್ಕೆ ಆಗಾಗ್ಗೆ ಭೇಟಿ ನೀಡುತ್ತಿದ್ದು, ಕಲಾವಿದ ನಿರ್ವಹಣಾ ಕಂಪನಿಯನ್ನು ನಡೆಸುತ್ತಿದ್ದಾರೆ ಎಂದು ತಿಳಿದುಬಂದಿದೆ.

ಇತ್ತೀಚೆಗೆ ಗ್ಯಾಲಕ್ಸಿ ಅಪಾರ್ಟ್‌ಮೆಂಟ್‌ನಲ್ಲಿರುವ ಸಲ್ಮಾನ್ ಖಾನ್ ಅವರ ಕಚೇರಿಯಲ್ಲಿ ಗುಂಜಾಲ್ಕರ್ ಅವರು ಇದ್ದಾಗ, "ರೋಹಿತ್ ಗಾರ್ಗ್" ಐಡಿಯಿಂದ ಬೆದರಿಕೆ ಇಮೇಲ್ ಬಂದಿತ್ತು. ಹಿಂದಿಯಲ್ಲಿ ಬರೆದ ಇ–ಮೇಲ್‌ನಲ್ಲಿ, "ಗೋಲ್ಡಿ ಭಾಯ್ (ದರೋಡೆಕೋರ ಗೋಲ್ಡಿ ಬ್ರಾರ್) ವಿಷಯವನ್ನು ಮುಚ್ಚಲು ಸಲ್ಮಾನ್ ಖಾನ್ ಅವರೊಂದಿಗೆ ಮುಖಾಮುಖಿ ಮಾತನಾಡಲು ಬಯಸಿದ್ದರು", "ಅಗ್ಲಿ ಬಾರ್, ಜಟ್ಕಾ ದೇಖ್ನೆ ಕೋ ಮಿಲೇಗಾ (ನೀವು ಶೀಘ್ರದಲ್ಲೇ ಆಘಾತಕಾರಿ ಸಂಗತಿ ನೋಡುತ್ತೀರಿ)" ಬರೆಯಲಾಗಿತ್ತು ಎಂದು ಪೊಲೀಸರು ಹೇಳಿದ್ದಾರೆ.

ಪ್ರಕರಣದ ವಿವರವಾದ ತಾಂತ್ರಿಕ ತನಿಖೆಯ ನಂತರ, ಆರೋಪಿಯ ಸ್ಥಳದ ಬಗ್ಗೆ ಪೊಲೀಸರು ಮಾಹಿತಿ ಪಡೆದರು. ನಂತರ ತಂಡವನ್ನು ರಾಜಸ್ಥಾನಕ್ಕೆ ಕಳುಹಿಸಲಾಗಿತ್ತು. ಇದೀಗ ಕಾರ್ಯಾಚರಣೆ ನಡೆಸಿದ ಪೊಲೀಸರು ವ್ಯಕ್ತಿಯನ್ನು ಬಂಧಿಸಿದ್ದಾರೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ವೈಕುಂಠ ಸಮಾರಾಧನೆ



ಸಿ.ಕುಮಾರ್
ಕೆ.ಜಿ.ಕೊಪ್ಪಲು

ಇವರು ದಿನಾಂಕ 17.03.2023 ಶುಕ್ರವಾರ ದೈವಾಧೀನರಾಗಿದ್ದು ತತ್ಸಂಬಂಧ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ: 27.03.2023 ಸೋಮವಾರ ಬೆಳಗ್ಗೆ 11 ಗಂಟೆಗೆ ಕಾವೇರಿ ಶಾಲೆ ಪಕ್ಕದ ರುದ್ರಭೂಮಿಯಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ದುಃಖತಪ್ತರು: ತಂದೆ, ತಾಯಿ, ಪತ್ನಿ, ಮಕ್ಕಳು, ಅಕ್ಕ ಅಣ್ಣ, ತಮ್ಮಂದಿರು ಹಾಗೂ ಕುಟುಂಬವರ್ಗದವರು.

ಒಂದನೇ ವರ್ಷದ ಪುಣ್ಯಸ್ಮರಣೆ




ಎಸ್. ನಾಗೇಂದ್ರ
Assist. Reserve Sub Inspector
ದುಃಖತಪ್ತರು: ಶ್ರೀಮತಿ ಎಸ್. ಸುಶೀಲ ಸರಸ್ವತಿ, ಅರ್ಕೇಶ, ಸುಪ್ರಿಯ, ರವಿಕುಮಾರ, ಮೊಮ್ಮಕ್ಕಳು ಮತ್ತು ಕುಟುಂಬವರ್ಗದವರು

ಮೈಸೂರು ಮಿತ್ರ 43 ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೌದಿ ದೊರೆ ಭಾರತಕ್ಕೆ ಉಡುಗೊರೆಯಾಗಿ ನೀಡಿದ್ದ 'ಅಬ್ದುಲ್ಲಾ' ಚೀತಾ ಸಾವು



ಹೈದರಾಬಾದ್, ಮಾ.26– ಸೌದಿ ಅರೇಬಿಯಾದ ದೊರೆ ಹೈದರಾಬಾದ್‌ನ ಜವಾಹರಲಾಲ್ ನೆಹರು ಮೃಗಾಲಯಕ್ಕೆ ನೀಡಿದ್ದ 'ಅಬ್ದುಲ್ಲಾ' ಎಂಬ ಗಂಡು ಚೀತಾ ಹೃದಯಾಘಾತದಿಂದ ಮೃತಪಟ್ಟಿದೆ ಎಂದು ತಿಳಿದುಬಂದಿದೆ.

15 ವರ್ಷದ ಈ ಚಿತಾ ಕೆಲ ದಿನಗಳಿಂದ ಕಾಯಿಲೆಯಿಂದ ಬಳಲುತ್ತಿತ್ತು. ಆದರೆ, ಚಿಕಿತ್ಸೆ ಫಲಿಸದೇ ಹೃದಯಾಘಾತವಾಗಿ ಮೃತಪಟ್ಟಿದೆ ಎನ್ನಲಾಗಿದೆ. 2013 ರಲ್ಲಿ ಸೌದಿ ದೊರೆ ಮೊಹಮ್ಮದ್ ಅಲ್ ಸೌದ್ ಅವರು ಭಾರತ ಭೇಟಿ ವೇಳೆ ಹಿಬಾ ಎಂಬ ಒಂದು ಹೆಣ್ಣು ಚೀತಾ ಹಾಗೂ ಅಬ್ದುಲ್ಲಾ ಎಂಬ ಒಂದು ಗಂಡು ಚಿತಾವನ್ನು ಸ್ನೇಹಾರ್ಥವಾಗಿ ಜವಾಹರಲಾಲ್ ನೆಹರು ಮೃಗಾಲಯಕ್ಕೆ ನೀಡಿದ್ದರು. 2020ರಲ್ಲಿ ಇದೇ ಮೃಗಾಲಯದಲ್ಲಿ ಹಿಬಾ ಚೀತಾ ಮೃತಪಟ್ಟಿತ್ತು. ಕಳೆದ ವರ್ಷ ನಮಿಬಿಯಾದಿಂದ 8 ಚೀತಾಗಳನ್ನು ತಂದು ಭಾರತದ ಕುನೊ ರಾಷ್ಟ್ರೀಯ ಉದ್ಯಾನಕ್ಕೆ ಬಿಡಲಾಗಿತ್ತು.

ಬೃಂದಾವನ್ ಡಫೋಡಿಲ್ಸ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಉದ್ಘಾಟನೆ



ಅಶ್ವಿನಿ ಪುನೀತ್ ರಾಜ್‌ಕುಮಾರ್‌ರವರು ಮೈಸೂರಿನಲ್ಲಿ ಬೃಂದಾವನ್ ಡಫೋಡಿಲ್ಸ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಶನಿವಾರ ಉದ್ಘಾಟಿಸಿದರು. (ಎಡದಿಂದ) ಕಾರ್ಪೋರೇಟರ್ ಭಾಗ್ಯ ಮಾದೇಶ್, ಶಾಸಕ ಎಲ್ ನಾಗೇಂದ್ರ, ಪ್ಲಾಸ್ಟಿಕ್ ಮತ್ತು ಕಾಸ್ಮೆಟಿಕ್ ಶಸ್ತ್ರಚಿಕಿತ್ಸಕಿ ಡಾ. ಧರಣಿ ಶಶಾಂಕ್, ಮೇಯರ್ ಶಿವಕುಮಾರ್, ಚರ್ಮರೋಗ ತಜ್ಞರಾದ ಡಾ. ಜಯಶ್ರೀ ಜಾವರ್ ಹಾಗೂ ಇತರರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಮಾ.26– ನಗರದ ಹುಣಸೂರು ರಸ್ತೆಯಲ್ಲಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಎದುರಿನಲ್ಲಿರುವ ಬೃಂದಾವನ್ ಡಫೋಡಿಲ್ಸ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ದಿವಂಗತ ನಟ ಡಾ.ಪುನೀತ್ ರಾಜಕುಮಾರ್ ಪತ್ನಿ ಶ್ರೀಮತಿ ಅಶ್ವಿನಿ ಪುನೀತ್ ರಾಜಕುಮಾರ್ ಶನಿವಾರ ಉದ್ಘಾಟಿಸಿದರು.

ಬೃಂದಾವನ್ ಆಸ್ಪತ್ರೆಯ ಸಮೂಹವು ಮೈಸೂರು ಪ್ರದೇಶದಲ್ಲಿ ಇದೇ ಮೊದಲ ಬಾರಿಗೆ ಸ್ಥಾಪಿಸಿರುವ ಈ ರೀತಿಯ ಮೊದಲನೆಯ ಕಾಸ್ಮೆಟಿಕ್ ಮತ್ತು ಸೌಂದರ್ಯ ಶಸ್ತ್ರಚಿಕಿತ್ಸೆಯ ಆಸ್ಪತ್ರೆ ಇದಾಗಿದೆ. ಪುರುಷರಿಗೆ ಹಾಗೂ ಮಹಿಳೆಯರಿಗೆ ಕೈಗೆಟುಕುವ ದರಗಳಲ್ಲಿ ಹೈಟೆಕ್ ಬಾಡಿ ಚರ್ಮ ಮತ್ತು ಕೇಶ ವಿಭಾಗಗಳಲ್ಲಿ ಇಲ್ಲಿ ಚಿಕಿತ್ಸೆ ನೀಡಲಾಗುತ್ತದೆ.

ಈ ಆಸ್ಪತ್ರೆಯ ವಿಶೇಷತೆ ಏನೆಂದರೆ, ಪ್ಲಾಸ್ಟಿಕ್ ಮತ್ತು ಕಾಸ್ಮೆಟಿಕ್ ಶಸ್ತ್ರಚಿಕಿತ್ಸೆ ತಜ್ಞ ಸಲಹೆಗಾರರಾದ ಡಾ.ಧರಣಿ ಶಶಾಂಕ್ ಹಾಗೂ ಚರ್ಮ ರೋಗ ತಜ್ಞ ಸಲಹೆಗಾರರಾದ ಡಾ.ಜಯಶ್ರೀ ಜಾವರ್ ನೇತೃತ್ವದಲ್ಲಿ ವೈದ್ಯಕೀಯ ತಂಡ ಲಭ್ಯವಿದೆ. ಈ ಆಸ್ಪತ್ರೆಯಲ್ಲಿ ಅತ್ಯಾಧುನಿಕ ತಂತ್ರಜ್ಞಾನಗಳಾದ ವಿದ್ಯುತ್ ಸಹಕಾರಿತ ಲಿಪೊಸುಕ್ಷನ್ (Liposuction), ಅಂತರರಾಷ್ಟ್ರೀಯ ಪ್ರಶಸ್ತಿ ವಿಜೇತ ಲೇಸರ್‌ಗಳು ಒಳ ಮತ್ತು ಹೊರರೋಗಗಳ ದಾಖಲಾತಿ (ಪ್ರವೇಶಾತಿ), ಎರಡು ಸುಸಜ್ಜಿತವಾದ ಶಸ್ತ್ರಚಿಕಿತ್ಸಾ ಕೊಠಡಿಗಳು, ವಿಧಾನಗಳನ್ನು (Procedures) ಮಾಡುವ ಕೊಠಡಿಗಳು ಹಾಗೂ ವಿಶೇಷವಾದ ವಾರ್ಡ್‌ಗಳ ಸೌಲಭ್ಯವಿದೆ.

ಮೇಯರ್ ಶಿವಕುಮಾರ್, ಚಾಮರಾಜ ಕ್ಷೇತ್ರದ ಶಾಸಕ ಎಲ್. ನಾಗೇಂದ್ರ, ಕಾರ್ಪೋರೇಟರ್ ಭಾಗ್ಯ ಮಾದೇಶ್, ಡಾ.ಧರಣಿ ಶಶಾಂಕ್ ಡಾ.ಜಯಶ್ರೀ ಜಾವರ್ ಮತ್ತು ಇತರರು ಸಮಾರಂಭದಲ್ಲಿ ಭಾಗವಹಿಸಿದ್ದರು.

ಮೀಸಲಾತಿ ನೀತಿಯು ಬಿಜೆಪಿ ಚುನಾವಣಾ ಅಜೆಂಡಾವಾಗಿದೆ, ಅದರ ಉದ್ದೇಶ ಈ ರಾಜ್ಯದ ಜನರನ್ನು ವಂಚಿಸುವುದು

ಜಂಟಿ ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ನಾಯಕರ ಆರೋಪ



ಬೆಂಗಳೂರು, ಮಾ.26– ಒಕ್ಕಲಿಗರಿಗೆ 2ಸಿ, ಲಿಂಗಾಯತರಿಗೆ 2ಡಿ ಮೀಸಲಾತಿ ಘೋಷಣೆ ವಿಚಾರಕ್ಕೆ ಸಂಬಂಧಿಸಿ ನಿರ್ಮಲಾನಂದನಾಥ ಶ್ರೀ, ಜಯಮೃತ್ಯುಂಜಯ ಶ್ರೀಗಳಿಗೆ 25 ಬಾರಿ ಕರೆ ಮಾಡಿ ಒಪ್ಪಿಕೊಳ್ಳಿ ಎಂದು ಒತ್ತಡ ಹಾಕಿದ್ದಾರೆ. ಸ್ವಾಮೀಜಿಗಳಿಗೆಲ್ಲ ಫೋನ್ ಮಾಡಿ ಒಪ್ಪಿಕೊಳ್ಳಿ ಅಂದರೆ ಸರೀನಾ ಲಿಂಗಾಯತರು ಶೇಕಡಾ 16, ಒಕ್ಕಲಿಗರು ಶೇಕಡಾ 12 ಮೀಸಲಾತಿ ಕೇಳಿದ್ದರು. ಅಲ್ಪಸಂಖ್ಯಾತರ ಮೀಸಲಾತಿ ಕಿತ್ತುಕೊಂಡು ಕೊಟ್ಟಿದ್ದು ಅನ್ಯಾಯ ಮಾಡಿ ದಂತಲ್ಲವೇ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಬಿಜೆಪಿ ಸರ್ಕಾರ ವಿರುದ್ಧ ಸ್ಫೋಟಕ ಆರೋಪ ಮಾಡಿದ್ದಾರೆ.

ಇಂದು ಬೆಂಗಳೂರಿನಲ್ಲಿ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸುರ್ಜೇವಾಲ, ಮಾಜಿ ಸಿಎಂ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಜಂಟಿ ಸುದ್ದಿಗೋಷ್ಠಿ ನಡೆಸಿ ಮೀಸಲಾತಿ ವಿಚಾರವಾಗಿ ಸರ್ಕಾರ ವಿರುದ್ಧ ಆಕ್ರೋಶ ಹೊರಹಾಕಿದ್ದಾರೆ. ಅಧಿಕಾರವನ್ನು ದುರುಪಯೋಗ ಮಾಡಿಕೊಂಡು ಎಲ್ಲಾ ಜನತೆಗೂ ಮೋಸ ಮಾಡಲು ಬಿಜೆಪಿ ಸರ್ಕಾರ ಹೊರಟಿದೆ, ಜನರಿಗೆ ಇದರಿಂದ ನೋವಾಗಿದೆ. ಪ್ರಜಾಪ್ರಭುತ್ವಕ್ಕೆ ಇದು ಕರಾಳ ದಿನಗಳಾಗಿವೆ. ರಾಜ್ಯ ಹಾಗೂ ಕೇಂದ್ರ ಸರ್ಕಾರ ಸೇಡಿನ ರಾಜಕಾರಣ ಮಾಡುತ್ತಿದೆ. ಮೀಸಲಾತಿಯನ್ನು 90 ದಿನಗಳಲ್ಲಿ 3 ಬಾರಿ ಬದಲಾಯಿಸಲಾಗಿದೆ. ಈ ರೀತಿ ಬದಲಾವಣೆ ಮಾಡಲು ಇದು ಆಸ್ತಿಯಾ ಸಂವಿಧಾನದ ಹಕ್ಕಿನ ಪ್ರಕಾರ ಕೊಡುವಂತೆ ನಾವೆಲ್ಲ ಕೇಳಿದ್ದೇವೆ. ಒಕ್ಕಲಿಗ ಸಮುದಾಯ ಹಾಗೂ ಲಿಂಗಾಯತರೇನು ಭಿಕ್ಷುಕರಾ? ಯಾಕೆ ಅಲ್ಪಸಂಖ್ಯಾತರ ಮೀಸಲಾತಿ ಕಿತ್ತುಕೊಂಡು ಕೊಡಬೇಕು. ಬಿಜೆಪಿಯ ಅವೈಜ್ಞಾನಿಕ ತೀರ್ಮಾನವನ್ನು ಕಾಂಗ್ರೆಸ್ ಖಂಡಿಸುತ್ತದೆ. ನಾವೂ ಅಧಿಕಾರಕ್ಕೆ ಬಂದಮೇಲೆ ಇದನ್ನು ರದ್ದು ಮಾಡಿ ಎಲ್ಲಾ ಸಮುದಾಯ ಗಳಿಗೆ ಸಮಾನವಾದ ನ್ಯಾಯ ಕೊಡುತ್ತೇವೆ ಎಂದು ಹೇಳಿದರು. ಮುಸ್ಲಿಮರಿಗೆ 1994ರಿಂದ ನೀಡಿದ್ದ ಮೀಸಲಾತಿಯನ್ನು ಯಾವ ಕಾರಣಕ್ಕೆ ಹಿಂಪಡೆಯಲಾಯಿತು, ಯಾವುದೇ ವರದಿ ಬಂದಿಲ್ಲ. ಕೋರ್ಟ್ ಆದೇಶ ಕೂಡ ಬಂದಿಲ್ಲ. ಆದರೂ ದ್ವೇಷ ರಾಜಕಾರಣ ಮಾಡಿ ಮೀಸಲಾತಿ ತೆಗೆಯಲಾಗಿದೆ ಎಂದು ಸಿದ್ದರಾಮಯ್ಯ ಆರೋಪಿಸಿದರು.

ಮುಸ್ಲಿಂ ಜನಸಂಖ್ಯೆ ಆಧಾರವಾಗಿ ಮೀಸಲಾತಿ ಸಿಕ್ಕಿರಲಿಲ್ಲ. ಕೇವಲ ಶೇಕಡಾ 4ರಷ್ಟು ಮಾತ್ರ ಇತ್ತು. ಲಿಂಗಾಯತರು, ಒಕ್ಕಲಿಗರು ಮೀಸಲಾತಿ ಹೆಚ್ಚಳ ಕೇಳಿದ್ದರು. ಮೀಸಲಾತಿ ಶೇಕಡಾ 50 ದಾಟಬಾರದು ಎಂದಿದೆ. ಸಂವಿಧಾನ ಪೀಠ ಕೊಟ್ಟ ತೀರ್ಪು ಬದಲಾವಣೆ ಆಗಬಾರದು. ಆಗಬೇಕು ಅಂತ ಇದ್ದರೆ ಸಂಸತ್ತಿನಲ್ಲಿ ಬದಲಾವಣೆಯಾಗಬೇಕು. 9ನೇ ಶೆಡ್ಯೂಲ್ ಗೆ ಸೇರಿಸಿದಾಗ ಮಾತ್ರ ಮೀಸಲಾತಿ ಹೆಚ್ಚಳಕ್ಕೆ ಬೆಲೆ ಸಿಗುತ್ತದೆ. ಅದನ್ನು ಮಾಡದೇ ಮೀಸಲಾತಿ ಹೆಚ್ಚಳ ಮಾಡಿದ್ದಾರೆ. ಈಗ ಅಲ್ಪಸಂಖ್ಯಾತರನ್ನು ತೆಗೆದು ಹಾಕಿ ರಾಜಕೀಯ ದ್ರೋಹ ಮಾಡುತ್ತಿದ್ದಾರೆ. ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಮುಸ್ಲಿಮರನ್ನು ಸೇರಿಸಿ ಎಂದಿದೆಯಾ ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

ಏ.5ರಿಂದ 57ನೇ ವರ್ಷದ ರಾಮೋತ್ಸವ

ಮೈಸೂರು, ಮಾ.26– ಮೈಸೂರಿನ ಜಯನಗರದಲ್ಲಿರುವ ಶ್ರೀರಾಮ ಮಂದಿರದಲ್ಲಿ 57ನೇ ವರ್ಷದ ರಾಮೋತ್ಸವದ ಅಂಗವಾಗಿ ಸೀತಾಕಲ್ಯಾಣ, ಪಟ್ಟಾಭಿಷೇಕ, ಶ್ರೀ ಆದಿತ್ಯಾದಿ ನವಗ್ರಹಗಳ ವಾರ್ಷಿಕೋತ್ಸವ, ಹನುಮಂತೋತ್ಸವ ಹಾಗೂ ವಸಂತೋತ್ಸವ ಕಾರ್ಯಕ್ರಮವನ್ನು ಏ.5 ರಿಂದ ಏ.16ರವರೆಗೆ ಏರ್ಪಡಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಏ.5ರಂದು ಸಂಜೆ 6.30ಕ್ಕೆ ಶ್ರೀರಾಮಕೃಷ್ಣ ಆಶ್ರಮದ ಯತಿಗಳಾದ ಶ್ರೀಸ್ವಾಮಿ ಯುಕ್ತೇಶಾನಂದಜಿ ಮಹಾರಾಜ್ ರಾಮೋತ್ಸವವನ್ನು ಉದ್ಘಾಟಿಸಲಿದ್ದಾರೆ. ಏ.6ರಂದು ಬೆಳಗ್ಗೆ ಮಹಾಲಕ್ಷ್ಮಿ ಸಮೇತ ಶ್ರೀಸತ್ಯನಾರಾಯಣ ಹೋಮ, ಸಂಜೆ 6.30ಕ್ಕೆ ವಿದ್ವಾನ್ ಮಂದನ್ ಕುಮಾರ್ ಮತ್ತು ವೃಂದದವರಿಂದ ವೇಣುವಾದನ, ಏ.7ರಂದು ಬೆಳಗ್ಗೆ ಚಂಡಿ ಹೋಮ, ಸಂಜೆ ಶ್ರೀಸಾಗರ ಚಕ್ರವರ್ತಿ ಅವರಿಂದ ಭಕ್ತಿಗಾಯನ ಸಮರ್ಪಣೆ, ಏ.8ರಂದು ಬೆಳಗ್ಗೆ ಶ್ರೀಆದಿತ್ಯಾದಿ ನವಗ್ರಹ ಹೋಮ ನಾಂದಿ, ಸಂಜೆ ವರಪೂಜೆ, ಏ.9ರಂದು ಬೆಳಗ್ಗೆ ಶ್ರೀಕಾಶಿಯಾತ್ರೆ ಪೂರ್ವಕ ಸೀತಾಕಲ್ಯಾಣ, ಸಂಜೆ 6.30ಕ್ಕೆ ವಿದ್ವಾನ್ ಮೈಸೂರು ಎನ್.ಶ್ರೀನಾಥ್ ಅವರಿಂದ ಸಂಗೀತ, ಏ.10ರಂದು ಬೆಳಗ್ಗೆ ಶ್ರೀರುದ್ರ ಹೋಮ, ಸಂಜೆ ವಿದೂಷಿ ಮಹತಿ ರಘುರಾಂ ಕರ್ನಾಟಕ ಶಾಸ್ತ್ರೀಯ ಸಂಗೀತ, ಏ.11ರಂದು ಬೆಳಗ್ಗೆ ಶ್ರೀಸುಬ್ರಹ್ಮಣ್ಯ ಹೋಮ, ಸಂಜೆ ವಿದೂಷಿ ಶ್ರೀಮತಿ ಕಾಂಚನಾಶ್ರೀ ಅವರಿಂದ ಭರತನಾಟ್ಯ, ಏ.12ರಂದು ಬೆಳಗ್ಗೆ ಶ್ರೀರಾಮ ತಾರಕ ಹೋಮ, ಸಂಜೆ ವಿದ್ವಾನ್ ಡಾ.ರಾ.ಸ.ನಂದಕುಮಾರ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಏ.13ರಂದು ಬೆಳಗ್ಗೆ ಶ್ರೀ ದತ್ತ ದಕ್ಷಿಣಾಮೂರ್ತಿ ಹೋಮ, ಸಂಜೆ ವಿದ್ವಾನ್ ಹರೀಶ್ ಪಾಂಡವ ಅವರಿಂದ ಸ್ಯಾಕ್ಸೋಫೋನ್ ವಾದನ, ಏ.14ರಂದು ಬೆಳಗ್ಗೆ ಶ್ರೀಲಲಿತಾ ಹೋಮ, ಸಂಜೆ ಶ್ರೀಸುದರ್ಶನ ಹೋಮ, ಏ.15ರಂದು ಬೆಳಗ್ಗೆ ಧನ್ವಂತರಿ ಹೋಮ, ಸಂಜೆ ಕಳಸ ಸ್ಥಾಪನೆ, ಉದಕ ಶಾಂತಿ ಶ್ರೀ ತ್ಯಾಗರಾಜ ಸಂಗೀತ ಸಭಾ ವತಿಯಿಂದ ಸಂಗೀತ, ಏ.16ರಂದು ಬೆಳಗ್ಗೆ ಶ್ರೀರಾಮಚಂದ್ರಸ್ವಾಮಿಯವರ ಪಟ್ಟಾಭಿಷೇಕ, ಸಂಜೆ ಹನುಮಂತೋತ್ಸವ ನಡೆಯಲಿದೆ ಎಂದು ದೇವಾಲಯ ಪ್ರಕಟಣೆ ತಿಳಿಸಿದೆ.

2 ತಿಂಗಳಿಗೊಮ್ಮೆ ಸನ್ನಡತೆ ಅರ್ಜಿ ಪರಿಶೀಲಿಸಲು ಹೈಕೋರ್ಟ್ ಆದೇಶ



ಬೆಂಗಳೂರು, ಮಾ.26– 'ಜೀವಾವಧಿ ಶಿಕ್ಷೆಗೆ ಗುರಿಯಾದ ಅಪರಾಧಿಗಳನ್ನು ಸನ್ನಡತೆ ಆಧಾರದಲ್ಲಿ ಬಿಡುಗಡೆಗೆ ಶಿಫಾರಸು ಮಾಡುವ ಸಮಿತಿಯು ಎರಡು ತಿಂಗಳಿಗೊಮ್ಮೆ ಸಭೆ ನಡೆಸಬೇಕು. ಈ ಸಂಬಂಧ ರಾಜ್ಯ ಸರ್ಕಾರವು ಸಮಿತಿಗೆ ಸೂಕ್ತ ನಿರ್ದೇಶನ ನೀಡಬೇಕು' ಎಂದು ಹೈಕೋರ್ಟ್ ಆದೇಶಿಸಿದೆ.

ಕೊಲೆ ಪ್ರಕರಣವೊಂದರಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿ ಬೆಂಗಳೂರಿನ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ 17 ವರ್ಷಗಳಿಂದ ಶಿಕ್ಷೆ ಅನುಭವಿಸುತ್ತಿರುವ ತುಮಕೂರಿನ ಓಂಕಾರ ಮೂರ್ತಿ ಎಂಬುವರು ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದ್ದು; ಅರ್ಜಿದಾರರನ್ನು ಪೆರೋಲ್ ಮೇಲೆ ಬಿಡುಗಡೆ ಮಾಡುವಂತೆ ಸಕ್ಷಮ ಪ್ರಾಧಿಕಾರಕ್ಕೆ ನಿರ್ದೇಶಿಸಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಾದ ಮಂಡಿಸಿದ್ದ ಕೆ.ಬಿ.ಮೋನೇಶ್ ಕುಮಾರ್, 'ಜೀವಾವಧಿ ಅಪರಾಧಿಗಳ ಬಿಡುಗಡೆ ಸಮಿತಿ' ಎರಡು ತಿಂಗಳಿಗೊಮ್ಮೆ ಸಭೆ ನಡೆಸಬೇಕು. ಆದರೆ, ಕಳೆದ ಆರು ತಿಂಗಳಿಂದ ಸಮಿತಿಯು ಸಭೆ ನಡೆಸಿಲ್ಲ. ಹೀಗಾಗಿ ಅರ್ಜಿದಾರರ ಮನವಿಪತ್ರವನ್ನು ಸಮಿತಿಯ ಮುಂದಿರಿಸಲು ಸಾಧ್ಯವಾಗಿಲ್ಲ' ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದಿದ್ದರು.

ಇದಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದ ನ್ಯಾಯಪೀಠ, 'ಸಮಿತಿಯು ವಿಳಂಬ ಧೋರಣೆ ಅನುಸರಿಸುತ್ತಿರುವುದು ಸಲ್ಲದು. ಸಮಿತಿಯು, 2023ರ ಏಪ್ರಿಲ್ 10ರೊಳಗೆ ಸಭೆ ನಡೆಸಬೇಕು. ಅರ್ಜಿದಾರರ ಮನವಿ ಪತ್ರ ಮತ್ತು ಕ್ಷಮದಾನದ ಮೇಲೆ ಬಿಡುಗಡೆಗೆ ಕೋರಿದ ಅರ್ಜಿಗಳನ್ನು ಪರಿಗಣಿಸಬೇಕು' ಎಂದು ನಿರ್ದೇಶಿಸಿದೆ. 'ಸುಪ್ರೀಂಕೋರ್ಟ್ ನಿರ್ದೇಶನದಂತೆ ಸಮಿತಿ ಎರಡು ತಿಂಗಳಿಗೆ ಒಂದು ಮತ್ತು ವರ್ಷಕ್ಕೆ ಆರು ಬಾರಿ ಸಭೆ ನಡೆಸಬೇಕು. ಈ ಕುರಿತು ರಾಜ್ಯ ಸರ್ಕಾರ ಸೂಕ್ತ ನಿರ್ದೇಶನ ನೀಡಬೇಕು' ಎಂದು ಸೂಚಿಸಿ ಅರ್ಜಿ ವಿಲೇವಾರಿ ಮಾಡಿದೆ.